ಶೂದ್ರ

ಕಲ್ಲಿನೊಳಗೆ ಮುಳ್ಳು
ಮುಳ್ಳಿನೊಳಗೆ ಜೊಳ್ಳು
ಎಳ್ಳು ಕೋಲಿಯ ಕದ್ದು
ಕಳ್ಳ ಕಾಡಿನೊಳೋದದ್ದೇನು ಸೋಜಿಗವೇ — ಶರೀಫ

ಶೇಷಾದ್ರಿ ಗವಾಯಿಯವರು ನಮ್ಮ ಸಂಗೀತ ಕ್ಷೇತ್ರದ ಖುಷಿ ಇದ್ದ ಹಾಗೆ. ಅವರು ಹಾರ್ಮೋನಿಯಂ ಮೇಲೆ ಬೆರಳಾಡಿಸಿದರೆ ನಮ್ಮ ನರನಾಡಿಗಳು ಜಡತ್ವದಿಂದ ಬಿಡುಗಡೆಯಾಗುತ್ತವೆ.

ಈ ಸಂಚಿಕೆಯಲ್ಲಿ :

ಐಸೆನ್‌ಸ್ಟೈನ್ – ಜಸವಂತ ಜಾಧವ್ – ಕ.ವೆಂ. ರಾಜಗೋಪಾಲ – ಸುಂದರ ನಾಡಕರ್ಣಿ – ವಿನಾಯಕ ಗ. ಹೆಗಡೆ – ಚಂದ್ರಶೇಖರ ತಾಳ್ಯ – ಪ್ರಹ್ಲಾದ ಅಗಸನಕಟ್ಟೆ–ಟಿ. ಆರ್.ಚಂದ್ರಶೇಖರ–ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು – ಡಾ॥ ಕರೀಗೌಡ ಬೀಚನಹಳ್ಳಿ – ಹಮೀದ್ ಮಂಜೇಶ್ವರ್ ಅಲ್ಲಮಪ್ರಭು ಬೆಟ್ಟದೂರು-ಕುಂದರನಾಡ ಪಾಟೀಲ- ಈ. ಚಂದ್ರ ತಾಳೀಕಟ್ಟೆ ರಾಮಚಂದ್ರ ಶರ್ಮ–ಶಾಲಿನಿ ಶ್ರೀನಿವಾಸ – ಪುಸ್ತಕ ವಿಮರ್ಶೆ : ಡಿ. ಆರ್. ನಾಗರಾಜ್ – ಕನಸಿಗೊಂದು ಕಣ್ಣು – ಒಳನೋಟ – ಬಾಪು ಹೆದ್ದೂರಶೆಟ್ಟಿ

ಬೆಲೆ : 5-00 ರೂ. ದೂರವಾಣಿ : 643337

ಮುಕ್ತಚರ್ಚೆಗಾಗಿ 'ಶೂದ್ರ' ತಿಂಗಳ ಪತ್ರಿಕೆ

ಸಂಚಿಕೆ : 4 ಅಕ್ಟೋಬರ್ 1991 ಸಂಪುಟ : 18

ಸಹಾಯಕ ಸಂಪಾದಕರು : ನಿರ್ಮಲಾ ರೆಡ್ಡಿ – ಉತ್ತನೂರು ರಾಜಮ್ಮ ವಿ. ಶೆಟ್ಟಿ
ಕೆ. ಎನ್. ಅರುಣ್ – ಸ. ರಘುನಾಥ್
ಜರಗನಹಳ್ಳಿ ಶಿವಶಂಕರ್–ಎಲ್. ಎನ್. ಮುಕುಂದರಾಜ್

ಶೂದ್ರಕ್ಕೆ ಚಂದಾ ಕಳಿಸಿ. ಆಜೀವ ಚಂದಾ ಬಾಬ್ತು ಕಂತುಗಳಲ್ಲಿ ಕೊಡುವವರು ಸ್ವಲ್ಪ ಜಾಗ್ರತೆ ಕೊಟ್ಟರೆ ಒಳಿತು. ಚಂದಾದ ರೀತಿಯಲ್ಲಿ ನಾಲ್ಕೈದು ವರ್ಷ ಕೊಟ್ಟರೆ ನಿಜವಾಗಿಯೂ ತೊಂದರೆಯಾಗುತ್ತದೆ. ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾ ವನ್ನು ಎಂ. ಓ. ಮೂಲಕ ಕಳುಹಿಸುವವರು ದಯವಿಟ್ಟು ಕೌಂಟರ್ ಭಾಗದಲ್ಲಿ ವಿಳಾಸ ಬರೆಯಿರಿ. ಲೇಖನ ಮತ್ತು ಕವನ ಕಳುಹಿಸುವವರು ರಿಪ್ಲೈ ಕಾರ್ಡಿಡಿ. ಚೆಕ್ ಮೂಲಕ ಕಳುಹಿಸುವವರು 10 ರೂ. ಹೆಚ್ಚುವರಿ ತುಂಬಿ.

ಹಿಂದೆ ಶೂದ್ರಕ್ಕೆ 200 ರೂ.ಗಳ ಆಜೀವ ಚಂದಾ ಕೊಟ್ಟಿದ್ದಾರೆ. ಅದರಲ್ಲೂ ಬಹುಪಾಲು ಮಂದಿ ಕಂತುಗಳಲ್ಲಿ. ಈಗ ಆಜೀವ ಚಂದಾ 400/– ರೂ. ಆಗಿದೆ ಕಳೆದ ವರ್ಷದಿಂದ. ತಿಂಗಳ ಪತ್ರಿಕೆಯಾಗಿ ವರ್ಷಕ್ಕೆ 800ಕ್ಕೂ ಹೆಚ್ಚು ಪುಟಗಳನ್ನು ಕೊಡುತ್ತಿದೆ. ಅನ್ಯಥಾ ಭಾವಿಸದೆ ಮಿಕ್ಕ ಹಣವನ್ನು ಕೊಟ್ಟರೆ ಅನುಕೂಲವಾದೀತು. — ಸಂ.

ನೀವು ಕಳಿಸುವ ಚಂದಾ ಶೂದ್ರದ ಬೆಳವಣಿಗೆಯ ಸಂಕೇತ

ವಾರ್ಷಿಕ ಚಂದಾ : 50-00 ರೂ. ಪುಸ್ತಕ ಭಂಡಾರಗಳಿಗೆ 60-00 ರೂ.
ಆಜೀವ ಚಂದಾ : 400-00 ರೂ. (ನಾಲ್ಕು ಕಂತುಗಳಲ್ಲಿ) 450–00 ರೂ.

ಶೂದ್ರ ಶ್ರೀನಿವಾಸ್, ನಂ. 1, 3 ನೇ ಕ್ರಾಸ್, ಬಾಲಾಜಿನಗರ, ಸುದ್ದುಗುಂಟೆಪಾಳ್ಯ
ಡಿ. ಆರ್. ಕಾಲೇಜ್ ಅಂಚೆ, ಬೆಂಗಳೂರು-560 029

ಚಾರ್ಲಿ ಎಂಬ ಮಗು

— ಐಸೆನ್‌ಸ್ಟೈನ್

ಚಾರ್ಲಿ ಎಂಬ ಮಗು (Charlie the Kid) : ಚಾಪ್ಲಿನ್‌ನ ಹೆಸರು ಮತ್ತು ಅವನ ಅತ್ಯಂತ ಜನಪ್ರಿಯ ಚಿತ್ರವೊಂದರ ಶೀರ್ಷಿಕೆ–ಇವೆರಡರ ಜೋಡಣೆ, ಅವನನ್ನು ಗುರುತಿಸುವ ಅತ್ಯುತ್ತಮ ರೀತಿಯೆಂದು ನನಗನಿಸುತ್ತದೆ. ವಿಲಿಯಮ್ ದಿ ಕಾಂಕರರ್, ಇವಾನ್ ದಿ ಟೆರಿಬಲ್‌ರ ಗುಣವೈಶಿಷ್ಟ್ಯದ ಬಗ್ಗೆ ಅವರ ಬಿರುದುಗಳು ಒಳನೋಟ ಕೊಡುವಂತೆ, ಚಾಪ್ಲಿನ್‌ನ ವ್ಯಕ್ತಿತ್ವದ ಬಗ್ಗೆ 'ಮಗು' ಎಂಬ ನಾಮಾಂಕಿತ ಅಷ್ಟೇ ಅರ್ಥಪೂರ್ಣ.

ಚಾಪ್ಲಿನ್‌ನ ಬಗ್ಗೆ ಯೋಚಿಸುವಾಗೆಲ್ಲ ನನ್ನನ್ನು ರೋಮಾಂಚನಗೊಳಿಸುವುದು, ನಾನು ಅರ್ಥಮಾಡಿಕೊಳ್ಳಬಯಸುವುದು ಅವನ ತಂತ್ರ, ನಿರ್ದೇಶನ, ಚಮತ್ಕಾರ–ಇವಾವುವೂ ಅಲ್ಲ. ನಾನು ಮೊತ್ತಮೊದಲಾಗಿ ಭೇದಿಸಬಯಸುವುದು, ವಸ್ತುಸ್ಥಿತಿಯನ್ನು ಅಂಥ ವಿಲಕ್ಷಣ ರೀತಿಯಲ್ಲಿ ಗ್ರಹಿಸುವ, ಅದಕ್ಕೆ ಅಂಥ ವಿಲಕ್ಷಣ ಪ್ರತೀಕಗಳೊಂದಿಗೆ ಪ್ರತಿಕ್ರಿಯಿಸುವ ಆ ವಿಲಕ್ಷಣ ಯೋಚನಾವಿಧಾನವನ್ನು ; ಒಂದು ಜೀವನ ದೃಷ್ಟಿಯು ರೂಪ ತಳೆಯುವ ಮುನ್ನ, ಜೀವನವನ್ನು ಅವಲೋಕಿಸುವ ರೀತಿಯಲ್ಲೇ ಹುದುಗಿರುವ ಆ ಚಿಂತನಾಕ್ರಮವನ್ನು. ನಾನು ಇಲ್ಲಿ ಚರ್ಚಿಸಬಯಸುವುದು ಚಾಪ್ಲಿನ್‌ನ ಅನನ್ಯ ಹಾಸ್ಯದ ತಳಪಾಯವಾಗಿರುವ, ಅವನು ಜೀವನವನ್ನು ಗ್ರಹಿಸುವ ವಿಧಾನವನ್ನು.

* * * *

ಮೊಲದ ಕಣ್ಣುಗಳ ದೃಷ್ಟಿಕ್ಷೇತ್ರಗಳು ಅದರ ತಲೆಯ ಹಿಂದೆ ಸಂಧಿಸುವುದರಿಂದ ಅದು ತನ್ನ ಹಿಂದಿರುವುದನ್ನು ಮಾತ್ರ ನೋಡಬಲ್ಲದು ; ಮುಂಭಾಗದಲ್ಲಿರುವುದನ್ನು ನೋಡುವ ಶಕ್ತಿಯಿಲ್ಲದಿರುವ ಈ ಜೀವಿ ಎಂದೂ ಎಲ್ಲಿಯಾದರೂ ಢಿಕ್ಕಿ ಹೊಡೆಯುತ್ತಲೇ ಇರುತ್ತದೆ. ಸ್ವತಃ ಬೇಟೆಯಾಡದೆ, ತಾನೇ ಬೇಟೆಗೆ ಬಲಿಯಾಗುವ ಸಾಧ್ಯತೆ ಜಾಸ್ತಿ ಇರುವ ಈ ಪ್ರಾಣಿಯ ದೃಷ್ಟಿವಿಶೇಷ ಪಲಾಯನಗೈಯಲು ಅತ್ಯಂತ ಸಹಾಯಕವಾಗಿದೆ. ಹಾಗಾಗಿ ಮೊಲ ಜಗತ್ತನ್ನು ಕಾಣುವ ರೀತಿ ನಮ್ಮದಕ್ಕಿಂತ ಭಿನ್ನ. ಕುರಿಯ ಕಣ್ಣುಗಳು ಎಲ್ಲೂ ಸಂಧಿಸದೇ ಇರುವುದರಿಂದ ಅದು ಕಾಣುವುದು ಎರಡು ಜಗತ್ತು–ಎಂದೂ ಒಂದುಗೂಡದ ಬಲಪ್ರಪಂಚ ಮತ್ತು ಎಡಪ್ರಪಂಚ.

ಜಸವಂತ ಜಾಧವ್, ಇಂಗ್ಲೀಷ್ ಅಧ್ಯಾಪಕ, ಎಲ್. ಬಿ. ಕಾಲೇಜ್, ಸಾಗರ, ಶಿವಮೊಗ್ಗ ಜಿಲ್ಲೆ.

ವಿಭಿನ್ನ ರೀತಿಯ ದೃಷ್ಟಿವಿಧಾನಗಳು ವಿಭಿನ್ನ ಚಿತ್ರ ಮತ್ತು ಬಿಂಬಗಳಲ್ಲಿ ಪರ್ಯವಸಾನವಾಗುತ್ತವೆ. ಮೋಲ–ಕುರಿಯನ್ನು ಬಿಟ್ಟು, ಅಸಂಖ್ಯ ಸಾಮಾಜಿಕ ಶಕ್ತಿಗಳಿಂದ ರೂಪಿತವಾಗುವ ಮಾನವನ ವಿಷಯಕ್ಕೆ ಬಂದರೆ, ಜೀವನವನ್ನು ಗ್ರಹಿಸುವ ರೀತಿ ಜೀವನದೃಷ್ಟಿಯಾಗಿ ಪರಿಣಮಿಸುವ ಉನ್ನತ ಪ್ರಕ್ರಿಯೆಯಲ್ಲೂ ನಾವು ಈ ದೃಷ್ಟಿ ಕ್ಷೇತ್ರದ ಮಹತ್ವವನ್ನು ನೋಡುತ್ತೇವೆ.

ಚಾಪ್ಲಿನ್‌ನ ಕಣ್ಣುಗಳು—ಅವನ ಮನಸ್ಸಿನ ಕಣ್ಣುಗಳು – ನೋಡುವ ರೀತಿ ಯಾವುದು ? ವಿಷಯ ಯಾವುದು? ಅವನ ವಿಶಿಷ್ಟ ಕಣ್ಣುಗಳು ಕಾಣುವುದು ಏನನ್ನು ? ಚಾಪ್ಲಿನ್ ಜೀವನವನ್ನು ವೀಕ್ಷಿಸುವುದು ಯಾರ ಕಣ್ಣುಗಳಿಂದ ?

ಇಳಿ ವಯಸ್ಸಿನಲ್ಲೂ ಚಾಪ್ಲಿನ್ ಜೀವನದ ಬಗ್ಗೆ ಮಗುವಿನ ಮನೋಭಾವವನ್ನು, ಸ್ವಯಂಸ್ಫೂರ್ತ ಗ್ರಹಣಾವಿಧಾನವನ್ನು ಉಳಿಸಿಕೊಂಡಿದ್ದಾನೆ. ಬೇರೆಯವರು ಭೀಭತ್ಸವೆಂದು ಕಾಣುವುದನ್ನು ತಮಾಷೆಯ ವಿಷಯವೆಂದು ಪರಿಗಣಿಸುವ ಶಕ್ತಿ ಅವನಿಗೆ ಲಭಿಸುವುದು ಆತ 'ನೀತಿಶೃಂಖಲೆ'ಗಳಿಂದ ಸ್ವತಂತ್ರನಾಗಿರುವುದರಿಂದಲೇ.

ಓರ್ವ ವಯಸ್ಕನಲ್ಲಿ ಇಂಥ ಗುಣ ಕಂಡುಬಂದರೆ ಅದನ್ನು 'ಶಿಶುಪ್ರಾಯತೆ' ಎನ್ನುತ್ತಾರೆ. ಚಾಪ್ಲಿನ್‌ನ ಹಾಸ್ಯಕ್ಕೆ ಈ ಶಿಶುಪ್ರಾಯತೆಯೇ ತಳಹದಿ. ಶಿಶುಪ್ರಾಯತೆಯ ಮುಖ್ಯ ಲಕ್ಷಣವೆಂದರೆ ವಾಸ್ತವದಿಂದ ಪಲಾಯನಗೈಯುವುದು. ಇಡೀ ಭೂಮಂಡಲವನ್ನೇ ಆವರಿಸಿರುವ ಇಂದಿನ 'ನಾಗರಿಕತೆ'ಯಿಂದ ಪಲಾಯನ ಮಾಡುವುದು ಭೌಗೋಳಿಕವಾಗಿ ಅಸಾಧ್ಯ. ಉಳಿದಿರುವ ಒಂದೇ ಮಾರ್ಗವೆಂದರೆ ಮಾನವ ವಿಕಾಸಪಥದ ವಿರುದ್ಧ ಗತಿಯಲ್ಲಿ ಜಾರುತ್ತ ಹೋಗಿ, ಶೈಶವದ 'ಸುವರ್ಣಯುಗ'ದ ಭಾವಕಲ್ಪನೆಗಳಿಗೆ ಒಡ್ಡಿಕೊಳ್ಳುವುದು; ಬಾಲಿಶ ಭಾವಗಳ ವೈಯಕ್ತಿಕ ಲೋಕವೊಂದಕ್ಕೆ ಹಿಂಚಲಿಸುವುದು. ಜೀವನ ವಿಧಾನದ ಮೇಲೆ ಬಿಗಿಯಾದ ಆದೇಶಗಳನ್ನು ಹೇರುವ ಅತಿ ನಿರ್ಬಂಧಿತ ಸಮಾಜದಲ್ಲಿ, ಎಲ್ಲ ಕಟ್ಟುಪಾಡುಗಳನ್ನು ಹರಿದೊಗೆದು ಪಲಾಯನ ಗೈಯುವ ಒತ್ತಡ ಅತ್ಯಂತ ತೀವ್ರವಾಗಿ ಕಂಡುಬರುತ್ತದೆ.

ಅಮೆರಿಕ ಎಂದಾಕ್ಷಣ ನನ್ನ ನೆನಪಿಗೆ ಬರುವುದು ಎರಡು ವಿಷಯಗಳು : ಡ್ರೈವಿಂಗ್ ಲೈಸೆನ್ಸ್ ಪಡೆಯಲು ಇರುವ ಪರೀಕ್ಷೆ ಮತ್ತು ನಾನು ಪತ್ರಿಕೆಯೊಂದರಲ್ಲಿ ಓದಿದ ಒಂದು ಕಾಲೇಜು ಪರೀಕ್ಷೆಯ ಕಥೆ–ಎರಡೂ ಪರೀಕ್ಷೆಗಳೆ. ಡ್ರೈವಿಂಗ್ ಲೈಸೆನ್ಸ್ ಪರೀಕ್ಷೆಯಲ್ಲಿ ನೀವು ಒಂದು ಪ್ರಶ್ನೆಪತ್ರಿಕೆಯನ್ನು ಉತ್ತರಿಸಬೇಕು. ಪ್ರಶ್ನೆಗಳ ರೂಪ ನಿಮ್ಮಿಂದ ನಿರೀಕ್ಷಿಸುವುದು 'ಹೌದು' ಅಥವಾ 'ಇಲ್ಲ' ಎಂಬ ಉತ್ತರವನ್ನಷ್ಟೇ. ಪ್ರಶ್ನೆಯೊಂದರ ರೂಪ 'ಶಾಲೆಯೊಂದರ ಮುಂದೆ ಹಾದು ಹೋಗುವಾಗ ನಿಮ್ಮ ಗರಿಷ್ಠವೇಗ ಎಷ್ಟಿರಬೇಕು ?' ಎಂದಿರುವುದಿಲ್ಲ ; 'ಶಾಲೆಯೊಂದರ ಮುಂದೆ ಹಾದು

ಹೋಗುವಾಗ ನೀವು ಇಪ್ಪತ್ತು ಮೈಲಿಗಿಂತ ಹೆಚ್ಚಿನ ವೇಗದಲ್ಲಿ ಚಲಿಸುವಿರ ?' ಎಂದಿರುತ್ತದೆ. ಇದಕ್ಕೆ ನಿರೀಕ್ಷಿತ ಉತ್ತರ—'ಇಲ್ಲ'. ಇನ್ನೊಂದು ಪ್ರಶ್ನೆ—'ನೀವು ಹೆದ್ದಾರಿಯನ್ನು ತಲುಪುವ ಕಡೆ ವೇಗವನ್ನು ಕಡಿಮೆ ಮಾಡುತ್ತೀರ ?' ನಿರೀಕ್ಷಿತ ಉತ್ತರ—'ಹೌದು'. ಈ ರೀತಿಯ ಪರೀಕ್ಷಾವ್ಯವಸ್ಥೆ ಅಭ್ಯರ್ಥಿಯ ಸ್ವಂತ ಆಲೋಚನೆ-ನಿರ್ಧಾರಗಳ ಮಾಪನವಾಗದೆ ಕೇವಲ 'ಹೌದು' ಅಥವಾ 'ಇಲ್ಲ' ಉತ್ತರ ಕೊಡುವ ಅಭ್ಯಾಸಗತ ಉರುಹೊಡೆಯುವ ಕ್ರಿಯೆಯಾಗಿಬಿಡುತ್ತದೆ. ಇಂಥ ಪ್ರಶ್ನೆಪತ್ರಿಕೆಗಳ ಮೌಲ್ಯಮಾಪನವೂ ಅಷ್ಟೇ ಯಾಂತ್ರೀಕೃತ. 'ಹೌದು' 'ಇಲ್ಲ'ಗಳ ಜಾಗದಲ್ಲಿ ರಂಧ್ರಗಳಿರುವ ಹಾಳೆಗಳೆರಡನ್ನು ಪ್ರಶ್ನೆಪತ್ರಿಕೆಯ ಮೇಲಿಟ್ಟು ತಾಳೆ ನೋಡಲಾಗುತ್ತದೆ. ಇಂಥದೇ ಯಾಂತ್ರೀಕೃತ ಬೌದ್ಧಿಕ ಕ್ರಿಯೆ ಕಾಲೇಜು ಪರೀಕ್ಷೆಯೊಂದರಲ್ಲಿ ಇಣುಕಿದಾಗ-ಪರೀಕ್ಷಾರ್ಥಿಗಳೆಲ್ಲರೂ ಉಸಿರು ಬಿಗಿಹಿಡಿದು ಮೂಲೆಯಲ್ಲಿ ಅಂಧ ವಿದ್ಯಾರ್ಥಿಯೊಬ್ಬ ಉತ್ತರಗಳನ್ನು ಟೈಪ್ ಮಾಡುವುದನ್ನು ಆಲಿಸುತ್ತಿದ್ದಾರೆ. ಮೊದಲು 'ಟೈಪ್ ಟೈಪ್'; ನಂತರ 'ಟೈಪ್ ಟೈಪ್ ಟೈಪ್'. ಇಡೀ ವಿದ್ಯಾರ್ಥಿಸಮೂಹ ಟೈಪ್‌ರೈಟರ್‌ನ ಸದ್ದು ಅನುಕರಿಸುತ್ತ ಅವಸರವಸರವಾಗಿ ಬರೆಯಲಾರಂಭಿಸುತ್ತದೆ: ಮೊದಲ ಉತ್ತರ 'NO'; ಎರಡನೆಯದು ' YES '!

ಅಮೆರಿಕದ ಜೀವನವಿಧಾನದ ಇನ್ನೊಂದು ಉದಾಹರಣೆಯನ್ನು ನೋಡೋಣ. ಅಲ್ಲಿ ಪ್ರತಿ ಸೇಲ್ಸ್‌ಮನ್‌ಗೂ ಕಲಿಸಲ್ಪಡುವ Yes-Response Techniqueನ ಒಂದು ಮಾದರಿಯಿದು: ಓರ್ವ ಸೇಲ್ಸ್‌ಮನ್ ಕರೆಗಂಟೆ ಒತ್ತುತ್ತಾನೆ; ಮನೆಯೊಡತಿ ಸಿಡುಕುಮುಖದೊಂದಿಗೆ ಬಾಗಿಲು ತೆರೆಯುತ್ತಾಳೆ; ಸೇಲ್ಸ್‌ಮನ್ ವಂದಿಸುತ್ತ—'ತಾವು ಇಲಸ್ಟ್ರೇಟಡ್ ಹಿಸ್ಟರಿ ಆಫ್ ದಿ ವರ್ಲ್ಡ್ ಪುಸ್ತಕವನ್ನು ಕೊಳ್ಳಲು ಇಚ್ಛಿಸುತ್ತೀರೇ ?'; 'ಇಲ್ಲ'—ಬಾಗಿಲು ಧಪ್ಪೆಂದು ಮುಚ್ಚಿಕೊಳ್ಳುತ್ತದೆ.

ಈ ಅನುಭವದ ನೀತಿಯೇನೆಂದರೆ—'ಇಲ್ಲ' ಎನ್ನುವುದು ಬದಲಾಯಿಸಲು ಅತ್ಯಂತ ಕಷ್ಟವಾದ ಉತ್ತರ. ಒಬ್ಬ ವ್ಯಕ್ತಿ 'ಇಲ್ಲ' ಎಂದಮೇಲೆ ಅದನ್ನು 'ಇಲ್ಲ' ಎದೇ ಸ್ಥಿರವಾಗಿ ಉಳಿಸಿಕೊಳ್ಳಲು ಅವನ ಆತ್ಮಾಭಿಮಾನ ಒತ್ತಡ ಹೇರುತ್ತಿರುತ್ತದೆ. ಹಾಗುದದ್ದು ತಪ್ಪಾಯಿತೇನೋ ಎಂದು ನಂತರ ಅನ್ನಿಸಿದರೂ ಅದನ್ನು ಬದಲಾಯಿಸಲು ಅವನ ಪ್ರತಿಷ್ಠೆ ಅಡ್ಡಬರುತ್ತಿರುತ್ತದೆ. ಆದ್ದರಿಂದ ಅವನ ಉತ್ತರಸರಣಿಯನ್ನು ಇತ್ಯಾತ್ಮಕ ದಿಕ್ಕಿನೆಡೆಗೆ ಒಯ್ಯುವುದು ಅತಿ ಮುಖ್ಯ.

ಇನ್ನೊಬ್ಬ ಸೇಲ್ಸ್‌ಮನ್—ಈತ ನಿಜಕ್ಕೂ ಪ್ರಬುದ್ಧ—ಕರೆಗಂಟೆ ಒತ್ತುತ್ತಾನೆ; ಅದೇ ಸಿಡುಕುಮುಖದ ಮನೆಯೊಡತಿ ಬಾಗಿಲು ತೆಗೆಯುತ್ತಾಳೆ ; ಸೇಲ್ಸ್‌ಮನ್ ವಂದಿಸುತ್ತಾ— 'ತಾವು ಶ್ರೀಮಂತಿ ಆರ್ಮ್‌ಸ್ಟ್ರಾಂಗ್ ಅಲ್ಲವೇ ?' ; ಉರಿಯುವ

ಮುಖದಿಂದ – 'ಹೌದು' ; 'ಶ್ರೀಮಂತಿ ಆರ್ಮ್‌ಸ್ಟ್ರಾಂಗ್, ತಮ್ಮ ಮಕ್ಕಳು ಶಾಲೆಯಲ್ಲಿ ಓದುತ್ತಿದ್ದಾರಲ್ಲವೇ?' ; ಸಂಶಯದಿಂದ – 'ಹೌದು' ; 'ಹಾಗಾದರೆ ಅವರು ಸಾಕಷ್ಟು ಹೋಮ್‌ವರ್ಕ್ ಮಾಡಬೇಕಲ್ಲವೇ ?' ; ಮೃದುವಾಗುತ್ತ—'ಹೌದು' ; ತಕ್ಷಣ – 'ಅಂದರೆ ಹಲವು ಹತ್ತು ರೆಫರೆನ್ಸ್ ಗ್ರಂಥಗಳನ್ನು ಓದಬೇಕಾಗುತ್ತದಲ್ಲವೇ – ಆ ವಿಷಯ, ಈ ವಿಷಯ ಅಂತ ? ಹಾಗೆಯೇ ಮಕ್ಕಳು ಪ್ರತಿರಾತ್ರಿ ಗ್ರಂಥಾಲಯಕ್ಕೆ ಧಾವಿಸುವುದು ಕಿರಿಕಿರಿ ಉಂಟುಮಾಡುತ್ತದಲ್ಲವೇ? ಈ ಎಲ್ಲ ಗ್ರಂಥಗಳೂ ಮನೆಯಲ್ಲೇ ಇದ್ದರೆ ಎಷ್ಟು ಚೆನ್ನ ಎನಿಸುತ್ತದಲ್ಲವೇ?'; ನಿಟ್ಟುಸಿರಿಡುತ್ತ – 'ಹೌದು' ; 'ಹಾಗಾದರೆ ತಾವು ಈ ಗ್ರಂಥವನ್ನು ಕೊಳ್ಳುತ್ತೀರಲ್ಲವೇ ?' ; 'ಹೌದು'.

'ಹೌದು – ಇಲ್ಲ' ಆಟದ ಈ ಮೂರು ಉದಾಹರಣೆಗಳು ಒಟ್ಟುಗೂಡುತ್ತ ಒಂದು ಸಂಕೇತವಾಗುತ್ತವೆ—ಯಾಂತ್ರೀಕೃತ, ಅಭ್ಯಾಸಗತ, ಇಚ್ಛಾಬಾಹಿರ ಬೌದ್ಧಿಕ ವ್ಯವಸ್ಥೆಯೊಂದರ, ಒಂದು ಬಗೆಯ ಬೌದ್ಧಿಕ 'ಅಸೆಂಬ್ಲಿ–ಲೈನ್'ನ ಸಂಕೇತ. ಇಂಥ ವ್ಯವಸ್ಥೆಯಿಂದ ಪಾರಾಗಬಯಸುವುದು ಅತ್ಯಂತ ಸಹಜ.

ಚಾಪ್ಲಿನ್ 'ಮಾಡರ್ನ್ ಟೈಮ್ಸ್'ನಲ್ಲಿ ಅಸೆಂಬ್ಲಿ–ಲೈನ್‌ನಿಂದ ಅತಿಯಾಂತ್ರೀಕರಣದ ಕಗ್ಗಂಟುಗಳಿಂದ ಮುಕ್ತನಾಗಲು ತನ್ನ 'ಕುಣಿತ – ಜಿಗಿತ'ಗಳ ದೈಹಿಕ ಮಾರ್ಗವೊಂದನ್ನು ಕಂಡುಕೊಂಡ ; ಹಾಗೆಯೇ ಬುದ್ಧಿ–ಭಾವನೆಗಳ ಯಾಂತ್ರೀಕರಣದಿಂದ ವಿಮೋಚಿತನಾಗಲು 'ಶಿಶುಪ್ರಾಯತೆ'ಯ ಮಾರ್ಗವನ್ನು ಕಂಡುಕೊಂಡ.

* * * *

ನಾನು ಹಾಲಿವುಡ್‌ಗೆ ಭೇಟಿಕೊಟ್ಟಾಗ ಚಾಪ್ಲಿನ್‌ನೊಂದಿಗೆ ಭಾಗವಹಿಸಿದ್ದ ಸಂತೋಷಕೂಟವೊಂದರಲ್ಲಿ ಸೇರಿದ್ದ ಜನ ಚಾಪ್ಲಿನ್‌ಗೆ ಹಾಸ್ಯಪ್ರಜ್ಞೆ ಕಡಿಮೆ ಎಂದು ಅಭಿಪ್ರಾಯಪಟ್ಟರು. ಚಾಪ್ಲಿನ್ ಅದನ್ನು ಕೇಳಿ ನಕ್ಕುಬಿಟ್ಟನೇ ? ಇಲ್ಲ. ನೊಂದು ಕೊಂಡ ! ರೇಗಿದ ! ಹಾಗಾದರೆ ಆ ಜನರ ಅಭಿಪ್ರಾಯ ಸರಿಯಾದದ್ದೆ !

ಒಬ್ಬ ವ್ಯಕ್ತಿಗೆ ಹಾಸ್ಯಪ್ರಜ್ಞೆ ಕಡಿಮೆ ಎಂದು ಇತರರು ಅಭಿಪ್ರಾಯಪಟ್ಟಾಗ ಆತ ಏಕೆ ರೇಗುತ್ತಾನೆ ?

ಹಾಸ್ಯಪ್ರಜ್ಞೆಯು ಅನೇಕ ರೀತಿಯಲ್ಲಿ ಪ್ರಾತಿನಿಧಿಕ ಪ್ರವೃತ್ತಿಗಳ ಸೂಚಕವಾಗಿರುತ್ತದೆ. ಮೊದಲನೆಯದು ಭಾವಲಕ್ಷಣವಾದ ಲೀಲಾಪ್ರವೃತ್ತಿ. ಲೀಲಾಪ್ರವೃತ್ತಿಯು ಬಾಲ್ಯ–ಯೌವನಗಳ ದೈಹಿಕ–ಮಾನಸಿಕ ಚೈತನ್ಯವನ್ನು ಸೂಚಿಸುತ್ತದೆ. ಲೀಲಾಪ್ರವೃತ್ತಿಯನ್ನು ಕಳೆದುಕೊಂಡ ಮನುಷ್ಯ 'ಜಡವೃದ್ಧ'ನಾಗುತ್ತಾನೆ. ದೇಹ ಜಡವಾದ ಮೇಲೂ ಲೀಲಾಪ್ರವೃತ್ತಿಯನ್ನು ಉಳಿಸಿಕೊಂಡ ಮುದುಕ ತನ್ನ ಮನೋಚೈತನ್ಯವನ್ನು ರಕ್ಷಿಸಿಕೊಂಡಿರುತ್ತಾನೆ.

ಇನ್ನೂ ಆಳಕ್ಕೆ ಇಳಿದರೆ–ಲೀಲಾಪರನಾಗಿರುವುದು ಒಂದು ಅರ್ಥದಲ್ಲಿ

ಶುದ್ಧ

ಮುಕ್ತನಾಗಿರುವುದೇ. ಮನುಷ್ಯ ಲೀಲೆಯಲ್ಲಿ ತೊಡಗಿದ ಕ್ಷಣಗಳಲ್ಲಿ, ವ್ಯವಹಾರ-ನೀತಿಯಲ್ಲಿ, ಕುಟುಂಬ-ಸಮಾಜದಲ್ಲಿ ತನ್ನನ್ನು ಬಂಧಿಸಿ ಆದೇಶಿಸುವ ಎಲ್ಲ ಕಟ್ಟು ಪಾಡುಗಳನ್ನು ತತ್ಕಾಲಕ್ಕೆ ಉಪೇಕ್ಷಿಸುತ್ತಾನೆ. ಜೀವನದ ಬಹುಭಾಗ ನಿರ್ಬಂಧಗಳ ಕಂತೆ. ಆದರೆ ಲೀಲಾಮಗ್ನರಾದಾಗ ನಾವು ನಮಗಿಷ್ಟವಾದದ್ದನ್ನೇ ಮಾಡುತ್ತ ಮುಕ್ತರಾಗಿರುತ್ತೇವೆ. ಮನುಷ್ಯನಿಗೆ ಮುಕ್ತನಾಗುವುದಕ್ಕಿಂತ ಹೆಚ್ಚಿನ ಬಯಕೆ ಬೇರೊಂದಿಲ್ಲ.

ಆದರೆ ಇದು ನಿರ್ಬಂಧಗಳಿಂದ ತಪ್ಪಿಸಿಕೊಳ್ಳುವ ಬಯಕೆಯಷ್ಟೇ ಅಲ್ಲ. ಕೆಲವೊಂದು ಕ್ರಿಯೆಗಳನ್ನು ಮಾಡುವ ಸ್ವಾತಂತ್ರ್ಯ ಪಡೆಯುವ ಬಯಕೆಯೂ ಹೌದು. ನಮಗಿಷ್ಟ ಬಂದಂತೆ ಈ ಪ್ರಪಂಚವನ್ನು ರೂಪಿಸಲು ಬಿಡದ ಈ ನಿರ್ಬಂಧಗಳು ನಮ್ಮನ್ನು ಯಾವತ್ತೂ ರೊಚ್ಚಿಗೆಬ್ಬಿಸುತ್ತಿರುತ್ತವೆ. ಲೀಲಾಸಮಯದಲ್ಲಿ ಇಂಥ ಸ್ವಾತಂತ್ರ್ಯ ಕಿಂಚಿತ್ತಾದರೂ ಸಾಧ್ಯವಾಗಿ ನಾವು ಖುಷಿ ಅನುಭವಿಸುತ್ತೇವೆ. ಆದ್ದರಿಂದ ಓರ್ವನಿಗೆ ಉತ್ಕೃಷ್ಟ ಹಾಸ್ಯಪ್ರಜ್ಞೆಯಿದೆ ಎಂದರೆ ಆತ ಲೀಲಾಪ್ರವೃತ್ತಿಯನ್ನೂ, ಅದು ತಂದುಕೊಡುವ ಚೇತನಾಸ್ವಾತಂತ್ರ್ಯವನ್ನೂ, ಸೃಜನಶೀಲ ಅಂತಃಸ್ಫುರಣೆಯನ್ನೂ ಹೊಂದಿದ್ದಾನೆಂದು ಅರ್ಥ.

ಈ ಶ್ರೇಷ್ಠ ಹಾಸ್ಯಪಟು ಚಾಪ್ಲಿನ್ ಮೇಲಿನ ಮನೋಪ್ರವೃತ್ತಿಯನ್ನು ಪರಿಪೂರ್ಣವಾಗಿ ತೋರುತ್ತಾನೆ. ಶಿಶುಪ್ರಾಯತೆ, ನಕಲಿ ಚಳಕಗಳ ತನ್ನ ಹಾಸ್ಯತತ್ವದ ಸೂಕ್ಷ್ಮತೆಯಿಂದ ವೀಕ್ಷಕರು ಅನುಸರಿಸಬಯಸುವಂಥ ಮಾದರಿಯೊಂದನ್ನು ಸೃಷ್ಟಿಸುತ್ತಾನೆ. ಅವರನ್ನು ಮಂತ್ರಮುಗ್ಧರನ್ನಾಗಿ ಮಾಡಿ ಶೈಶವ-ಬಾಲ್ಯಗಳ ಸ್ವರ್ಗೀಯ ಲೋಕಕ್ಕೆ ಕರೆದೊಯ್ಯುತ್ತಾನೆ.

ಎಲ್ಲ ವ್ಯಾವಹಾರಿಕ ನಿರ್ಬಂಧಗಳಿಂದ ಮುಕ್ತನಾಗ ಬಯಸುವ ತನ್ನ ಆಳದ ಒತ್ತಡವನ್ನು ಚಾಪ್ಲಿನ್ ಉಜ್ಜೀವನ (animation) ಚಿತ್ರಗಳ ಬಗ್ಗೆಯ ಹೇಳಿಕೆಯೊಂದರಲ್ಲಿ ವ್ಯಕ್ತಪಡಿಸುತ್ತಾನೆ. ಅವನ ಪ್ರಕಾರ ಉಜ್ಜೀವನ ಚಿತ್ರವೊಂದೇ ನಿಜವಾದ ಕಲಾಪ್ರಕಾರ. ಯಾಕೆಂದರೆ ಕಲಾವಿದ ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುತ್ತಾ, ತನ್ನ ಸ್ವೇಚ್ಛಾಮನ ಬಯಸಿದ್ದನ್ನೆಲ್ಲ ಸೃಷ್ಟಿಮಾಡಲು ಸಾಧ್ಯವಾಗುವುದು ಉಜ್ಜೀವನ ತಂತ್ರದಲ್ಲಿ ಮಾತ್ರ.

*   *   *   *

ಆಂದ್ರೆ ಮಾಲ್ರೋನ ಕಾದಂಬರಿ 'ಮ್ಯಾನ್ಸ್ ಫೇಟ್'ನ ಒಂದು ದೃಶ್ಯ: ಖುಷಿಯಾಗಿ ನಗುತ್ತಿರುವ ಸುಂದರ ಚೀನೀ ಮಕ್ಕಳ ಗುಂಪು; ಅವರ ನಗುವಿನ ಕಾರಣ-ಕೋಣೆಯ ಮೂಲೆಯಲ್ಲಿರುವ ದೃಶ್ಯ; ಏನದು ? ಒಬ್ಬ ಗಂಡು-ಪ್ರಾಯಶಃ ಪಾನಮತ್ತ-ಹಾಸಿಗೆಯ ಮೇಲೆ ಅಡ್ಡಾದಿಡ್ಡಿ ಬಿದ್ದುಕೊಂಡಿದ್ದಾನೆ; ಪುಟ್ಟದೇಹದ ಹೆಣ್ಣೋ

ರ್ಗಳು ಕೋಪಾವಿಷ್ಟಳಾಗಿ ಅವನ ಕೆನ್ನೆಗೆ ಬಾರಿಸುತ್ತಿದ್ದಾಳೆ ; ಇತ್ತ ಮಕ್ಕಳು ಗಹಗಹಿಸುತ್ತಿದ್ದಾರೆ; ಆ ಗಂಡು ಅವರ ಅಪ್ಪನೇ, ಆ ಹೆಣ್ಣು ಅವರ ಅಮ್ಮನೇ ಆದರೂ ಮಕ್ಕಳ ನಗು ಭೋರ್ಗರೆಯುತ್ತಲೇ ಇದೆ. ಗಂಡು ಕುಡಿದೂ ಇಲ್ಲ; ಹೆಂಡತಿ ಗಂಡನನ್ನು ಹೊಡೆಯುತ್ತಿರುವುದು ಆತ ಕುಡಿದಿದ್ದಾನೆ ಎಂದೂ ಅಲ್ಲ; ಆದರೆ ಆತ ಸತ್ತಿದ್ದಾನೆ ಎಂದು; ಸತ್ತು ನನ್ನನ್ನು ನಡುನೀರಿನಲ್ಲಿ ಕೈಬಿಟ್ಟು ನಡೆದ ಎಂದು. ಇದನ್ನು ನೋಡಿ ನಗುತ್ತಿದ್ದಾರೆ ಮಕ್ಕಳು—ಇಂದು ಗಹಗಹಿಸುತ್ತಿರುವ, ನಾಳೆ ಹೊಟ್ಟೆಗಿಲ್ಲದೆ ಹಸಿಯುವ ಮಕ್ಕಳು.

ಚಾಪ್ಲಿನ್ ಎಂದಾಕ್ಷಣ ನನ್ನ ಕಣ್ಣಿಗೆ ಹೊಳೆಯುವುದು ಪುಟ್ಟ ಹೆಂಗಸೊಂದು ಸತ್ತ ದೈತ್ಯ ಗಂಡನನ್ನು ಹಳಿಯುತ್ತ ಅವನ ವಿಕಾರ ಮುಖಕ್ಕೆ ಬಾರಿಸುತ್ತಿರುವುದನ್ನು ವಿನೋದವೆಂದು ಪರಿಗಣಿಸಿ ನಗುವ ಆ ಮಗುವಿನ ಮುಖ. ಚಾಪ್ಲಿನ್‌ನ ರಹಸ್ಯ, ನಿಗೂಢ, ಅನನುಕರಣೀಯ ಶ್ರೇಷ್ಠತೆ ಅಡಗಿರುವುದು ಇಲ್ಲಿಯೇ ; ಅತ್ಯಂತ ಭಯಾನಕ, ಕರುಣಾಜನಕ, ದುರಂತಮಯ ವಸ್ತುಗಳನ್ನು ನಗುವ ಮಗುವಾಗಿ ನೋಡುವ ಆ ಕಣ್ಣುಗಳಲ್ಲಿಯೇ; ಇಂಥ ವಸ್ತುಗಳನ್ನು ಯಾವುದೇ ನೀತಿ—ಅನೀತಿಯ ವ್ಯಾಖ್ಯೆಯಿಲ್ಲದೆ, ಮೌಲ್ಯನಿರ್ಣಯ ಮಾಡದೆ, ತತ್‌ಕ್ಷಣದ ಸ್ಫೂರ್ತಿಯಿಂದ, ಕೇವಲ ನಗುವ ಮಗುವಿನ ಹಾಗೆ ವೀಕ್ಷಿಸುವುದೇ ಚಾಪ್ಲಿನ್‌ನ ಅನನ್ಯತೆ. ಅಳುವ ಸನ್ನಿವೇಶದಲ್ಲೂ ಹಾಸ್ಯಾಸ್ಪದವಾದುದನ್ನು ಗ್ರಹಿಸುವ ಈ ವಿಧಾನ ಮೂರು ಮುಖಗಳ ಒಂದು ವಿಶಿಷ್ಟ ಮನೋಭಾವದ ರೂಪು ತಳೆಯುತ್ತದೆ.

ಈ ಘಟನೆ ತೀರ ನಿರಪಾಯಕಾರಿ – ಹಾಗಾಗಿ ಚಾಪ್ಲಿನ್ ಅದನ್ನು ಅನನ್ಯ ಕೋಡುಂಗಿತನದೊಂದಿಗೆ ಪ್ರಕಟಿಸುತ್ತಾನೆ.

ಈ ಘಟನೆ ವೈಯುಕ್ತಿಕವಾಗಿ 'ನಾಟಕೀಯ' – ಹಾಗಾಗಿ ಚಾಪ್ಲಿನ್ ಅದನ್ನು ಕಂಬನಿ–ನಗುವೆರಡೂ ಬೆರೆತ ಅವನ ವಿಶಿಷ್ಟ ಶೈಲಿಯಲ್ಲಿ ಹಾಸ್ಯಭರಿತ ಮೆಲೊಡ್ರಾಮವಾಗಿ ಪ್ರಕಟಿಸುತ್ತಾನೆ.

ಈ ಘಟನೆ ಸಾಮಾಜಿಕ ದುರಂತದ ಸೂಚಕ–ಹಾಗಾಗಿ ಕೇವಲ ಬಾಲಿಶ ಆಟವಾಗಿ ಶುರುವಾದದ್ದು ಸಾಮಾಜಿಕ ಸಮಸ್ಯೆಯ ಆಯಾಮ ಪಡೆಯುತ್ತದೆ.

ವಾಸ್ತವವನ್ನು ಈ ರೀತಿಯಲ್ಲಿ ಗ್ರಹಿಸಿ, ಅದನ್ನು ಹಾಗೆಯೇ ಪ್ರಸ್ತುತಪಡಿಸುವ ಧೈರ್ಯವಿರುವುದು ಓರ್ವ ಮಹಾಮೇಧಾವಿಗೆ ಮಾತ್ರ. ಹಾಗೆ ನೋಡಿದರೆ ಅವನಿಗೆ ಧೈರ್ಯದ ಅವಶ್ಯಕತೆಯೂ ಇಲ್ಲ ; ಯಾಕೆಂದರೆ ವಾಸ್ತವ ಅವನ ಕಣ್ಣಿಗೆ ಕಾಣುವುದೇ ಆ ರೀತಿಯಲ್ಲಿ.

*   *   *   *

ಚಾಪ್ಲಿನ್‌ನ ಯಾವತ್ತೂ ಎದುರಾಳಿ ಹೋಟೆಲೊಂದನ್ನು ನಡೆಸುವ ಭಯಾನಕ ದೈತ್ಯ ಎಂಬುದು ಅಷ್ಟು ಸರಿಯಲ್ಲ. ಇನ್ನೂ ಹೆಚ್ಚು ಕರುಣಾಹೀನ, ಭಯಾನಕ ದೈತ್ಯನಾದ ವಾಸ್ತವವೇ ಚಾಪ್ಲಿನ್‌ನ ನಿಜವಾದ ಎದುರಾಳಿ. ಚಾಪ್ಲಿನ್ ಈ ಎದುರಾಳಿಯೊಂದಿಗೆ ಕೊನೆಯೇ ಇಲ್ಲದ ಸರ್ಕಸ್ ಸ್ಟಂಟ್‌ಗಳ ಹೋರಾಟವನ್ನು ನಡೆಸುತ್ತಾನೆ. ವಾಸ್ತವ ಮುಖ ಬಿಗಿದ, ತರ್ಕಬದ್ಧ ಜಾಣ್ಮೆಯು ಸರ್ವಶಕ್ತನಂತೆ ತೋರುತ್ತದೆ. ಆದರೂ ಕೊನೆಯಲ್ಲಿ ನಿಷ್ಕಪಟ ಚಾಪ್ಲಿನ್‌ನಿಂದ ಅಣಕಿಸಿಕೊಂಡು, ರೇಗಿಸಿಕೊಂಡು ಸೋಲುತ್ತದೆ. ತನ್ನ ಈ ಮುಕ್ತನಗು ವಾಸ್ತವದ ವಿರುದ್ಧ ಅಣಕದ ತೀರ್ಪು ಎಂಬ ಅರಿವೇ ಇಲ್ಲದೆ ನಗು ಸೂಸುತ್ತಲೇ ಹೋಗುತ್ತಾನೆ ಚಾಪ್ಲಿನ್.

ಹೌದು, ಚಾಪ್ಲಿನ್‌ನ ಎದುರಾಳಿ ವಾಸ್ತವ–ನಿರ್ಬಂಧಗಳನ್ನು ಹೇರುವ, ಭೀತಿ ಮೂಡಿಸುವ ದೈತ್ಯಕಾಯದ ವಾಸ್ತವ. 'ಎ ಡಾಗ್ಸ್ ಲೈಫ್'ನಲ್ಲಿಯ ಬಿಡಿ ಪೋಲಿಸ್ ಪೇದೆಯಿಂದ, 'ಗೋಲ್ಡ್ ರಷ್'ನಲ್ಲಿ ಚಾಪ್ಲಿನ್‌ನನ್ನು ಕೋಳಿಯೆಂದು ಭಾವಿಸಿ ತಿನ್ನಲು ಹವಣಿಸುವ ದೈತ್ಯ ಸಂಗಾತಿ, 'ಮಾಡರ್ನ್ ಟೈಮ್ಸ್'ನಲ್ಲಿ ಪ್ರವಾಹದೋಪಾದಿಯಲ್ಲಿ ನುಗ್ಗಿ ಬರುವ ಪೋಲಿಸ್ ಸಮೂಹದವರೆಗೆ ಈ ವಾಸ್ತವ ದೈತ್ಯಾಕಾರ ತಳೆಯುತ್ತ ಹೋಗುತ್ತದೆ. 'ಮಾಡರ್ನ್ ಟೈಮ್ಸ್'ನ ಕೊನೆಯಿಲ್ಲದ 'ಕಂಟ್ರೋಲ್'ಗಳ ಯಂತ್ರ ಸರಣಿಯ ಮೇಲೆ ಚಾಪ್ಲಿನ್ ಅಣಕವಾಡುವಂತೆ ಲಘುನೃತ್ಯ ಮಾಡುತ್ತಾನೆ. ಒಂದು ತಿರುವಿನೊಂದಿಗೆ 'ಅಸೆಂಬ್ಲಿ–ಲೈನ್'ನ ವೇಗ ವರ್ಧಿಸಿ, ನಮ್ಮ ಮೈ ಬುಳುಗುಡುವಂತೆ ಮಾಡುತ್ತದೆ ಆ ಕೈಹಿಡಿ ; ಆದರೆ ಅದೇ ಕೈಹಿಡಿಯನ್ನು ಚಾಪ್ಲಿನ್ ನಿರ್ವಹಿಸುವ ರೀತಿ ನಮ್ಮ ಹೊಟ್ಟೆ ಹುಣ್ಣಾಗಿಸುತ್ತದೆ.

ಚಾಪ್ಲಿನ್‌ನ ಕತೆಗಳ ಹಂದರ ನಿಂತಿರುವುದು ವಾಸ್ತವವನ್ನು ಎದುರಿಸುವಲ್ಲಿ ಮಗುವಿನ ಬಾಲಿಶ ಪ್ರವೃತ್ತಿಗೂ 'ವಯಸ್ಕ'ರ ಕಠೋರ ಪ್ರವೃತ್ತಿಗೂ ಸದಾ ನಡೆಯುವ ಸಂಘರ್ಷದ ಮೇಲೆ. ಚಾಪ್ಲಿನ್ ಪ್ರಸ್ತುತಪಡಿಸುವ ನೀತ್ಯತೀತ (amoral) ಶಿಶುಪ್ರಾಯ ಕ್ರೌರ್ಯ, ಶೈಶವದ ಇತರ ಪ್ರೀತಿಯೋಗ್ಯ ಗುಣಗಳಲ್ಲಿ-ವಯಸ್ಕರು ಎಂದೆಂದಿಗೂ ಕಳೆದುಕೊಂಡ ಗುಣಗಳಲ್ಲಿ ಮುಚ್ಚಿಹೋಗುತ್ತದೆ. ಚಾಪ್ಲಿನ್‌ನ ಹೃದಯಸ್ಪರ್ಶಿ ದೃಶ್ಯಗಳು ಅಸಹಜ ಅಳುಬುರುಕತನದಿಂದ ತಪ್ಪಿಸಿಕೊಳ್ಳುವುದರ ರಹಸ್ಯ ಇದೇ.

ಕೆಲವೊಮ್ಮೆ ಈ ಹೃದಯಸ್ಪರ್ಶಿ ಗುಣ ಹೃದಯವಿದ್ರಾವಕ ಶೋಕದ ಮಟ್ಟಕ್ಕೆ ಏರುತ್ತದೆ. 'ದಿ ಪಿಲ್‌ಗ್ರಿಮ್'ನ ಅಂತಿಮ ದೃಶ್ಯಗಳನ್ನೇ ನೋಡಿ : ಕೈದಿ ಚಾರ್ಲಿ ಸೆರೆಮನೆಯಿಂದ ಪಲಾಯನಗೈಯುತ್ತಾನೆ ; ಪಾದ್ರಿಯ ವೇಷ ಧರಿಸಿ, ಸಣ್ಣ ಚರ್ಚ್ ಒಂದನ್ನು ನಡೆಸುತ್ತಿರುವಾಗ ಮತ್ತೆ ಪೋಲಿಸ್ ಷರೀಫ್‌ನ ಕೈಗೆ ಸಿಕ್ಕಿಬೀಳುತ್ತಾನೆ: ಆದರೆ ಕಾಣಿಕೆಡಬ್ಬಿ ತುಂಬುವಂತೆ ಮಾಡಿ ಮುಳುಗುತ್ತಿದ್ದ ಚರ್ಚನ್ನು ಉದ್ಧರಿಸಿದ ಚಾರ್ಲಿಯ ಬಗ್ಗೆ ಷರೀಫ್‌ನ ಮನಸ್ಸು ಮೃದುವಾಗುತ್ತದೆ; ಚಾರ್ಲಿಯ ಔದಾರ್ಯಕ್ಕೆ ಪ್ರತಿಯಾಗಿ ಅವನು ಮತ್ತೆ ತಪ್ಪಿಸಿಕೊಳ್ಳಲು ಅನುವು

ಮಾಡಿಕೊಡುವುದರ ಮೂಲಕ ಅದೇ ಔದಾರ್ಯವನ್ನು ತೋರಬಯಸುತ್ತಾನೆ, ಅನೇಕ ಪರೋಕ್ಷ ಸೂಚನೆಗಳನ್ನು ನೀಡುತ್ತಾನೆ, ಆ ಷರೀಫ್. ಒಂದು ಹೆಜ್ಜೆ ಆ ಕಡೆ ಇಟ್ಟರೆ ಮೆಕ್ಸಿಕೋದ ನೆಲ, ಸ್ವಾತಂತ್ರ್ಯ. ಆದರೆ ಚಾರ್ಲಿಗೆ ಷರೀಫ್‌ನ ಉದಾರ ಉದ್ದೇಶ ಅರ್ಥವೇ ಆಗುವುದಿಲ್ಲ. ತಾಳ್ಮೆ ಕಳೆದುಕೊಂಡ ಷರೀಫ್ ಅಮೆರಿಕದ ಗಡಿ ಯಾಚೆಯಿರುವ ಹೂವೊಂದನ್ನು ಕೀಳುವಂತೆ ಆಜ್ಞಾಪಿಸುತ್ತಾನೆ. ಚಾರ್ಲಿ ವಿನೀತಭಾವ ದಿಂದ ಮೆಕ್ಸಿಕೋದಲ್ಲಿ ಕಾಲಿಡುತ್ತಾನೆ. ಷರೀಫ್ ತನ್ನ ಉಪಾಯ ಫಲಿಸಿದ ಖುಷಿಯಲ್ಲಿ ಹಿಂದಿರುಗುತ್ತಾನೆ. ಆದರೆ ಶಿಶುಪ್ರಾಯ ಪ್ರಾಮಾಣಿಕತೆಯ ಚಾರ್ಲಿ ಅವನಿಗೆ ಹೂವನ್ನು ನೀಡಲು ತಿರುಗಿ ಓಡಿಬರುತ್ತಾನೆ, ಮತ್ತೆ ಅಮೆರಿಕದಲ್ಲಿ ಕಾಲಿಡುತ್ತಾನೆ. ರೇಗಿದ ಷರೀಫ್ ಚಾರ್ಲಿಯ ಕುಂಡೆಗೆ ಒದ್ದು ಈ ತೊಳಲಾಟದ ಗಂಟಿನಿಂದ ಬಿಡಿಸಿ ಕೊಂಡು ಹೋಗುತ್ತಾನೆ.

ಚಾರ್ಲಿ ಈಗ ವಿಮುಕ್ತ. ಈಗ ಬರುವ ಅಂತಿಮ ದೃಶ್ಯ ಚಾಪ್ಲಿನ್‌ನ ಶ್ರೇಷ್ಠ ಸೃಷ್ಟಿಗಳಲ್ಲೊಂದು. ಚಾರ್ಲಿ ಒಂದು ಕಾಲನ್ನು ಅಮೆರಿಕದಲ್ಲೂ, ಇನ್ನೊಂದನ್ನು ಮೆಕ್ಸಿಕೋದಲ್ಲೂ ಊರುತ್ತ, ಎಳೆಯುತ್ತ ಗಡಿರೇಖೆಯುದ್ದಕ್ಕೂ ನಡೆಯುತ್ತ, ಕೆಮರಾ ದಿಂದ ದಿಗಂತದೆಡೆಗೆ ಸಾಗುತ್ತಾನೆ. ಒಂದು ಅತ್ಯಂತ ನಿದರ್ಶನಪ್ರಾಯದೃಶ್ಯ ಆ ಕಲಾವಿದನ ಮನೋಭಾವವನ್ನ ಪ್ರತಿನಿಧಿಸುತ್ತದೆ ಎಂಬ ಮಾತು ಇಲ್ಲಿ ಅಪ್ಪಟ ಸತ್ಯ. ಒಂದು ಕಾಲು ಷರೀಫ್-ಕಾನೂನು-ಶೃಂಖಲೆಯ ನಾಡಿನಲ್ಲಿ; ಇನ್ನೊಂದು ಕಾಲು ಜವಾಬ್ದಾರಿ-ನ್ಯಾಯಾಲಯ-ನಿರ್ಬಂಧಗಳಿಂದ ವಿಮೋಚನೆ ನೀಡುವ ನಾಡಿನಲ್ಲಿ. ಈ ದೃಶ್ಯ ಚಾಪ್ಲಿನ್ ತನ್ನ ಅತ್ಯದ್ಭುತ ಹಾಸ್ಯತತ್ವವನ್ನು ಮೂರ್ತೀಕರಿಸುವ ವಿಧಾನದ ಅತ್ಯುತ್ತಮ ಉದಾಹರಣೆಯಾಗಿದೆ.

1937 ರಷ್ಟು ಹಿಂದೆಯೇ ಪ್ರಾರಂಭಿಸಿದ ಈ ಬರಹವನ್ನು ಮುಗಿಸುವುದು ಹೇಗೆಂದು ತಿಳಿಯದೆ ಅರ್ಧಕ್ಕೇ ನಿಲ್ಲಿಸಿದ್ದೆ. ಆದರೆ ಚಾಪ್ಲಿನ್‌ನ ಇತ್ತೀಚಿನ ಚಿತ್ರ 'ದಿ ಗ್ರೇಟ್ ಡಿಕ್ಟೇಟರ್' ನನಗೆ ಅವನ ಕಲೆ ಮತ್ತು ವ್ಯಕ್ತಿತ್ವದ ಬಗ್ಗೆ ಹೊಸ ಅರ್ಥಗಳನ್ನು ಹೊಳೆಯಿಸಿತು. ಈ ಚಿತ್ರದಲ್ಲಿ ಚಾಪ್ಲಿನ್ ಗೇಲಿಮಾಡುವುದು ಈ ಶತಮಾನದ ಅತ್ಯಂತ ಹೇಯ ಕ್ರೂರ ರಾಕ್ಷಸ ಹಿಟ್ಲರ್‌ನನ್ನು. ಮತ್ತೆ ಅದೇ ಹೃದಯಹೀನ ಎದುರಾಳಿ, ಅದೇ 'ಪುಟ್ಟ' ಹೋರಾಟಗಾರ. ಎಂದೂ ತುಟಿ ಬಿಚ್ಚದಿದ್ದ ಚಾರ್ಲಿ ಈ ಚಿತ್ರದ ಕೊನೆಯಲ್ಲಿ ತನ್ನೆಲ್ಲ ಸಂಕೋಚ, ಅನಿಶ್ಚಿತತೆ, ಭಯವನ್ನು ಮೀರಿ, ಲಕ್ಷಾಂತರ ಜನರ ಎದುರು, ಶೋಷಿತ ಜೀವಿಗಳೆಲ್ಲರಿಗೂ ಮುಟ್ಟುವ ಹಾಗೆ ಮಾತಾಡುತ್ತಾನೆ: 'ಧೈರ್ಯ ತಂದುಕೋ ಹಾನಾ! ಧೈರ್ಯ! ನಂಬಿಕೆಯಿನ್ನೂ ಸತ್ತಿಲ್ಲ....ಎಲ್ಲೋ ಒಂದೆಡೆ ಸೂರ್ಯ ಖಂಡಿತವಾಗಿಯೂ ಉದಯಿಸುತ್ತಾನೆ, ನಿನಗಾಗಿ, ನಮಗಾಗಿ, ಈ ಜಗತ್ತಿನ ಎಲ್ಲ ದುಃಖಗಳಿಗಾಗಿ....ಮಾನವೀಯತೆ ಸೋಲುವುದಿಲ್ಲ!'

ಶೂದ್ರ

ವೈಗೀಯಂತೆಯೂ ಮೇಲೆ ಮಾನವೀಯಂತೆ ಸಾಧಿಸುವ ಈ ಗೆಲುವನ್ನು ಚಾಪ್ಲಿನ್ ತನ್ನ ವ್ಯಂಗ್ಯದ, ಹಾಸ್ಯದ, ಶಿಶುಪ್ರಾಯಂತೆಯ ಕಣ್ಣುಗಳಿಂದ ತೋರುತ್ತಾನೆ; ಮಾನವತತ್ವಗಳ ಪ್ರತಿಪಾದಕನಾಗಿ, ಕಲಾವಿದನಾಗಿ ಶ್ರೇಷ್ಠರ ಸಾಲಿನಲ್ಲಿ ನಿಲ್ಲುತ್ತಾನೆ; ಜವಾಬ್ದಾರಿ ಹೊತ್ತು, ನಿಶ್ಚಯ ತೊಟ್ಟು ಹೋರಾಡುತ್ತಾನೆ.

'ಚಾರ್ಲಿ ಎಂಬ ಮಗು'

ಇಂದಿನಿಂದ – 'ಚಾರ್ಲಿ ಎಂಬ ಪ್ರಬುದ್ಧ'

(1941)

(ಐಸೆನ್‌ಸ್ಟೈನ್‌ನ 'ನೋಟ್ಸ್ ಆಫ್ ಎ ಫಿಲ್ಮ್ ಡೈರೆಕ್ಟರ್'ನಿಂದ)

— ಸಂಗ್ರಹಾನುವಾದ : ಜಶವಂತ ಜಾಧವ್

ಶ್ರಾವಣದ ಹಾಡು

ಹೆಜ್ಜೆಯ ಮೇಲೆ ಹೆಜ್ಜೆ ಮುಂದ್ರೆಯು ಬಿದ್ದರೂ ಮಾಟ ಹಿನ್ನೋಟದಲ್ಲಿ
ಹಾದಿ ಹರಿದಾಡುವುದು ನೆಲ ಮುಗಿಲ ವಿಸ್ಮಯ(ದ)ಸ್ನೇಹ ಸಂಪರ್ಕದಲ್ಲಿ
ಒಡಮೂಡುವ ಬದುಕಿಸುಂದ–ನಾಗರಬಂಧ ಶುಭಸಂತಾನದುಸಿರಿನಲ್ಲಿ
ಬಸಿರು ರೂಪಿಸುವ ಬೆರಗಿನಾನಂದವಿಲ್ಲಿ–

ಹಸಿರುನೆಲದ ಮೈಯುಡಿಗೆ ಮಿಡಿಗೆ ಮಿಂಚಿನ ಬಳ್ಳಿ ಬಳುವಳಿ ಸ್ನಾನ
ಕೊಳೆಯ ತೊಳೆದಂತೆಲ್ಲ ಮೈಚಿಗುರಿನುದ್ಯಾನಕ್ಕೆ ಧ್ಯಾನ ಸನ್ಮಾನ
ಎಳಗಾಳಿಗೆ ಮೈದೂಗುವ ಬಾಗುವ ಹೊಡೆಯು ನಗುವಂಥ ಮಿಲನ
ಋತುಮಾನವರಳುವುದು ಕನವರಿಕೆಯಂದದಲ್ಲಿ–

ಮುಗಿಲ ನೀಲಿಯು ಕೂಡ ಕವಲು ಹಾದಿಗಳಲ್ಲಿ ಹರಿವ ನಿತ್ಯ ಪಯಣ
ಕಡಲಿನೊಡಲಿಂದೆದ್ದ ಮುನ್ನಡೆಯ ಮೌನ ಮಿಂಚುವ ಜ್ವಾಲೆ ಹರಿಣ
ಮುಚ್ಚಳದ ಪುಟವರಳುವುದು ಹಗಲುಗನಸಿನಲ್ಲಿ–

ನಾನು, ನೆಲವ ಮುಟ್ಟುವ ತಟ್ಟುವಂಬೆಗಾಲಲ್ಲಿ ಜೀವತೊಯ್ಯುವ ಹನಿ
ಬೆಳ್ಳಿಮೊಳೆ ಮಿಡಿವಂತೆ ಕೊಳೆಯ ಕಳೆವಂತೆ ಮಿಂಚಿಮೆರೆಯುವ ನಾನು
ನೆಲವ ತುಂಬಿತುಳುಕಿಸುವ ಜಲದ ತೂಗುಯ್ಯಾಲೆಯ ಕಾಲದುಸಿರು ನಾನು–
ನಾನು, ಮುಗಿಲಿಂದ ನೆಲಕ್ಕೆ ಮುದ್ರೆಯೊತ್ತುವಂಗೈಯಲ್ಲಿ ಯುಗಯುಗದ ದನಿ.

— ಕೆ. ವೆಂ. ರಾಜಗೋಪಾಲ

ಕೆ.ವೆಂ. ರಾಜಗೋಪಾಲ, ಎಂ.ಐ.ಜಿ. 14, 80 ಅಡಿ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು-56

ದೂರು

ನಾನು ಬರುವಾಗ
ಏನೂ ತಂದಿರಲಿಲ್ಲ ಎಂದು ದೂರುತ್ತಾರೆ
ದನಿ ಎತ್ತಿ ಲೋಕದಾಚೆಯು
ಸುಳ್ಳು ಆಡುತ್ತಾರೆ.
ಇವರೆಲ್ಲ ಎತ್ತಿ ಆಡುವ
ದನಿಯನ್ನೇ ನಾನು ತಂದದ್ದು
ಅದು ಗೊತ್ತಾಗಲಿ ಎಂದು
ಬರುವಾಗಲೇ ಕೂಗಿಕೊಂಡದ್ದು
ಇದೊಂದೇ ನನ್ನ ಸ್ವಂತದ ಆಸ್ತಿ !
ಬೇಕು ಬೇಕಾದಂತೆ ಬಳಸಿದರೂ
ಬೆಳೆಯುತ್ತ ಬಲಿಯುತ್ತ ಬಂದ
ನನ್ನ ಭಾಗ್ಯದ ಸೊತ್ತು.

ಆದರ ಬಳಕೆಯು ದುಂದಿನಲಿ
ಕುಂದಿನಲಿ
ಸೇಡಿನಲಿ ಕೇಡಿನಲಿ
ತಿಳಗೇಡಿತನದಲ್ಲಿ, ಕಿಡಗೇಡಿತನದಲ್ಲಿ
ಸೇತುವೆಗಳ ಕಟ್ಟಿದೆ ಕೆಡವಿದೆ
ಮುಳುಗುವಲ್ಲಿಯೂ
ಮಮತೆ ಮತ್ಸರಗಳ ಓಕುಳಿಯಾಡಿದೆ
ದೂರವಾದೆ ಸನಿಹವಾದೆ
ಆದರೂ ದೂರಿದರು.

ಇದೆಲ್ಲದರ ಹಿಂದೆ
ಬೇಲಿಯಾಗಿ ಹೊಲವಾಗಿ
ಹಸನಾಗಿ ಹುಲುಸಾಗಿ ಹೊಲಸಾಗಿ
ಹೂವಿನ ಜೊತೆಗೆ ಹುಲ್ಲು
ಹುಲ್ಲಿನ ಜೊತೆಗೆ ಮುಳ್ಳು
ಈ ಬೆಳೆದ ಬಾಗಾಯತಿನಲ್ಲಿ

ಡಾ॥ ಎಸ್.ವಿ. ನಾಡಕರ್ಣಿ, 'ಕುಟ್ಟಿ', ವಿವೇಕಾನಂದನಗರ, ಬೈಕಾಕ ರೋಡ್, ಆನಂದ್-388 001

ತಂದು ಹಾಕಿದ್ದು ನಾನಲ್ಲ
ನನ್ನ ಶಬ್ದಗಳು !

ಅಂದು ಶಬ್ದಗಳನ್ನು ಕಲಿಸಲೆಂದು
ಒತ್ತಕ್ಷರ ಹ್ರಸ್ವ ದೀರ್ಘಗಳನ್ನು
ಕೈ ಒತ್ತಿ ಹಿಡಿದು ಕಲಿಸಿದ್ದು
ಪಾಠಮಾಲೆಯ ಅಕ್ಷರದ
ಮೊದಲ 'ಅ' ಬರೆಸಿದ್ದು
'ಅ' ಹೋಗಿ 'ಥ'ಕ್ಕೆ ನಿಂತಿರಬಾರದೆಂದು
ಎಚ್ಚರ ವಹಿಸಿದ್ದ ಅವರನ್ನೇ ಕೇಳಿ
ನನ್ನ ಕೊರಳಿನಲಿ ಶಬ್ದಗಳ ತುರುಕಿ
ದನಿ ಕೆಡಿಸಿಟ್ಟದ್ದು ಯಾತಕ್ಕೆ ?

— ಸುಂದರ ಕುಲಕರ್ಣಿ

ಬಣ್ಣಗಳು

ಚಿಕ್ಕಂದಿನಿಂದ ಇಂದಿನವರೆಗೂ ಮೊದಲಿನಿಂದಲೂ ಬಣ್ಣಗಳ ಕುರಿತು ಅಚ್ಚರಿ
ಕುತೂಹಲ ಇದ್ದದ್ದೇ. ಆಗೀಗ ನನ್ನ ಕಂಡು ಹಿಯಾಳಿಸಿ ನಗುವ,
ಕ್ಯಾಕರಿಸಿ ಉಗಿವ ಬಣ್ಣಗಳು ಒಡಲಾಳಕ್ಕೆ ಬೇರಿಳಿಸಿವೆ.

ಅಪ್ಪ ತಂದುಕೊಟ್ಟ ಬಣ್ಣದ ಫೇಣಿ, ಅಂಗಿ, ಬ್ಯಾಚು, ಕಾಗದ
ಎಲ್ಲ ಈಗ ಮಾಯವಾಗಿವೆ; ಅಂದು ನನ್ನ ಸರೀಕರ ಕೂಡ ಒಳ-
ಜಗಳಕ್ಕೆ ಕಾರಣವಾದದ್ದು ಮಾತ್ರ ಮನಸ್ಸಿನಲ್ಲಿ ಚಿರಸ್ಥಾಯಿ.

ತಂಟಿಗೆ, ಗಲ್ಲಕ್ಕೆ, ಹಣೆಗೆ, ಹುಬ್ಬಿಗೆ, ಇಷ್ಟಿಷ್ಟು ಬಣ್ಣ ಮೆತ್ತಿಕೊಂಡು
ಮಿರುಗುವ ಛದ್ಮವೇಷ ಯೌವ್ವನಕ್ಕೆ ಸಹಜವೇ, ಪೋಲಿ-
ಹುಡುಗರು ನೋಡಿ ಒಳಗೊಳಗೇ ಕಿಸಿ ಕಿಸಿ ನಗುವುದೊಂದೇ ಮೋಜು.

ಕೂಸು ಅಂಗಳದಲ್ಲಿ ರಂಗವಲ್ಲಿ ಬರೆಯುವಾಗ, ಪುರೋಹಿತ
ಮಂಡಲಗಳನ್ನು ರಚಿಸುವಾಗ, ಕೊಂಚ ವ್ಯತ್ಯಾಸವಾಗಿ, ವರ್ಣವಿಪ್ಲವ-
ಕ್ಕೆಡೆಯಾಗಿ, ಬಣ್ಣಗಳ ಶಬಳಗೊಳಿಸುವುದೊಳಿತು ಎನ್ನಿಸೀತು.

ವಿನಾಯಕ ಗ. ಹೆಗಡೆ, ಬಸವನಕೆರೆ, ಕಲ್ಲಬ್ಬೆ ಪೋಸ್ಟ್, ಕುಮಟಾ ತಾಲ್ಲೂಕು (ಉ.ಕ.) 581 343

ನೆಲತಾಯಿ ಒಡಲಲ್ಲಿ ಪಡಿನುಡಿವ ಹೂವು, ಹಣ್ಣು, ಹಚ್ಚನೆ ಹಸಿರ ಹುಲ್ಲು,
ಚಿಟ್ಟೆ, ಹರಿದ್ವರ್ಣ ಇತ್ಯಾದಿ ಒಂದೊಂದೂ ಬಣ್ಣಗಳೊಡನೆ ಸಾಯುಜ್ಯ;
ಆದರೆ ದಿನವೂ ಮಾಸಿ ಕಳೆಗುಂದುವ ವೇದನೆಯು ಒಳಗುದಿ ಎಲ್ಲಕ್ಕೂ.

ನೆಲದೆದೆಗೆ ಮಿಡಿವ ಬಣ್ಣಗಳಲ್ಲದ್ದಿದ ನನ್ನ ಕುಂಚ, ಆಗಾಗ ಮುಗಿಲ
ಕ್ಯಾನ್ವಾಸಿನಲ್ಲಿ; ಹಸಿದ ತೊಗಲ ಚೀಲಕ್ಕೆ ಚಿಂದಿಯನ್ನು ತೇಪೆ ಹಾಕಿ
ಓಡಾಡುವ ನಿಷ್ಪಾಪ ಮಕ್ಕಳ ಮಾರ್ದವವನ್ನು ಬರೆಯುತ್ತದೆ.

ಯಾರಿರಿಸಿದರು ನಮ್ಮ ತೊಗಲಿಗೆ ರಾಚುವ ಕಪ್ಪು, ಬಿಳಿ, ಸಮ್ಮಿಶ್ರ ಬಣ್ಣಗಳ!
ವರ್ಣಸಂಕರವಾಗಿ, ಕೊರತೆಯ ಧ್ವನಿ ಮೊಳಗಿ, ಅಣ್ವಸ್ತ್ರಗಳಿಂದ
ಬೆಂದ ಮಾಂಸ, ಮೂಳೆಗಳು ಬಿಳಿಯ ಬಟ್ಟೆಯನ್ನು ಹೊದ್ದು ಮಲಗಬೇಕಾದ

ಈ ಬಣ್ಣಗಳೆದುರು ನನಗೆ ಸಂಕೋಚ; ಅಸಮಾನತೆ, ಮೀಸಲ
ವಿರುದ್ಧ ಸುಟ್ಟುಕೊಳ್ಳುವ ಯುವಕರು, ಅಸ್ಸಾಂ, ಪಂಜಾಬಗಳಲ್ಲಿ
ನಡೆಯುವ ನರಮೇಧ ಕಣ್ಣ ಮುಂದಿವೆ ಘೋರ ಭೀಕರ ಬಣ್ಣಗಳು.

ನಮ್ಮೀ ಭಾರತ ರತ್ನವೊಂದೇ ಪ್ರತಿಫಲಿಸೀತು ಅದೆಷ್ಟು ಬಣ್ಣಗಳ!
ಏಳೇಳು ಬಣ್ಣ ಕಾಮನ ಬಿಲ್ಲಾಗಿ ಬಾಗಿ ಬದಲಾಯಿಸುವ ಟ್ರಾಟ್ ಮೀನು-
ಗಳಿಗಿದೇ ಹೊತ್ತು ಅಪಾರ ವರ್ಣವೈಷಮ್ಯ, ಭೇದಿಸಿ ಸಾಗುವ ದಾರಿ ಅಗಮ್ಯ!

— ವಿನಾಯಕ ಗ. ಹೆಗಡೆ ಭದ್ರನ್

ಚಂದ್ರಶೇಖರ ತಾಳ್ಯರ ಎರಡು ಕವನಗಳು

1. ಕಂದಮ್ಮಗಳು

ಗಲ್ಲು ಉಗುರು ಒಂದೂ ಇಲ್ಲದ
ಹೊಳೆವ ಕಣ್ಣುಗಳ
ಮುಟ್ಟಿದರೆ ಮಾಸುವ ಹಸುಳೆಗಳು

ಅವ್ವನ ಎದೆ ಹಾಲುಂಡು
ನಕ್ಕರೆ ಹಾಲುಕ್ಕುವ ಬೆಳ್ದಿಂಬೆಳಕು
ಅಕ್ಕರೆಯ ಲಾಲಿ ಹೇಳಿದರೆ ಸಕ್ಕರೆ ನಿದ್ದೆ.

ಚಂದ್ರಶೇಖರ ತಾಳ್ಯ, ತರ್ಕಶಾಸ್ತ್ರ ಅಧ್ಯಾಪಕ, ಕೆ. ಎನ್. ಪದವಿಪೂರ್ವ ಕಾಲೇಜು
ಹೊಳಲ್ಕೆರೆ-577 526

ದ್ರುವ ದ್ರುವಗಳ ಬೆಸೆದು
ಅನಂತ ಪ್ರೇಮವೆ ಬಸಿದು
ಒಂದೊಂದೇ ಹನಿ ಜಿನುಗುವ ಪ್ರೀತಿ.

ಹಸಿರು ಹೂವು ತಂಗಾಳಿ
ಒಂದೇ ತಳಿಗೆಯೊಳಿಟ್ಟು ಚಂದ್ರನ ಮಾಡಿ
ಪಿಳಿಗುಡುವ ಕಣ್ಣುಗಳ ತಾರೆಗಳು.

ಹಾಲಾಹಾಲದ ಹೆಡೆಯಲ್ಲಿ
ಮಿನುಗು ಮಣಿ ತೋರಿ
ಕೋಲಾಹಲದ ಲೋಕಕ್ಕೆ ಕಾಂತಿ ತಂದವರು.

ಕಣಿವೆ ಉಯ್ಯಾಲೆ ತೂಯ್ದು
ಆಚೆ ಸಾಗರ ಹಾಡಿ
ಗಾಳಿ ತೀಡಿ ತಂಪೆರೆದರೂ
ಹಗಲಿರುಳು ತೆಯ್ದು ಗಳಿಸುವುದು
ಒಂದೇ ಒಂದು ಹಲ್ಲು ಒಂದೇ ಒಂದು ಉಗುರು

ನಡುಗುವ ಲೋಕವೇ, ಹಲ್ಲು ಉಗುರುಗಳ ನರಕವೇ
ಎತ್ತಿಕೋ ಕಂದಮ್ಮಗಳ
ಅನಂತ ಪ್ರೇಮದ ತುಣುಕುಗಳ
ಕೋರೆಗಳ ಕಿತ್ತೊಗೆವ
ಹಂಬಲದ ಸಂಭವಗಳ
ಭವದೊಳಗೇ ಭವ ಮೀರಿದ ಮುಕ್ತಿಗಳ.

2. ಗೋಡೆ ಕಟ್ಟುವ ಮಾತು.

ನಂಡಿ ಬಯಲು
ಗೋಡೆ ಕಟ್ಟುವ ಮಾತು ಬೇರೆ
ಕೆಡವದೇ ಕಟ್ಟುವುದೆಂದರದು
ಕಟ್ಟುವುದಲ್ಲ ಕೆಡವುವುದಲ್ಲ
ಮನೆ ಮಂದಿರ ಮಸೀದಿ
ಬಯಲಲ್ಲ

ಬಯಲು ಒಲವಿನ ಹಾದಿ
ತೆರೆ ತೆರೆದ ರಂಗಮಂದಿರ

ನಟ ನಟೀ ನಟನೆ
ಅಂತರಂಗದ ತೆರವು
ಮನರಂಜನೆ ಅರಿವು
ತನ್ನಷ್ಟಕ್ಕೇ ಬಿರಿದ ಹೂವು

ಮೊಗ್ಗು ಮಗು
ಇಷ್ಟಿಷ್ಟೆ ಕಣ್ಣು ನೀಲಾಗಸ
ಚಂದ್ರು ಚುಕ್ಕಿ ರವಿ
ಬೆಳಕರಳಿದ ಸವಿ

ಭವೀ ಭವೀ ಸಂಭವೀ
ಸಂಭವಿಸುವುದು
ಮಾಗಿ ಮಗ ಮಗಿಸುವುದು
ಸಹಜ ಸಾಗಿಸುವುದು ಜಹಜ

ಸಹಜವೇ ಗೋಡೆ ಕಟ್ಟುವ ಮಾತು
ಓ ಅನಂತವೇ ಏನಾತು
ನಿನ್ನ ಸರ್ವಸ್ವ ಧಾತು
ಈಗಿರುವುದು
ಬರೀ ಮಾತು ಮಾತು.

— ಚಂದ್ರಶೇಖರ ತಾಳ್ಯ

ಶಂಕರ ಮೊಖಾಶಿ ಪುಣೇಕರರ ಕಥೆಗಳು–ಒಂದು ಟಿಪ್ಪಣಿ

— ಪ್ರಹ್ಲಾದ ಅಗಸನಕಟ್ಟೆ

ಶ್ರೀ ಶಂಕರ ಮೊಖಾಶಿ ಪುಣೇಕರರ ಒಟ್ಟಾರೆ ಸೃಜನಶೀಲ ಕ್ರಿಯೆ-ಪ್ರವಾಹ ವಿರುದ್ಧ ಈಸುವ ಛಾತಿಯುಳ್ಳದ್ದು. ಘೋಷಿತ ಚಳವಳಿ, ಮಾರ್ಗ, ಸಿದ್ಧಾಂತಗಳ ವಿರುದ್ಧ ಸಾಹಿತ್ಯಾಸಕ್ತರ ಗಮನ ಸೆಳೆಯಲೆಂದು ಹುಂಬ ಬರಹಗಾರನೊಬ್ಬ ನಡೆಸುವ ಗದ್ದಲ ಸ್ವರೂಪದ್ದು ಅಲ್ಲ ಈ ಪ್ರವೃತ್ತಿ. ಈ ಸಾಹಸ ಅವರ ಮನೋಧರ್ಮವಾಗಿದೆ.

ಪ್ರಹ್ಲಾದ ಅಗಸನಕಟ್ಟೆ, ಸಾಮಾಜಿಕ ಕಾರ್ಯಕರ್ತರು, ಕರ್ನಾಟಕ ಮೆಡಿಕಲ್ ಕಾಲೇಜ್, ಹುಬ್ಬಳ್ಳಿ

ಬದುಕನ್ನು–ಸಾಹಿತ್ಯವನ್ನು ನೋಡುವ ನೋಟದಲ್ಲಿಯೇ ಅದು ಅಡಕಗೊಂಡು ಅದು ಅವರ ನೈತಿಕ ನೆಲೆಯಾಗಿ ರೂಪುಗೊಂಡಿದೆ. ಹೀಗಾಗಿ ಅವರು ಏನನ್ನೇ ಬರೆದರೂ, ಆಡಿದರೂ, ಅದರಲ್ಲಿ ಮತ್ತಾವುದೋ ಈತನಕ ಕಾಣದ್ದು–ಎಷ್ಟೋ ಸಾರಿ ಅಸಂಗತ ಅನ್ನುವಂತಹದ್ದು ಕಾಣಿಸಿಕೊಳ್ಳುತ್ತದೆ.

ಪಾಶ್ಚಾತ್ಯ ಸಾಹಿತ್ಯದ ವಿದ್ಯಾರ್ಥಿಯೂ, ಬಳಿಕ ಆ ಸಾಹಿತ್ಯವನ್ನು ಬೋಧಿಸುವ ಶಿಕ್ಷಕರಾಗಿಯೂ ಕೆಲಸ ಮಾಡಿರುವ ಪುಣೇಕರರು ಮಾತ್ರ ಆ ಸಾಹಿತ್ಯದ ಚಿತ್ತಾಕರ್ಷಣೆಗೆ ತಮ್ಮನ್ನು ತೊತ್ತು ಮಾಡಿಕೊಂಡವರಲ್ಲ. ಹೀಗೆ ತಪ್ಪಿಸಿಕೊಂಡು ಪೂರ್ಣ ಆರ್ಷೇಯ ದೃಷ್ಟಿಕೋನ ಬೆಳೆಸಿಕೊಂಡವರು ಕನ್ನಡ ಸಂದರ್ಭದಲ್ಲಿ ಪುಣೇಕರರು ಒಬ್ಬರೇ ಇರಬೇಕು. ಅವರ ಸೃಜನಶೀಲದ ಹರೆಯದ ದಿನಗಳಲ್ಲಿ ನವ್ಯ ಚಳುವಳಿಯು ಜಲಪಾತ ಧುಮ್ಮಿಕ್ಕುತ್ತಾ-ಎಲ್ಲರನ್ನು ಅನಾಥಪ್ರಜ್ಞೆ, ಪರಕೀಯತೆ, ಧ್ರುವನಿರಸನ, ವಿಕ್ಷಿಪ್ತತೆ, ಅಸಂಗತೆಗಳ ಅಲೆಯಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದಾಗ"– ಪುಣೇಕರರು ದಡೆಯ ಮೇಲೆ ನಿಂತು – "ಗಂಗವ್ವ ಗಂಗಮಾಯಿ" ಬರೆದು ತೀರಾ ಸಾಂಪ್ರದಾಯಿಕ ಶೈಲಿ, ನೋಟಗಳಲ್ಲೆಲ್ಲ ಹೇಗೆ ವಿನೂತನವಾದದ್ದನ್ನು ಕೊಡಬಹುದೆಂಬುದಕ್ಕೆ ಉತ್ತರ ಕೊಟ್ಟರು.

ನಿಜಕ್ಕೂ ನವ್ಯರ ವ್ಯಕ್ತಿನಿಷ್ಠ ದೃಷ್ಟಿಕೋನ ಹಾಗೂ ಪಾಶ್ಚಿಮಾತ್ಯ ವಿಧಾನದ ಗ್ರಹಿಕೆಗಳನ್ನು ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಹೀಗೆ ಪ್ರಶ್ನಿಸಿದವರು ಹಾಗೂ ತಮ್ಮ ಸಾಹಿತ್ಯದಲ್ಲಿಯೇ ಉತ್ತರ ಕೊಟ್ಟವರು ಪುಣೇಕರರೇ.

ಪುಣೇಕರರೇ ತಮ್ಮ ಒಂದು ಸಂದರ್ಶನದಲ್ಲಿ "ಪಾಶ್ಚಿಮಾತ್ಯ ಸಾಹಿತ್ಯದ ಮೂಲ ದೌರ್ಬಲ್ಯ ವ್ಯಕ್ತಿನಿಷ್ಠೆಯೇ ಆಗಿದೆ. ಈ ಸಾಹಿತ್ಯ ಸಂಪರ್ಕದಿಂದ ವ್ಯಕ್ತಿ ಪ್ರಾಧಾನ್ಯಕ್ಕೆ, ಸ್ವೋಪಜ್ಞತೆಗೆ, ಸ್ವಕಪೋಲಕಲ್ಪಿತ ತತ್ವಜ್ಞಾನಕ್ಕೆ ಅವಾಸ್ತವ ಬೆಲೆ ಬಂದಿದೆ....ಪಾಶ್ಚಿಮಾತ್ಯರ ಯಾವುದೇ ತತ್ವಜ್ಞಾನವೂ ಅಪೂರ್ಣ." (ಶೂದ್ರ ಪತ್ರಿಕೆಯಲ್ಲಿ) ಎಂದು ಎಲ್ಲರೂ ಯಾವುದನ್ನು ಶ್ರೇಷ್ಠ ಎಂದು ಕೊಂಡಾಡುತ್ತಿದ್ದರೋ ಅದನ್ನು ಖಂಡಿಸಿದ್ದಾರೆ. ವ್ಯಕ್ತಿನಿಷ್ಠೆಯನ್ನು ಅಲ್ಲಗಳೆಯುವ ಪುಣೇಕರರು "ವ್ಯಕ್ತಿನಿಷ್ಠೆ–ಸ್ವಯಂರತಿಗೆ" ದಾರಿ ಮಾಡಿಕೊಡುತ್ತದೆ ಎಂದು ಪರಿಭಾವಿಸಿದವರು.

ಪುಣೇಕರರ ಇಂಥ ನಿಲುವುಗಳಿಂದಾಗಿ ನಮ್ಮ "ಸಮೂಹ ಸನ್ನಿಯ ಸಾಹಿತ್ಯಕ ವಾತಾವರಣದಲ್ಲಿ" ಏಕಾಂಗಿಯೂ,ವೈಚಿತ್ರ್ಯಗಳನ್ನು ಹುಟ್ಟುಹಾಕುವ ವಿಚಿತ್ರ ವ್ಯಕ್ತಿಯಾಗಿಯೂ ಕಾಣಿಸಿಕೊಂಡಿದ್ದಾರೆ. ಅವರ ಒಟ್ಟಾರೆ ಬರಹಗಳ ಮೌಲಿಕ ಚರ್ಚೆಯೇ ಕನ್ನಡದಲ್ಲಿ ನಡೆದಂತಿಲ್ಲ. ಕನ್ನಡದ ಕೆಲವೇ ಕೈಬೆರಳೆಣಿಕೆಯ ಶ್ರೇಷ್ಠ ಕಾದಂಬರಿಗಳಲ್ಲಿ ಒಂದಾದ "ಗಂಗವ್ವ-ಗಂಗಮಾಯಿ" ಕುರಿತು ನಡೆದಿರುವ ಚರ್ಚೆ ಕೂಡ ಅಪೂರ್ಣವಾದಂತಹದು. ಅವರ "ನಟ–ನಾರಾಯಣಿ" ಹಾಗೂ "ಅವಧೇಶ್ವರಿ"ಗಳನ್ನು ಕುರಿತು ಗಂಭೀರವಾದ ಚರ್ಚೆಯೇ ನಡೆದಿಲ್ಲವೆಂದರೂ ಸರಿಯೇ !

ಈ ಕೆಲ ಮಾತುಗಳ ಹಿನ್ನೆಲೆಯಲ್ಲಿ ಇಂದು ಬಿಡುಗಡೆಯಾಗುತ್ತಿರುವ ಪುಣೇಕರರ ಪ್ರಥಮ ಕಥಾಸಂಕಲನ "ಡೆರಿಕ್ ಡಿ ಸೋಝಾ ಮತ್ತು ಇತರ ಕತೆಗಳು" ಕುರಿತು ನಾಲ್ಕು ಮಾತನ್ನು ಚರ್ಚಿಸುವುದು ಔಚಿತ್ಯಪೂರ್ಣವಾದೀತು. ಇಲ್ಲಿನ ಎಂಟು ಕತೆಗಳನ್ನು ಪುಣೇಕರರು ತಮ್ಮ ಜೀವಮಾನದಲ್ಲಿ ಆಗಾಗ ಬರೆದ ಕತೆಗಳೆಂದು, ಅವುಗಳ ರಚನೆಯ ಕಾಲವನ್ನು ಸೂಕ್ಷ್ಮವಾಗಿ ಸೂಚಿಸಿದ್ದಾರೆ. ಸರಿಸುಮಾರು ನವ್ಯ ಚಳುವಳಿಯ ಪ್ರವರ್ಧಮಾನದ ದಿನಮಾನದ ದಿನಗಳಲ್ಲಿಯೇ ಈ ಕತೆಗಳೂ ರಚನೆಗೊಂಡಿವೆಯೆಂದು ಅಂದುಕೊಂಡರೆ – ಈ ಕತೆಗಳಿಗಿರುವ ಮಹತ್ವ, ಮೌಲಿಕತೆ, ಐತಿಹಾಸಿಕ ಮಹತ್ವ ಅರ್ಥವಾಗುತ್ತದೆ. ವ್ಯಕ್ತಿಕೇಂದ್ರಿತ ದೃಷ್ಟಿಕೋನ ಹಾಗೂ ತನ್ನ ಅನುಭವಕ್ಕೆ ಬಂದದ್ದು–ಕಂಡದ್ದು–ಪರಿಭಾವಿಸಿದ್ದು ಮಾತ್ರ ನಿಜವೆಂಬ ಉಗ್ರ ಅನುಭವ ಪ್ರಾವಿಣ್ಯವನ್ನೆ ಪ್ರತಿಪಾದಿಸುತ್ತಿದ್ದ ಕಾಲದಲ್ಲಿ–ಎಲ್ಲೆಲ್ಲಿಯೂ ಭ್ರಮನಿರಸನ, ಅನಾಥಪ್ರಜ್ಞೆ, ಅಸಂಗಕತೆಗಳು ಕೇಳಿ ಬರುತ್ತಿದ್ದ ಸಮಯದಲ್ಲಿ, ಪುಣೇಕರರು ಇಂಥ ನಿರುದ್ವಿಗ್ನವಾದ, ಜೀವನನಿಷ್ಠವಾದ, ಮಾನವೀಯ ಮೌಲ್ಯಗಳ ಕುರಿತ ಕಳಕಳಿಯ, ಅಂತರಂಗ–ಬಹಿರಂಗ ಶೋಧನೆಯ ಕತೆಗಳನ್ನು ಬರೆದರೆಂಬುದೇ ಈ ಕತೆಗಳ ಮೊಟ್ಟಮೊದಲ ಹೆಚ್ಚುಗಾರಿಕೆಯಾಗಿದೆ.

ವ್ಯಕ್ತಿಯ–ಅಭಿವ್ಯಕ್ತಿಯೇ ಸಾಹಿತ್ಯ – ಎನ್ನುವುದನ್ನು ಪುಣೇಕರರು ಇಲ್ಲಿನ ಕತೆಗಳಲ್ಲಿ ಸಂಪೂರ್ಣವಾಗಿ ಅಲ್ಲಗಳೆದಿದ್ದಾರೆ. "ಹೋಮರನಾಗಲಿ, ಶೇಕ್ಸ್‌ಪಿಯರನಾಗಲಿ, ವ್ಯಾಸನಾಗಲಿ, ಟಾಲ್‌ಸ್ಟಾಯ್‌ನಾಗಲಿ, ದಾಸ್ತೊವಸ್ಕಿಯಾಗಲಿ ಇವರೆಲ್ಲ ಜೀವನ ನಿಷ್ಠರು, ಇವರು ತಮ್ಮ ವ್ಯಕ್ತಿತ್ವವನ್ನು ಬಚ್ಚಿಡುವುದರಲ್ಲಿ ಸಂತೋಷಪಡುತ್ತಾರೆ.... ಕತೆಯ ಬಂಧದಲ್ಲಿ ಇವರ ವ್ಯಕ್ತಿತ್ವ ನಿದರ್ಶನಕ್ಕೆ ಬರುತ್ತದೆಯೇ ಹೊರತು, ಉಳಿದ ಎಲ್ಲಾ ವಿಷಯಗಳಲ್ಲೂ ಅವರು ವ್ಯಕ್ತಿತ್ವವನ್ನು ಬಿಚ್ಚಿಡುತ್ತಾರೆ...." (ಶೂದ್ರ ಪತ್ರಿಕೆಯಲ್ಲಿ) ಎನ್ನುವ ಮಾತು ಪುಣೇಕರರದು.

ಈ ಸಂಕಲನದ ಎಂಟು ಕತೆಗಳಲ್ಲಿ ನಾವು ಎಲ್ಲಿಯೂ ಕಥೆಗಾರನೂ–ಕಥಾನಾಯಕನೂ ಐಕ್ಯಗೊಂಡಿದ್ದಾನೆಂಬ ಸಂಭಾವ್ಯ–ಊಹೆ ಮಾಡಲಾರದಷ್ಟರ ಮಟ್ಟಿಗೆ ಇಲ್ಲಿ ಕತೆಗಾರ ತನ್ನ ವ್ಯಕ್ತಿತ್ವವನ್ನು ಬಚ್ಚಿಟ್ಟಿದ್ದಾನೆ. ಇದನ್ನು ಕೂಡ "ನಾನು, ಅವನು" ಎಂಬ ನಾಮಗಳಿಂದಲೇ ಶುರುವಾಗುತ್ತಿದ್ದ ನವ್ಯರ ಕಾಲದ ಕಥಾರಚನ ಕ್ರಮದ ಹಿನ್ನೆಲೆಯಲ್ಲಿಯೇ ಗಮನಿಸಬೇಕು. ಆಗ ಈ ಕಥೆಗಳ ವೈಶಿಷ್ಟ್ಯವೇನು ಎನ್ನುವುದು ಹೊಳೆಯುತ್ತದೆ.

ಇಲ್ಲಿನ ಎಂಟು ಕಥೆಗಳಾದ – ಬಲಾಸಖಾನ, ಪತ್ತಲು, ಘಾಟಕೋಪರ, ಗೋಪಿ, ಗೋಪಣ್ಣನ ಮಡದಿ, ಪತ್ತೆಗಾರ ಡೆರಿಕ್ ಡಿಸೋಝಾ, ವರ್ಗಮಿತ್ರರು ಹಾಗೂ ಕುಂಟ ರಾಠೋಡ – ಕತೆಗಳಲ್ಲಿ ಕತೆಗಾರನ ದೃಷ್ಟಿಯಿರುವುದು, ಮನುಷ್ಯರನ್ನು ವಿಶಿಷ್ಟ ಸಂದರ್ಭಗಳಲ್ಲಿ ಸಿಲುಕಿಸಿ – ಮನುಷ್ಯ ಸಂಬಂಧಗಳನ್ನು. ಮಾನವೀಯ ಮೌಲ್ಯಗಳನ್ನು

ಪರೀಕ್ಷಿಸುವುದು, ಶೋಧಿಸುವುದು ಪ್ರಧಾನವಾಗಿದೆ. ಇದನ್ನು ಅತ್ಯಂತ ಎಚ್ಚರದಿಂದ, ಕಲಾತ್ಮಕತೆಯಿಂದ, ನಿರುದ್ವಿಗ್ನ ಶೈಲಿಯಿಂದ ಶೋಧಿಸುವ ಕಳಕಳಿ ಕಾಣಬರುತ್ತದೆ. ಜನಪ್ರಿಯ ಕತೆಗಾರನಿಗಿರುವ – ರೋಚಕ ಪ್ರಯತ್ನ, ನಾಟಕೀಯ ಶೈಲಿ, ಸುಲಭ ಮಾರ್ಗ–ಪರಿಹಾರೋಪಾಯಗಳ ಮೋಹ, ರಂಜನೆಗಾಗಿ ಆಕಸ್ಮಿಕ ತಿರುಗಳ ಸೃಷ್ಟಿಸುವ ಚಾಪಲ್ಯ ಇಲ್ಲಿ ಇಲ್ಲ. ಹಾಗೆಯೇ ಎಲ್ಲಿಯೂ ಕತೆಗಾರ ಯಾವುದೇ ಉದ್ದೇಶಗಳನ್ನು, ತತ್ವಗಳನ್ನು, ಸಿದ್ಧಾಂತಗಳನ್ನು ಹೇಳಲಿಕ್ಕಾಗಿ ಇಲ್ಲಿನ ಪಾತ್ರಗಳನ್ನು ಬಳಸಿಕೊಳ್ಳುವುದಿಲ್ಲ. ಕತೆಗಾರನಿಗೆ ಅಂತಹ ಪೂರ್ವನಿರ್ಧಾರಿತ ಉದ್ದೇಶಗಳೂ ಇಲ್ಲ. ಇಲ್ಲಿ ಕತೆಗಳ ಕಟ್ಟುವುದೇ–ಶೋಧಿಸುವ ಮಾರ್ಗವಾಗಿದೆ. ಅನುಭವವೇ-ಧ್ವನಿಯೂ, ಮೌಲ್ಯವೂ ಆಗಿದೆ. ಹೀಗಾಗಿ ಪ್ರತಿಯೊಂದು ಕತೆಯೂ ಹೃದ್ಯವಾಗಿ ಶುರುವಾಗುತ್ತಾ, ಬೆಳೆದುಕೊಳ್ಳುತ್ತಾ, ಕುತೂಹಲಗಳನ್ನು ಕಾಯ್ದುಕೊಳ್ಳುತ್ತಾ ಹೋಗುತ್ತವೆ.

ಇಲ್ಲಿನ ಕತೆಗಳನ್ನು ಪ್ರಧಾನವಾಗಿ, ಮೂರು ವಿಭಾಗಗಳನ್ನಾಗಿ ವಿಂಗಡಿಸಿಕೊಂಡು ಅರ್ಥೈಸುವಿಕೆಗೆ ಅನುಕೂಲ ಕಲ್ಪಿಸಿಕೊಳ್ಳಬಹುದು –

(1) ಬಿಲಾಸ ಖಾನ, ಗೋಪಿ ಹಾಗೂ ವರ್ಗಮಿತ್ರರು – ಮಹತ್ವಾಕಾಂಕ್ಷಿ ಪ್ರಯತ್ನಗಳು.

(2) ಪತ್ತೆದಾರಿ ಡೆರಿಕಾ ಡಿಸೋಝಾ ಹಾಗೂ ಕುಂಟ ರಾಠೋಡ – ಪತ್ತೆದಾರಿ ತಂತ್ರಗಳನ್ನು ಅಳವಡಿಸಿಕೊಂಡ ರಚನೆಗಳು.

(3) ಪತ್ರಲು, ಗೋಪಣ್ಣನ ಮಂಡದಿ, ಘಾಟಕೋಪರ – ಮಾನವೀಯ ಸಂಬಂಧಗಳನ್ನು ಅನ್ವೇಷಿಸಲೆತ್ನಿಸುವ ಸರಳ ಕತೆಗಳು.

ಬಿಲಾಸಖಾನ. ಗೋಪಿ, ಕತೆಗಳು ನಮ್ಮ ಕಥಾಪರಂಪರೆಯಲ್ಲಿನ ಅತ್ಯುನ್ನತ ಕಥೆಗಳ ಮಾದರಿಗಳಿಗೆ ಸೇರಿಸಬಹುದಾದ ಶಕ್ತಿಯುಳ್ಳ ರಚನೆಗಳು.

'ಬಿಲಾಸಖಾನ' ಕತೆಯು ಖ್ಯಾತ ಸಂಗೀತಕಾರ, ಅಕ್ಬರ ಬಾದಶಹನ ದರ್ಬಾರಿ ಗಾಯಕ, ತಾನಸೇನರ ಮಗನನ್ನು ಕುರಿತ ಕತೆಯಾದರೂ, ಈ ಕತೆ ಆ ಕಾಲದ ಸಾಂಸ್ಕೃತಿಕ, ಚಾರಿತ್ರಿಕ ದಾಖಲೆಯಾಗಿ ಬಿಡುವಷ್ಟು ವ್ಯಾಪಕ ಹರಹನ್ನು ಹೊಂದಿದೆ. ಕನ್ನಡದ ಅಕ್ಷರ ಪ್ರಪಂಚದೊಳಕ್ಕೆ ಕಾಲಿರಿಸದೆ ಹೊರಗುಳಿದ ನಾದ-ಪ್ರಪಂಚದ, ಸಂಗೀತ conceptಗಳ ಚರ್ಚೆ, ಅದರ ಏರು-ಇಳವುಗಳೆಲ್ಲ ಇಲ್ಲಿ ಅನುಭವವಾಗಿ ಮೈ ಪಡೆದುಕೊಳ್ಳುತ್ತದೆ. ಅತ್ರೌಳಿ ಎಂಬ ಸಣ್ಣ ಹಳ್ಳಿಯಿಂದ ದಿಲ್ಲಿಗೆ ಸಾಗಿ, ಅಕ್ಬರ ಬಾದಶಹನ ದರ್ಬಾರಿನಲ್ಲಿ ಮನ್ನಣೆ ಗಳಿಸಿದ ತಾನಸೇನರನ್ನು ಕುರಿತು, ಅವರ ಹೊರಗಣ ಬದುಕನ್ನು ಕುರಿತು ಸ್ಥೂಲವಾಗಿ ಎಲ್ಲರಿಗೂ ಗೊತ್ತು. ಆದರೆ ಈ ಕತೆ–ತಾನಸೇನರ ಅಂತರಂಗ ಪ್ರಪಂಚಕ್ಕೆ ಕೈ ಹಾಕುತ್ತದೆ. ಇತಿಹಾಸದಲ್ಲಿ ಹೂತು ಹೋದ ಸಂಗತಿಗಳನ್ನು, ಸೂಕ್ಷ್ಮಗಳನ್ನು ಪ್ರಧಾನ ಆಶಯವನ್ನಾಗಿ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ.

ತಾನಸೇನ–ಅತ್ರೌಳಿಯಲ್ಲಿ ಬಿಟ್ಟುಬಂದ, ತಮ್ಮ ಮೊದಲನೆ ಹೆಂಡತಿ ಹಮೀದ ಬಾನು, ಅವರ ಏಕೈಕ ಮಗ ಬಿಲಾಸಖಾನರ ಬವಣೆಯನ್ನು ಚಿತ್ರಿಸುತ್ತಿರುವಂತೆ, ದಿಲ್ಲಿಗೆ ಸೇರಿ ಮತ್ತೆ ಮೂವರನ್ನು ಮದುವೆಯಾಗಿ ಭೋಗದಲ್ಲಿದ್ದರೂ, ಆ ಭೋಗ ಕೂಡ ಈರ್ಷ್ಯೆ, ಅಸೂಯೆಯ ಮಧ್ಯದಲ್ಲಿಯೇ ಬಂದದ್ದು ಎಂಬುದನ್ನು ತೋರುತ್ತದೆ. ತಾನಸೇನರ ಮತ್ತು ಆಕ್ಬರನ ಮಗ ಸಲೀಮನ ಮಧ್ಯೆ ಆಕಸ್ಮಿಕವಾಗಿ 'ರಾಮುಪ್ಯಾರಿ' ಎಂಬ ವೇಶ್ಯೆಯ ವಿಷಯದಲ್ಲಿ ಉಂಟಾದ ವಿರಸ, ಅದು ಸಲೀಮನ ವಿವಾಹದಲ್ಲಿ ತಲುಪಿದ ಪರಾಕಾಷ್ಠೆ. ಅಂತಹ ಸಂಕಷ್ಟದ ಸಂದರ್ಭದಲ್ಲಿಯೇ ವ್ಯಾಪಸೆದು ಬಂದ ಹೊಸ 'ದರಬಾರಿ' ರಾಗದ ಹುಟ್ಟು, ನಂತರ ಅತ್ರೌಳಿಯಲ್ಲಿ ಬಿಟ್ಟುಬಂದ ಮಗ ಬಿಲಾಸ ಖಾನ–ದೆಹಲಿಗೆ ಬಂದು, ತಾನಸೇನರನ್ನು 'ಅಪ್ಪಾ' ಎಂದು ಕರೆಯಲಾಗದೆ ಪಡುವ ಸಂಕಟ, ಆತನ ಸಂಗೀತ ಕುರಿತಾದ ಒಲುಮೆ – ಇಂತಹ ಹಲವು ಹತ್ತು ವಿಷಯಗಳು ಕಲಾತ್ಮಕವಾಗಿ ಇಲ್ಲಿ ಚಿತ್ರಿತವಾಗಿವೆ.

ಕಡೆಗೆ 'ಬಿಲಾಸಖಾನ' ತನ್ನ ಮಗ ಎಂದು ತಾನಸೇನರಿಗೆ ತಿಳಿಯುವ ಹೊತ್ತಿಗೆ, ಬಿಲಾಸಖಾನ ತನ್ನ ತಂದೆಯ ಕನವರಿಕೆಯಲ್ಲಿ ಅಸುನೀಗುತ್ತಾನೆ. ಆಗ ಹೆಂಡತಿ ಹಮೀದಾ ಬಾನುವಿನ ಕೋರಿಕೆಯ ಮೇಲೆ ತಾನಸೇನರು ದುಃಖಾತಿಶಯದಿಂದ ಹಾಡುವ ಹಾಡು ಕೊನೆಗೆ ಹೊಸರಾಗ 'ಬಿಲಾಸಖಾನಿ ತೋಡಿ'ಯ ಹುಟ್ಟಿನಲ್ಲಿ ಮುಕ್ತಾಯಗೊಳ್ಳುತ್ತದೆ. ಕತೆಯ ಹಂದರದಲ್ಲಿ ಹುಟ್ಟಿಕೊಳ್ಳುವ ಎರಡು ಹೊಸ ರಾಗಗಳು – "ಇಂಥ ದುಃಖ ತೀವ್ರತೆಗಳ ಕೇಂದ್ರಬಿಂದುಗಳ ಮಧ್ಯದಿಂದಲೇ ಒಡಮೂಡುತ್ತವೆಂಬುದನ್ನು ಗಮನಿಸ ಬೇಕು."

ಇಂಥ ಸ್ಥೂಲ ಹಂದರದಲ್ಲಿ ಅನೇಕ ಸೂಕ್ಷ್ಮ ವಿಷಯಗಳ–ಕುಸುರಿ ಕೆಲಸ ನಡೆಸಿ ದಷ್ಟು ನಯವಾಗಿ, ಜಾಣ್ಮೆಯಿಂದ ಕತೆಗಾರರು ತಂದಿದ್ದಾರೆ. ಆ ಕಾಲದ ದರ್ಬಾರು, ಅಲ್ಲಿನ ಸಂಗೀತ ಕಚೇರಿಗಳು, ರಾಜಕುಮಾರನ ಮತಾಂಧತೆ, ಕಾಮುಕತೆ, ವೇಶ್ಯಾ ಪ್ರಪಂಚ ಪುಣೇಕರರ ಭಾಷೆಯಲ್ಲಿ ನೈಜ ಪ್ರಪಂಚವಾಗಿ, ಅನುಭವಜನ್ಯವಾಗಿ ಪುನರ್ ಸೃಷ್ಟಿಗೊಳ್ಳುತ್ತವೆ. ನಿಜಕ್ಕೂ ಈ ಕತೆಯೇ ಈ ಸಂಕಲನದ ಶ್ರೇಷ್ಠ ಕತೆಯಾಗಿದೆ.

'ಗೋಪಿ' ಎನ್ನುವ ಕತೆ ಕೂಡ ಈ ಸಂಕಲನದ ಇನ್ನೊಂದು ಅತ್ಯುತ್ತಮ ಕತೆ. 'ಗೋಪಿ' ಎನ್ನುವ ಹದಿನೇಳು ವರ್ಷದ ಹುಡುಗ ಈ ಕಥೆಯ ಕಥಾನಾಯಕನಾದರೂ, ನಿರೂಪಕ ಬಾಳಕೃಷ್ಣನ ಕಣ್ಣೋಟದಲ್ಲಿ, ಭಾಗಕ್ಕ ಎನ್ನುವ ಬಡ ಗೃಹಿಣಿಯ ಬದುಕು– ಒಂದು ವಿಷಮಯ ಸಂದರ್ಭದಲ್ಲಿ ಸಿಕ್ಕು ಜರ್ಜರಿತಗೊಳ್ಳುತ್ತಿರುವುದನ್ನು ಹೇಳುವ ಕತೆ ಯಾಗಿದೆ. ಗೋಪಿ ಈ ವಿಷಮಯ ಸಂದರ್ಭದ ಕೇಂದ್ರಬಿಂದು. ಅವನ ಚೇಷ್ಟೆಗಳ ಸುತ್ತಾ ಘಟನೆಗಳು ಬಿಚ್ಚಿಕೊಳ್ಳುತ್ತಾ, ಬೆಚ್ಚಿಬೀಳುವಂತಹ ನಗ್ನಸತ್ಯಗಳತ್ತ ಓದುಗನನ್ನು ಕೊಂಡೊಯ್ದು ಗಾಢ ತಪ್ತತೆಯನ್ನು ಸೃಷ್ಟಿಸಿರುವುದರಲ್ಲಿ ಯಶಸ್ವಿಯಾಗಿದೆ.

ಗೋಪಿಯ ಖಳ ವ್ಯಕ್ತಿತ್ವವನ್ನು, ಆತ ಭಾಗಕ್ಕನ ಸಂಸಾರದಲ್ಲಿ ಉಂಟುಮಾಡು ತ್ತಿರುವ ಹಾಲಾಹಲವನ್ನು ತಡೆಗಟ್ಟಲು ಮುಂದಾಗುವ ಬಾಳಕೃಷ್ಣ, ಆ ಸಂಸಾರವನ್ನು ಮತ್ತಷ್ಟು ಹೀನಸ್ಥಿತಿಗೆ, ಕ್ರೌರ್ಯದ ಬಾಯಿಗೆ ದೂಡುವಲ್ಲಿ ಕೊನೆಯಾಗುತ್ತದೆ. ಗೋಪಿಯ ರಾಕ್ಷಸಿ ವರ್ತನೆಯ ಹಿಂದೆ, ಗೋಪಿಯ ತಂದೆ ಶ್ಯಾಮಶಾಸ್ತ್ರಿಯು–ಭಾಗಕ್ಕ–ಶ್ರೀಪಾದ ರಾಯರ ಸಂಸಾರಕ್ಕೆ ಕೊಟ್ಟಿರುವ ಹನ್ನೆರಡುನೂರು ರೂಪಾಯಿ ಸಾಲ ಮತ್ತು ಬಡ್ಡಿಯ ಚಕ್ರವಿರುವುದು ಅರ್ಥವಾಗುವ ಹೊತ್ತಿಗೆ ಅನರ್ಥ ನಡೆದುಹೋಗಿ ಬಿಟ್ಟಿರುತ್ತದೆ. ಹೇಗೋ ಗೋಪಿಯ ತುಂಟತನ, ಖಳ ವ್ಯಕ್ತಿತ್ವ, ಸಹಿಸಿಕೊಂಡು ಹೋಗುತ್ತಿದ್ದ ಸಂಸಾರ, ಬಾಳಕೃಷ್ಣನ ಉದ್ಧಾರಪ್ರೇರಿತ ವರ್ತನೆಯಿಂದ ಆ ಸಂಸಾರದ ಸ್ಥಿತಿ ಮತ್ತಷ್ಟು ಹದಗೆಡುವ ಸ್ಥಿತಿಯ ನೈಜ ಚಿತ್ರಣ ಇಲ್ಲಿ ಕಾಣಬರುತ್ತದೆ.

ನಾನು ಮೆಚ್ಚಿಕೊಂಡ ಮತ್ತೊಂದು ಕತೆ 'ವರ್ಗಮಿತ್ರರು'. ಈ ಕತೆಯಲ್ಲಿ ಯೌವ್ವನಾವಸ್ಥೆ ಮತ್ತು ಗೃಹಸ್ಥಾಶ್ರಮದ ವಿವಿಧ ಭಾವಗಳು ಮುಖಾಮುಖಿಯಾಗಿ ಸಂಘರ್ಷಿಸುತ್ತಾ, ಗೃಹಸ್ಥಾಶ್ರಮಕ್ಕಿರುವ ಗಾಂಭೀರ್ಯವನ್ನು ಎತ್ತಿ ಹೇಳುವುದರಲ್ಲಿ ಯಶಸ್ವಿಯಾಗಿದೆ. ಎಂದೋ ಹೈಸ್ಕೂಲ್ ದಿನಗಳಲ್ಲಿ ವರ್ಗಮಿತ್ರಳಾದ ಸುಮಿತ್ರಾ ದೇಸಾಯಿ – ತಾವು ವಾಸಿಸುತ್ತಿರುವ ರೂಮಿನ ಎದುರೇ ಗೃಹಿಣಿಯಾಗಿ ವಾಸ್ತವ್ಯ ಹೂಡಿದಾಗ, ಇನ್ನೂ ವಿದ್ಯಾರ್ಥಿಗಳಾದ ರಾಮ, ವಸಂತರಲ್ಲಿ ವಿವಿಧ ಕಲ್ಪನೆಗಳು ಗರಿ ಗೆದರುತ್ತವೆ. ಸುಮಿತ್ರಾಳನ್ನು–ಅವರಿನ್ನೂ ತಮ್ಮ ಕಾಲೇಜಿನ, ಬಾಲ್ಯದ, ಯೌವ್ವನದ ಕನಸುಗಳಿಂದಲೇ ಚಿತ್ರಿಸಿಕೊಳ್ಳುತ್ತಾರೆ. ವಸಂತನಾದರೋ, ಒಂದು ಹೆಜ್ಜೆ ಮುಂದೆ ಹೋಗಿ ಅನೈತಿಕ ಸಂಬಂಧದ ಸಾಧ್ಯತೆಗಳನ್ನು ಊಹಿಸುತ್ತಾನೆ. ಸುಮಿತ್ರೆಗಾದರೋ- ಬಾಲ್ಯ, ಯೌವ್ವನ ಈಗಾಗಲೇ ಕಳೆದುಹೋದ ಅಮೂಲ್ಯ ಸಮಯ. ನೆನಪಿಸಿಕೊಳ್ಳ ಬಹುದಾದ ಮಧುರ ದಿನಗಳು. ವಸಂತ, ರಾಮರಲ್ಲಿ ತನ್ನ ಕಳೆದ ಬಾಲ್ಯದ ದಿನಗಳನ್ನು ಕಾಣಲೆತ್ನಿಸುತ್ತಾಳೆ. ಸದ್ಯದ ಬೇಜಾರಿನಿಂದ, ಏಕಾಂಗಿತನದಿಂದ – ಭೂತಕ್ಕೆ ಕ್ಷಣ ಹೋಗಿಬರುವ ಮಾರ್ಗವಾಗಿ ರಾಮ-ವಸಂತರನ್ನು ಕಾಣುತ್ತಾಳೆ.

ಸುಮಿತ್ರೆಯ ಆಹ್ವಾನದ ಮೇರೆಗೆ, ಆಕೆಯ ಮನೆಗೆ ವಿವಿಧ ರಂಜಕ, ಕಾಮುಕ ಕಲ್ಪನೆಗಳಿಂದ ಹೋದ ವಸಂತ ಸುಮಿತ್ರಾ ದೇಸಾಯಿಯ ಗಾಂಭೀರ್ಯ, ಕರುಣೆ, ಪ್ರೀತಿ, ಪ್ರೌಢತನ, ಪ್ರಬುದ್ಧತೆ, ಆಕೆಯ ಗಂಡನ ಸಹಚರ್ಯ, ಮುದ್ದುಮಗುವಿನ ದರ್ಶನ – ಇತ್ಯಾದಿಗಳು ವಸಂತನ ಮನಸ್ಸಲ್ಲಿ ಅದ್ಭುತ ಮಾರ್ಪಾಡುಗಳನ್ನು ತಂದುಬಿಡುತ್ತವೆ. ಕೌಟುಂಬಿಕ ಜೀವನದ ವಿಶಾಲ ಗಂಭೀರತೆಯ ದರ್ಶನದೊಂದಿಗೆ ಕತೆ ಮುಕ್ತಾಯಗೊಳ್ಳು ತ್ತದೆ.

ಈ ಸಂಕಲನಕ್ಕೆ 'ಡೆರಿಕ್ ಡಿಸೋಝಾ' ಎನ್ನುವ ಹೆಸರನ್ನು ಇಟ್ಟಿರುವುದನ್ನು ನೋಡಿದರೆ ಈ ಕತೆ ಪುಣೇಕರರ ಮಹತ್ವಾಕಾಂಕ್ಷೆಯ ರಚನೆಯೆಂದೇ ಭಾವಿಸಬಹುದು.

ತಂತ್ರಕೌಶಲ್ಯ, ಕತೆಯ ಬಂಧ, ಪ್ರಯೋಗಶೀಲತೆಯ ದೃಷ್ಟಿಯಿಂದ ಈ ಮಾತನ್ನು ಒಪ್ಪಬಹುದಾದರೂ ಈ ಪತ್ತೆದಾರಿ ತಂತ್ರವೇ ಈ ಕತೆಯ ಮುಖ್ಯ ಸಮಸ್ಯೆಯಾಗಿದೆ.

ಡಾ॥ ಸಕ್ಸೇನಾರ ನರ್ಸಿಂಗ್ ಹೋಂನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅರುಣಪ್ರಸಾದ ಎಂಬ ಮುಪ್ಪಾದ ಮುದುಕನ ಕೊಲೆ, ಅದರ ಪತ್ತೆದಾರಿಕೆಗೆ ತೊಡಗುವ ಡೆರಿಕ್ ಡಿಸೋಝಾ ಮತ್ತು ಇನ್‌ಸ್ಪೆಕ್ಟರ್ ಪೆರುಮಾಳ್ ಅವರ ಪ್ರಯತ್ನ-ಯಶಸ್ಸು – ಈ ಕತೆಯ ವಸ್ತು.

ಮುದುಕ ಅರುಣಪ್ರಸಾದನಿಗೆ ಆರ್ಸೆನಿಕ್ ವಿಷ ಕೊಟ್ಟವರಾರು – ವಿಲ್‌ನ್ನು ಬರೆಸಿ, ರುಜು ಮಾಡಿದ ಡಾ॥ ಸಕ್ಸೇನಾರೇ, ವಿಲ್‌ನಲ್ಲಿ ಫಲಾನುಭವಿಯಾದ ನರ್ಸ್ ಸಾಳುಂಬಾಯಿಯೇ, ಜವಾನ ತೋಟಿ ಶಿವಾಜಿಯೇ, ವಿಲ್‌ನ್ನು ಬದಲಿ ಮಾಡೆಂದು, ವಿನಂತಿಸಲೆಂದು ಆಕಸ್ಮಿಕವಾಗಿ ಬಂದ ಅರುಣಪ್ರಸಾದರ ಮಗ ದ್ವಾರಕಪ್ರಸಾದನೇ – ಇಂಥ ಅನ್ವೇಷಣೆಯಲ್ಲಿ ಪತ್ತೆದಾರ ಡಿಸೋಝಾ, ಇನ್‌ಸ್ಪೆಕ್ಟರ್ ಪೆರುಮಾಳ್ ತೊಡಗಿ, ಕಡೆಗೆ ಸಾಳುಂಬಾಯಿಯ ಗಂಡ, ಕೆಮಿಸ್ಟ್ ಜೀವನರಾಯ ಎಂದು ಪತ್ತೆ ಮಾಡುತ್ತಾರೆ.

ರಹಸ್ಯವನ್ನೇ ಕಾಪಾಡಿಕೊಂಡು ಹೋಗುವತ್ತ ಕತೆಗಾರನ ಲಕ್ಷ್ಯವಿರುವುದರಿಂದ ಪಾತ್ರಗಳ ಅಂತರಂಗ ಇನ್ನಿತರ ಕತೆಗಳಲ್ಲಿ ತೆರೆದುಕೊಂಡಂತೆ ತೆರೆದುಕೊಳ್ಳುವುದಿಲ್ಲ. ಅಂತಿಮ ಆಸ್ಫೋಟದತ್ತ ಕತೆಗಾರನ ನಿಗ ಕೇಂದ್ರೀಕರಣಗೊಂಡಿರುವುದರಿಂದಾಗಿ, ಪ್ರತಿಯೊಂದು ಘಟನೆಯನ್ನು, ಪಾತ್ರಗಳನ್ನೂ ಆ ಉದ್ದೇಶಕ್ಕಾಗಿಯೇ ದುಡಿಸಿಕೊಳ್ಳುವ ಅನಿವಾರ್ಯಕ್ಕೆ ಲೇಖಕ ಕಟ್ಟುಬಿದ್ದಿದ್ದಾನೆ. ಹೀಗಾಗಿ ಇಲ್ಲಿ ಪತ್ತೆದಾರಿಕೆಗೆ ಅಗತ್ಯವಾದ ಓಘ, ಚುರುಕು, ತಿರುವುಗಳು ಇದ್ದರೂ ಅವು ಪೂರ್ವಕಲ್ಪಿತವಾಗಿವೆ. ಇಷ್ಟಾಗಿಯೂ ಈ ಪತ್ತೆದಾರಿಕೆಯ ಹಂದರದೊಳಗೆ – ಮಾನವೀಯ ಸಂಬಂಧಗಳು ಹಾದುಹೋಗುವುದನ್ನು ಕಾಣಬಹುದಾಗಿದೆ.

ಬೃಹತ್ ನಗರಗಳಲ್ಲಿ ಮನೆ ಮಾಡಿರುವ ಮಾಫಿಯಾ ತಂಡವೊಂದಕ್ಕೆ ಸಿಕ್ಕು ಸಾಯುವ ಒಬ್ಬ ನತದೃಷ್ಟ ಕುಂಟನ ಕತೆ 'ಕುಂಟ ರಾಠೋಡ'. ದಿಲ್ಲಿಯ ಒಂದು ಕೆಟ್ಟ ಪರಿಸರದಲ್ಲಿ ಚಿಕ್ಕ ಅಂಗಡಿಯೊಂದನ್ನು ನಡೆಸುವ ಕುಂಟ ರಾಠೋಡ ಒಂದು ವಿಶಿಷ್ಟ ಸಂದರ್ಭದಲ್ಲಿ ಇಬ್ಬರು ಕೊಲೆಗಾರರ ಹಾಗೂ ಪೊಲೀಸರ ಮಧ್ಯೆ ಸಿಕ್ಕಿಬೀಳುತ್ತಾನೆ. ಎರಡೂ ಕಡೆಯವರೂ ತಮಗೆ ನೆರವಾದರೆ ಅವನ ಬಡತನ ನೀಗಿಸುವ ಆಶ್ವಾಸನೆ ನೀಡಿ ಅವನ ಸಹಾಯ ಪಡೆದು ಕೈಕೊಡುತ್ತಾರೆ. ಕೊಲೆಗಾರನನ್ನು ಹಿಡಿದ ಪೊಲೀಸ್ ಕಾನ್‌ಸ್ಟೇಬಲ್ ಬಹುಮಾನ ಗಳಿಸಿ ನಾಪತ್ತೆಯಾದರೆ ಕೊಲೆಗಾರ ಜೈಲಿನಿಂದ ಬಿಡುಗಡೆಯಾಗಿ ಬಂದನಂತರ, ಕುಂಟ ರಾಠೋಡನ ಕೊಲೆಯಾಗುತ್ತದೆ. ಈ ಕತೆ ತನ್ನ ಚುರುಕುತನ ಶೈಲಿಯಿಂದಾಗಿ ಓದುಗನನ್ನು ಸೆರೆಹಿಡಿಯುವಲ್ಲಿ ಅಸಾಧಾರಣ ಯಶಸ್ಸು ಪಡೆಯುತ್ತದೆ. ನಗರದ ಭೀಭತ್ಸ ಪರಿಸರ, ಅಲ್ಲಿ ಕಳ್ಳರೂ–ಕೊಲೆಗಡುಕರೂ, ಪೊಲೀಸರೂ, ವಕೀಲರೂ

ಒಂದೇ ವ್ಯಕ್ತಿತ್ವದ ವಿವಿಧ ಮಾದರಿಗಳೆಂಬುದನ್ನು ತೋರಿಸಿಕೊಡುತ್ತದೆ. 'ಪತ್ತಲು', 'ಘಾಟಕೋಪರ' ಹಾಗೂ 'ಗೋಪಣ್ಣನ ಮಡದಿ' ಮೇಲಿನ ಕತೆಗಳಿಗೆ ಹೋಲಿಸಿದರೆ ಸರಳ ರಚನೆಗಳೆಂದೇ ಹೇಳಬಹುದು. 'ಘಾಟಕೋಪರ' ಕತೆಯೊಂದರಲ್ಲಿ ಮಾತ್ರ ನಾವು ನಮ್ಮ ನವ್ಯಕತೆಗಳ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಮುಂಬೈ ಜೀವನದ ಅಸ್ವಸ್ಥತೆ. ಕೃತಿಮತೆ, ಲಾಭಕೋರತನ, ಅಮಾನವೀಯವಾದ ಕೃತಕ ಸಂಬಂಧಗಳು ಈ ಕತೆಯಲ್ಲಿ ಚಿತ್ರಿತವಾಗಿವೆ. ಈ ಕತೆಯ ನಾಯಕ ಅನಿಲ ಕರ್ಣಿಕ – ನವ್ಯಕಥಾನಾಯಕ ನಂತೆ ಕಾಣಬರುತ್ತಾನೆ.

ಒಟ್ಟಾರೆ ಇಲ್ಲಿನ ಕತೆಗಳನ್ನು ಕುರಿತು ಇಷ್ಟು ಹೇಳಬಹುದು: ಪುಣೇಕರರಿಗೆ ಬದುಕು ಮುಖ್ಯ. ಬದುಕು ಹೇಗಿದೆಯೋ ಹಾಗೆ ಹೇಳಿಬಿಟ್ಟರೆ ಸಾಕು, ಅದು ಅತ್ಯುತ್ತಮ ಕೃತಿಯಾಗಿ ಬಿಡುತ್ತದೆಂಬ ನಂಬುಗೆ ಅವರದು. ಬಿಲಾಸಖಾನ, ಗೋಪಿ, ವರ್ಗಮಿತ್ರರು – ಪುಣೇಕರರ ಸೃಜನಶೀಲ ಕಥಾಶಕ್ತಿಯನ್ನು ತೋರಿಸುವ ಉತ್ತಮ ಮಾದರಿಗಳಾಗಿವೆ. ಭಾಷೆಯ ಎಲ್ಲಾ ಸಾಧ್ಯತೆಗಳನ್ನು ಸೂರೆಗೊಂಡು ಬರೆಯುವ ಕನ್ನಡದ ಕೆಲವೇ ಬರಹಗಾರರಲ್ಲಿ ಶಂಕರ ಮೊಖಾಶಿ ಪುಣೇಕರರು ಒಬ್ಬರು.

ಹಾಗೆ ನೋಡಿದರೇ, ಪುಣೇಕರರು ಬಹಳ ತಡವಾಗಿ ತಮ್ಮ ಈ ಕಥಾಸಂಕಲನ ವನ್ನು ಪ್ರಕಟಿಸಿದ್ದಾರೆ. ಈ ಮೊದಲೇ ಈ ಕತೆಗಳು ಇಡಿಯಾಗಿ ಪ್ರಕಟಗೊಂಡು ಒಂದಷ್ಟು ಚರ್ಚೆ ನಡೆದಿದ್ದರೆ, ಅವರು ಇನ್ನಷ್ಟು ಉತ್ತಮ ಕತೆ ಬರೆಯಲಿಕ್ಕೆ ಪ್ರೇರಣೆ ಸಿಗುತ್ತಿತ್ತೇನೋ – ಇಷ್ಟಾಗಿಯೂ ಇನ್ನೂ ಅವರು ಉತ್ತಮ ಕತೆಗಳನ್ನು ಬರೆಯಬಲ್ಲ ರೆಂಬ ಆಶಾವಾದದೊಂದಿಗೆ ಈ ಲೇಖನ ಮುಗಿಸಬಹುದು.

(ಈಚೆಗೆ ಗದಗನಲ್ಲಿ 'ಸಿಂಚನ ಗ್ರಂಥಮಾಲೆ'ಯ ಆಶ್ರಯದಲ್ಲಿ ಪುಣೇಕರರ ಪ್ರಥಮ ಕಥಾಸಂಕಲನ ಬಿಡುಗಡೆಯಾದಾಗ ಮಂಡಿಸಿದ ಪ್ರಬಂಧ)

"ಅಪ್ಪಿದಡೆ ಅಸ್ತಿಗಳು ನುಗ್ಗು ನುಸಿಯಾಗಬೇಕು"

— ಮಹಾದೇವಿಯಕ್ಕನ ಒಂದು ವಚನ

— ಟಿ. ಆರ್. ಚಂದ್ರಶೇಖರ

– 1 –

ಅಕ್ಕ ಮಹಾದೇವಿಯ ಕಾವ್ಯದ ಕಸುಬುದಾರಿಕೆಯನ್ನು ಆಕೆಯ ಅನೇಕ ವಚನ ಗಳಲ್ಲಿ ಕಾಣಬಹುದಾಗಿದೆ. ಮಹಾದೇವಿಯಕ್ಕನ ವಚನಗಳ ಒಂದು ಬಹು ಮುಖ್ಯ ಲಕ್ಷಣವೆಂದರೆ ಅಕ್ಕನ ವಿರಹ-ವಿಕಲಾವಸ್ಥೆಯ ಅಭಿವ್ಯಕ್ತಿಯಾಗಿದೆ. ಚನ್ನಮಲ್ಲಿಕಾರ್ಜುನ ನನ್ನು ಕೂಡಬೇಕೆಂಬ, ಸೇರಬೇಕೆಂಬ, ಒಲಿಸಿಕೊಳ್ಳಬೇಕೆಂಬ ತುಡಿತದ ತುರೀಯಾವಸ್ಥೆ

ಟಿ.ಆರ್. ಚಂದ್ರಶೇಖರ, ಅರ್ಥಶಾಸ್ತ್ರ ವಿಭಾಗ, ವಿಜಯನಗರ ಕಾಲೇಜು, ಹೊಸಪೇಟೆ–583 201

ಯನ್ನು ಅಕ್ಕನ ವಚನಗಳಲ್ಲಿ ಗಾಢವಾಗಿ ಕಾಣಬಹುದು. ಪ್ರೇಮ ಮತ್ತು ಚನ್ನಮಲ್ಲಿಕಾರ್ಜುನನೊಡನೆ ಗಾಢ ಸಂಬಂಧವನ್ನು ಸಾಧಿಸಬೇಕೆಂಬ ಆಶಯ ಆಕೆಯ ವಚನಗಳಲ್ಲಿ ಅಭಿವ್ಯಕ್ತಿಗೊಂಡಿವೆ.

ಚನ್ನಮಲ್ಲಿಕಾರ್ಜುನನನ್ನು ಸೇರಬೇಕೆಂಬ ಆಸೆ-ಬಯಕೆಯು ಆಕೆಯ ವಚನಗಳಲ್ಲಿ ಲೈಂಗಿಕ ಪ್ರತಿಮೆಗಳ ಮೂಲಕ ಪರಿಣಾಮಕಾರಿಯಾಗಿ ವ್ಯಕ್ತವಾಗಿವೆ. ಚನ್ನಮಲ್ಲಿಕಾರ್ಜುನನೊಡನೆ ತನ್ನ ಸಂಬಂಧವನ್ನು ಹೆಂಡತಿ-ಗಂಡನ ರೀತಿಯಲ್ಲೇ ಪರಿಭಾವಿಸಿರುವುದು ಆಕೆಯ ವಚನಗಳಲ್ಲಿನ ಪ್ರತಿಮೆಗಳಿಂದ ಸ್ಪಷ್ಟವಾಗುತ್ತದೆ.

o o o o

– 2 –

ಒಮ್ಮೆ ಕಾಮನ ಕಾಲ ಹಿಡಿವೆ
ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ
ಸುಡಲೀ ವಿರಹವ, ನಾನಾರಿಗೆ ಧೃತಿಗಡುವೆ ?
ಚನ್ನಮಲ್ಲಿಕಾರ್ಜುನ ಕಾರಣ
ಎಲ್ಲರಿಗೆ ಹಂಗುಗಿತ್ತಿಯಾದೆನವ್ವಾ. (ಮ.ವ. 253)

ಕೇಳವ್ವ, ಕೇಳವ್ವ ಕೆಳದಿ, ನಾನೊಂದು ಕನಸು ಕಂಡೆ
ಗಿರಿಯ ಮೇಲೊಬ್ಬ ಗೊರವ ಕುಳ್ಳಿರ್ದುದ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು ಬಂದೆನ್ನ
ನೆರೆದ ನೋಡವ್ವ.
ಆತನನಪ್ಪಿಕೊಳ್ಳುಡು ತಳುವೆಳಗಾದೆನು.
ಚನ್ನಮಲ್ಲಿಕಾರ್ಜುನನ ಕಂಡು
ಕಣ್ಣು ಮುಚ್ಚಿ ತೆರೆದು ತಳುವೆಳಗಾದೆನು. (ಮ.ವ. 263)

ಲೇಸುಹಾಸು ನೋಟವಾಭರಣ ಆಲಿಂಗನವಸ್ತ್ರ
ಚುಂಬನವಾರೋಗಣೆ ಲಲ್ಲೆ ಮಾತು ತಾಂಬೂಲ
ಲವಲವಿಕೆಯೆ ಅನುಲೇಪವೆನಗೆ
ಚನ್ನಮಲ್ಲಿಕಾರ್ಜುನನ ಕೂಟ ಪರಮಸುಖವವ್ವಾ. (ಮ.ವ.226)

ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು
ಇರುಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆಯಲ್ಲಿಪ್ಪೆನು
ಹಗಲಿರುಳು ನಿಮ್ಮ ಹಂಬಲದಲ್ಲಿ ಮೈಮರೆದೊರಗಿಪ್ಪೆನು

ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಒಲುಮೆ ನಟ್ಟು ಹಸಿವು ತೃಷೆ ನಿದ್ರೆಯು ತೊರೆದೆನಯ್ಯಾ.

(ಮ.ವ. 271)

ಹೀಗೆ ಮಹಾದೇವಿಯಕ್ಕನ ವಿರಹ–ವಿಕಳಾವಸ್ಥೆಯನ್ನು ಅಭಿವ್ಯಕ್ತಿಪಡಿಸುವ ಅಕ್ಕನ ವಚನಗಳು ಬೇಕಾದಷ್ಟಿದ್ದಾವೆ. ಬಸವಣ್ಣನಂತೆ ಸಾಮಾಜಿಕ ಸಿದ್ಧಾಂತವನ್ನಾಗಲಿ, ಅಲ್ಲಮಪ್ರಭುಗಳಂತೆ ಆಧ್ಯಾತ್ಮಿಕ ಸಿದ್ಧಾಂತವನ್ನಾಗಲಿ ಅಥವಾ ಚೆನ್ನಬಸವಣ್ಣನಂತೆ ಧಾರ್ಮಿಕ ಸಿದ್ಧಾಂತವನ್ನಾಗಲಿ ಅಕ್ಕನ ವಚನಗಳು ಒಳಗೊಂಡಿಲ್ಲ. ಚೆನ್ನಮಲ್ಲಿಕಾರ್ಜುನನನ್ನು ಕೂಡುವ, ಸೇರುವ, ನೆರೆಯುವ, ಒಲಿಸುವ ಬಗೆ ಹೇಗೆ ಎಂಬ ಹಂಬಲ, ತುಡಿತ ಮತ್ತು ಅತೀವವಾದ ಕಾತುರತೆ ಬಿಟ್ಟರೆ ಆಕೆಯ ವಚನಗಳು ಬೇರಾವ ವಿಷಯಗಳನ್ನು ಒಳಗೊಂಡಂತೆ ಕಾಣುವುದಿಲ್ಲ. ಉಳಿದ ಶಿವಶರಣರು 'ಶರಣ ಸತಿ–ಲಿಂಗ ಪತಿ' ಸಿದ್ಧಾಂತವನ್ನು ಪ್ರತಿಪಾದಿಸಿದರೆ ಮಹಾದೇವಿಯಕ್ಕನು ಶರಣ ಸತಿ–ಲಿಂಗ ಪತಿಯನ್ನೇ ಬದುಕಿದ್ದಾಳೆ. ಪ್ರಿಯತಮೆ-ಪ್ರಿಯಕರ ಸಂಬಂಧದ ಅನುಭಾವ ಅಕ್ಕನಿಗೆ ಸಹಜವಾಗಿತ್ತು.

o o o o

– 3 –

ಮಹಾದೇವಿಯಕ್ಕನ ವಿರಹ-ವಿಕಳಾವಸ್ಥೆಯು ದೈವಿಕ ಅಥವಾ ಆಧ್ಯಾತ್ಮಿಕ ವಿರಹವಾಗಿದೆ. ದೈಹಿಕ ವಿರಹವು ದೈವಿಕ ವಿರಹವಾಗುವ ಪರಿಯನ್ನು ಅಕ್ಕನ ವಚನಗಳು ಮನವರಿಕೆ ಮಾಡಿಕೊಡುತ್ತವೆ. ದೈಹಿಕ ವಿರಹವು ದೈವಿಕ ವಿರಹವಾಗುವ ಪರಿಗೆ ಅಕ್ಕನ ವಚನಗಳಿಗಿಂತ ಹೆಚ್ಚಾಗಿ ಅಕ್ಕನ ಬದುಕೇ ಒಂದು ನಿದರ್ಶನವಾಗಿದೆ. ಈ ಬಗ್ಗೆ ಅಕ್ಕನ ವಚನವೊಂದನ್ನು ಕೂಲಂಕಷವಾಗಿ ಪರಿಶೀಲಿಸುವುದೇ ಈ ಟಿಪ್ಪಣಿಯ ಉದ್ದೇಶವಾಗಿದೆ.

o o o o

– 4 –

ಮಚ್ಚು ಅಚ್ಚುಗವಾಗಿ ಒಪ್ಪಿದ ಪರಿಯ ನೋಡಾ
ಎಚ್ಚಡೆ ಗರಿದೋರದಂತಿರಬೇಕು.
ಅಪ್ಪಿದಡೆ ಅಸ್ತಿಗಳು ನುಗ್ಗು ನುಸಿಯಾಗಬೇಕು
ಬೆಚ್ಚಡೆ ಬೆಸುಗೆಯುಸರಿಯುದಂತಿರಬೇಕು
ಮಚ್ಚು ಒಪ್ಪಿತ್ತು ಚೆನ್ನಮಲ್ಲಿಕಾರ್ಜುನನ ಸ್ನೇಹ, ತಾಯೆ.

(ಮ.ವ. 267)

ಈ ವಚನದ ಎಲ್ಲಾ 5 ಸಾಲುಗಳ ಪ್ರಾರಂಭದ ಎರಡನೆಯ ಅಕ್ಷರವು ಒತ್ತಕ್ಷರವಾಗಿದೆ.

ಮುಚ್ಚು
ಎಚ್ಚಡೆ
ಅಪ್ಪಿದರೆ
ಬೆಚ್ಚಡೆ
ಮುಚ್ಚು

ಈ ಒತ್ತಕ್ಷರಗಳು ವಚನದ ಅರ್ಥವನ್ನು, ವಚನದ ಆಶಯವನ್ನು ಸ್ಪಷ್ಟಗೊಳಿಸುವುದರಲ್ಲಿ ಯಶಸ್ವಿಯಾಗಿವೆ. ಈ ಸಾಲುಗಳನ್ನು ಓದಿದ ತಕ್ಷಣ ಒತ್ತಕ್ಷರಗಳಿರುವ ಪದಗಳು ಓದುಗನ ಗಮನವನ್ನು ಸೆಳೆದುಕೊಂಡುಬಿಡುತ್ತವೆ. ಮೊದಲನೆಯ ಓದಿಗೆ ಇದು ನಮ್ಮ ಆಸಕ್ತಿಯನ್ನು ಕೆರಳಿಸಿಬಿಡುತ್ತದೆ. ಒತ್ತಕ್ಷರಗಳಿರುವುದರಿಂದ ವಚನವನ್ನು ಮತ್ತೆ ಮತ್ತೆ ಓದಬೇಕೆನಿಸುತ್ತದೆ. ಈ ವಚನವನ್ನು ಗಟ್ಟಿಯಾಗಿ ಹೇಳುವುದರಿಂದ ಒತ್ತಕ್ಷರಗಳ ಬಳಕೆಯ ಮಹತ್ವ ಅರ್ಥವಾಗುತ್ತದೆ. ಗಟ್ಟಿಯಾಗಿ ಹೇಳಿಕೊಳ್ಳುವುದರಿಂದ ವಚನದ ಆಶಯದ ತೀವ್ರತೆ ಹೆಚ್ಚು ಸ್ಪಷ್ಟವಾಗುತ್ತದೆ.

ವಚನದ ಮೊದಲನೆಯ ಮತ್ತು ಮೂರನೇ ಸಾಲುಗಳಲ್ಲಿ ಮೂರು-ಮೂರು ಒತ್ತಕ್ಷರಗಳಿದ್ದಾವೆ. ಎರಡನೆಯ ಮತ್ತು ನಾಲ್ಕನೆಯ ಸಾಲುಗಳಲ್ಲಿ ಒಂದೊಂದು ಒತ್ತಕ್ಷರಗಳಿದ್ದಾವೆ.

'ಮುಚ್ಚು ಅಚ್ಚುಗವಾಗಿ ಒಪ್ಪಿದ ಪರಿಯ ನೋಡಾ'

ಎಂಬ ಕ್ರಿಯೆಗೆ

'ಎಚ್ಚಡೆ ಗರಿದೋರದಂತಿರಬೇಕು'

ಎಂಬುದು ನಿದರ್ಶನವಾಗಿದೆ.

'ಅಪ್ಪಿದಡೆ ಅಸ್ತಿಗಳು ನುಗ್ಗು ನುಸಿಯಾಗಬೇಕು'

ಎಂಬ ಕ್ರಿಯೆಗೆ

'ಬೆಚ್ಚಡೆ ಬೆಸುಗೆಯನರಿಯದಂತಿರಬೇಕು'

ಎಂಬುದು ನಿದರ್ಶನ.

ಇಡೀ ವಚನದ ಮೂಲ ಆಶಯ ಕೊನೆಯ ಸಾಲಿನ ನಿದರ್ಶನದಲ್ಲಿ ಪರಿಪೂರ್ಣಗೊಳ್ಳುತ್ತದೆ.

ಈ ವಚನದ ಎರಡನೆಯ ಮತ್ತು ನಾಲ್ಕನೆ ಸಾಲುಗಳ ನಿದರ್ಶನಗಳು ಹಲವು ದೃಷ್ಟಿಯಿಂದ ಮಹತ್ವದವುಗಳಾಗಿವೆ.

'ಎಚ್ಚಡೆ' ಮತ್ತು 'ಬೆಚ್ಚಡೆ' ಪದಗಳು ಕೂಡುವಿಕೆಯನ್ನು ಸೂಚಿಸುತ್ತವೆ. ಈ ಪದಗಳು 'ಕೂಡುವಿಕೆ'ಯಷ್ಟನ್ನೇ ಸೂಚಿಸುವುದಾಗಿದ್ದರೆ ಅವುಗಳಿಗೆ ಹೆಚ್ಚಿನ ಮಹತ್ವವೇನು ಪ್ರಾಪ್ತವಾಗುತ್ತಿರಲಿಲ್ಲ. 'ಎಚ್ಚಡೆ' ಮತ್ತು 'ಬೆಚ್ಚಡೆ' ಪದಗಳು ವೇದನೆ-ಯಾತನೆಯನ್ನು ಸಂಕೇತಿಸುತ್ತವೆ.

ಗರಿ (ಬಾಣದ ಹಿಂತುದಿ) ಕಾಣದಂತೆ ಬಾಣವು ಗುರಿಯ ದೇಹವನ್ನು ಪೂರ್ಣವಾಗಿ ಪ್ರವೇಶಿಸುವ ಬಗೆಯು ವೇದನೆ-ಯಾತನೆಯ ಭಾವನೆಯನ್ನು ಓದುಗನ ಮನಸ್ಸಿನಲ್ಲಿ ಮೂಡಿಸುತ್ತದೆ.

'ಎಚ್ಚಡೆ ಗರಿದೋರದಂತಿರ ಬೇಕು'

ಇದು ಬಾಣ ಬಿಡುವ, ಬಾಣ ಮತ್ತು ಬಾಣ ತಾಕಿದ ಗುರಿಯು ಒಂದಾಗುವ ಪರಿಯನ್ನು, ಬಾಣಬಿಡುವ ನೈಪುಣ್ಯವನ್ನು ಸೂಚಿಸುತ್ತದೆ. ಕಬ್ಬಿಣದ ತುಂಡುಗಳನ್ನು ಬೆಸೆಯಬೇಕಾದರೆ ಅವುಗಳನ್ನು ಕೆಂಪಗೆ ಕಾಯಿಸಬೇಕು ಮತ್ತು ಚಮ್ಮಟಿಕೆಯಿಂದ ಬಡಿಯಬೇಕು.

'ಬೆಚ್ಚಡೆ ಬೆಸುಗೆಯನರಿಯದಂತಿರಬೇಕು'

ಬಿಸಿಯಾಗಿ ಕಾಯಿಸುವ, ಕುಟ್ಟುವ, ಅಂಟಿಸುವ ಕ್ರಿಯೆಯು ಸಹ ವೇದನೆ-ಯಾತನೆಯನ್ನು ಮೂಡಿಸುವಂಥವಾಗಿವೆ.

'ಬೆಚ್ಚಡೆ ಬೆಸುಗೆಯನರಿಯದಂತಿರಬೇಕು'

'ಎಚ್ಚಡೆ ಗರಿದೋರದಂತಿರಬೇಕು'

ಈ ಸಾಲುಗಳನ್ನು ಓದುತ್ತಿದ್ದಂತೆ ಕೆಂಪಗೆ ಕಾಯಿಸುವ, ಚಮ್ಮಟಿಕೆಯಿಂದ ಬಡಿಯುವ ಮತ್ತು ಬಾಣ ಬಿಡುವ-ಬಾಣವು ಗುರಿಯ-ದೇಹವನ್ನು ಪ್ರವೇಶಿಸುವ ದೃಶ್ಯ ಕಣ್ಣಿನ ಮುಂದೆ ಸೃಷ್ಟಿಯಾಗಿಬಿಡುತ್ತದೆ.

ಈ ಎರಡೂ ಸಾಲುಗಳು (ಎಚ್ಚಡೆ ಮತ್ತು ಬೆಚ್ಚಡೆ) ಮೂಡಿಸುವ ಯಾತನೆ-ವೇದನೆಯ ಭಾವನೆಯನ್ನು ಇವೆರಡೂ ಸಾಲುಗಳ ಮಧ್ಯದ 'ಅಪ್ಪಿದಡೆ ಅಸ್ತಿಗಳು ನುಗ್ಗು ನುಸಿಯಾಗಬೇಕು' ಸಾಲು ಸಮರ್ಥಿಸುತ್ತದೆ ಮತ್ತು ಸ್ಪಷ್ಟಪಡಿಸುತ್ತದೆ.

ದೈಹಿಕ ಮೋಹವು (ಮುಚ್ಚು) ದೈವಿಕ ಸ್ನೇಹ (ಅಚ್ಚುಗ)ವಾಗಿ ಪರಿವರ್ತನೆಯಾದಾಗ ಅದು ಚನ್ನಮಲ್ಲಿಕಾರ್ಜುನನಿಗೆ ಒಪ್ಪಿಗೆಯಾಗುತ್ತದೆ ಎಂಬ ಭಾವನೆಯೊಂದಿಗೆ ವಚನ ಕೊನೆಗೊಳ್ಳುತ್ತದೆ. ಆದರೆ ಈ ಪರಿವರ್ತನೆಯು ಸಾಧನೆ ಸುಲಭ ಸಾಧ್ಯವಾದುದಲ್ಲ. ಈ ಸಾಧನೆ ಯಾತನಾಮಯವಾದುದು. ಇಂದ್ರಿಯಜನ್ಯವಾದುದು ಮೋಹ. ಆದರೆ ಈ ಮೋಹವನ್ನು ಮೀರಬೇಕೆಂಬ ಅಕ್ಕನ ಹಂಬಲ ಈ ವಚನದಲ್ಲಿ ಅಭಿವ್ಯಕ್ತವಾಗಿದೆ. ದೈಹಿಕ ಮೋಹವು ಮನಸ್ಸಿನ ಬಯಕೆಯಾದ ಸ್ನೇಹವಾಗಿ ಪರಿವರ್ತನೆ

ಯಾಗಬೇಕೆಂಬ ಹಂಬಲ ಈ ವಚನದಲ್ಲಿ ಸ್ಪಷ್ಟವಾಗುತ್ತದೆ. ಇಂತಹದೇ ಭಾವನೆ ವ್ಯಕ್ತಗೊಳ್ಳುವ ಇನ್ನೊಂದು ವಚನವೊಂದನ್ನು ನಾವು ನೋಡಬಹುದು.

ಎನ್ನ ಕಾಯುವಣ್ಣು, ಜೀವ ಬಯಲು
ಆವುದ ಹಿಡಿವೆನಯ್ಯಾ ದೇವಾ ?
ನಿನ್ನನಾವ ಪರಿಯಲ್ಲಿ ನೆನೆವೆನಯ್ಯಾ
ಎನ್ನ ಮಾಯೆಯನು ಮಾಣಿಸಯ್ಯಾ
ಚನ್ನಮಲ್ಲಿಕಾರ್ಜುನಾ.

ಈ ವಚನದಲ್ಲಿ 'ಕಾಯುವಣ್ಣು' ಲೌಕಿಕತೆಯನ್ನು ಪ್ರತಿನಿಧಿಸಿದರೆ 'ಜೀವ ಬಯಲು' ಆಧ್ಯಾತ್ಮಿಕತೆಯನ್ನು ಪ್ರತಿನಿಧಿಸುತ್ತದೆ. ಬದುಕಿನ ಈ ಎರಡು ಸ್ಥಿತಿಯನ್ನು ಸಮ್ಮಿಲನಗೊಳಿಸಬೇಕೆಂಬುದು ಆಕೆಯ ಹೋರಾಟವಾಗಿದೆ.

'ಮುಚ್ಚು ಅಚ್ಚುಗವಾಗಿ ಒಪ್ಪಿದ ಪರಿಯ ನೋಡಾ'

ಮತ್ತು 'ಮುಚ್ಚು ಒಪ್ಪಿತ್ತು ಚನ್ನಮಲ್ಲಿಕಾರ್ಜುನನ ಸ್ನೇಹ, ತಾಯೆ' ಎಂಬ ವಚನದ ಮೊದಲನೆಯ ಮತ್ತು ಕೊನೆಯ ಸಾಲುಗಳೆರಡರ ಆಶಯ ಒಂದೇ ಆಗಿದೆ. ಆದರೆ ಮೊದಲನೆಯ ಸಾಲು ದೈಹಿಕ ಪರಿವರ್ತನೆಯನ್ನು ಸೂಚಿಸಿದರೆ ಕೊನೆಯ ಸಾಲು ದೈವಿಕ ಪರಿವರ್ತನೆಯನ್ನು ಪ್ರತಿನಿಧಿಸುತ್ತದೆ.

ಲೌಕಿಕ ಮೋಹವು ಅಲೌಕಿಕ ಸ್ನೇಹವಾಗುವ ಕ್ರಿಯೆಯು ಎಷ್ಟೊಂದು ಯಾತನಾಮಯವಾಗಿರುತ್ತದೆ ಎಂಬುದು ವಚನದ 2, 3 ಮತ್ತು 4ನೇ ಸಾಲುಗಳಲ್ಲಿ ಸ್ಪಷ್ಟವಾಗುತ್ತದೆ.

o o o o

ವಚನಾಂಕ : ಮಹಾದೇವಿಯಕ್ಕನ ವಚನಗಳು.
ಸಂ.: ಆರ್. ಸಿ. ಹಿರೇಮಠ
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ-1973

[ಮುಚ್ಚು = ಮೋಹ, ಅಚ್ಚುಗ = ಸ್ನೇಹ, ಎಚ್ಚಡೆ = ಬಾಣಬಿಡುವುದು]

(ಈ ವಚನದ ಅಭ್ಯಾಸದಲ್ಲಿ ನೆರವು ನೀಡಿದ ಗೆಳೆಯ
ಇಟಗಿ ಈರಣ್ಣನವರಿಗೆ ಲೇಖಕ ಋಣಿಯಾಗಿದ್ದಾನೆ.)

ಹಸಿರು – ಜೀವನದ ಉಸಿರು

— ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

ಅನ್ನ, ಅರಿವೆ, ಆಶ್ರಯ, ಔಷಧಿ, ಅರಿವುಗಳು ಮಾನವನ ಮೂಲಭೂತ ಆವಶ್ಯಕತೆಗಳು. ಇವು ದೊರೆಯುವುದು ಹಸಿರಿನಿಂದ. ಇವುಗಳಿಗಿಂತ ಮುಖ್ಯವಾದುದು ಬದುಕಿನ ಜೀವಸೆಲೆಯಂತಿರುವ, ಉಸಿರಾಟಕ್ಕೆ ಬೇಕಾಗಿರುವ ಶುದ್ಧ ಗಾಳಿ, ಇದು ದೊರೆಯುವುದೂ ಹಸಿರಿನಿಂದಲೇ. ಆದುದರಿಂದ 'ಹಸಿರೇ ಜೀವನದ ಉಸಿರು'.

ವಾಹನಗಳು, ಕಾರ್ಖಾನೆಗಳು ಉಗುಳುವ ಮಲಿನ ಹೊಗೆ, ಚರಂಡಿಗಳ ಕೊಚ್ಚೆಯ ದುರ್ನಾತ, ಕ್ರಿಮಿನಾಶಕ ಔಷಧಿಗಳ ವಿಷ, ಕಂಡಕಂಡಲ್ಲಿ ಮಾಡುವ ಜಲ ಮಲಗಳ ದುರ್ಗಂಧ, ಮನೆಯ ಸುತ್ತಮುತ್ತಲಿನ ತಿಪ್ಪೆಗುಂಡಿಗಳ ದುರ್ನಾತ, ಕೊಳೆತ ಶರೀರಗಳ ದುರ್ವಾಸನೆ ಮತ್ತಿತರ ಅಂಶಗಳು ಸೇರಿ ವಾಯುಮಾಲಿನ್ಯ ಅತಿಯಾಗು ತ್ತಿದೆ. ನಮಗೆ ಬೇಕಾಗಿರುವ ಪ್ರಮಾಣದ ಪ್ರಾಣವಾಯುವನ್ನು ಪ್ರಯೋಗಾಲಯ ಗಳಲ್ಲಿ ತಯಾರಿಸಲು ಸಾಧ್ಯವಿಲ್ಲ. ಸಾಧ್ಯವಿದ್ದರೂ ಅಪಾರ ಬಂಡವಾಳ ತೊಡಗಿಸುವ ಶಕ್ತಿ ನಮಗಿಲ್ಲ. ಹಾಗಾದರೆ ಇದಕ್ಕೆ ಬೇರೆ ಮಾರ್ಗಗಳಿಲ್ಲವೇ ? ಖಂಡಿತ ಇವೆ.

ಪ್ರಕೃತಿಮಾತೆ ನಮಗಿತ್ತಿರುವ ಅದ್ಭುತ ವರಗಳಲ್ಲಿ ಅರಣ್ಯಸಂಪತ್ತು ಪ್ರಮುಖ ವಾದುದು. ಪ್ರಕೃತಿಯ ಸಮತೋಲನ ಕಾಪಾಡುವಲ್ಲಿ ಗಿಡಮರಗಳ ಪಾತ್ರ ಮರೆಯು ವಂತಹುದಲ್ಲ. ಪ್ರಕೃತಿಯಲ್ಲಿ ಮೊದಲಿಗೆ ಕಾಣಿಸಿಕೊಂಡದ್ದು ಹಸಿರು ಗಿಡಮರಗಳೇ ಎಂದು ಕಾಣುತ್ತದೆ. ಕ್ರಮೇಣ ಕ್ರಿಮಿಕೀಟಗಳು, ಪ್ರಾಣಿಗಳು, ಆದಿಮಾನವ, ಮಾನ ವರು ಉದ್ಭವಿಸಿದರೆಂದು ಜೀವವಿಕಾಸ ಶಾಸ್ತ್ರ ತಿಳಿಸುತ್ತದೆ. ಮಾನವ ನಾಗರಿಕನಾದಂತೆ ಕೃಷಿ, ಪೀಠೋಪಕರಣ, ಕಾಗದ ತಯಾರಿಕೆ, ಜಲಾಶಯ ನಿರ್ಮಾಣ, ವಿದ್ಯುತ್ ಉತ್ಪಾದನ, ಕಾರ್ಖಾನೆ, ರಸ್ತೆ ನಿರ್ಮಾಣಗಳಿಗೆಂದು ಕಾಡನ್ನು ಕಡಿಯುತ್ತ ಬಂದಿದ್ದಾನೆ. ತನ್ನ ಬದುಕಿಗೆ ಬೇಕಾದ ಸೌಲಭ್ಯಗಳನ್ನು ಪಡೆಯುವ ತರಾತುರಿಯಲ್ಲಿ ಒಂದು ನಿಯಂತ್ರಣವಿಲ್ಲದ್ದರಿಂದಾಗಿ ಕಾಡುಗಳು ನಾಶವಾದವು. ಇದರ ದುಷ್ಫಲವಾಗಿ ಅಸಮ ತೋಲನ ಎದುರಿಸಬೇಕಾಗಿದೆ.

ನಾವು ಶುದ್ಧ ಗಾಳಿಯನ್ನು (ಪ್ರಾಣವಾಯು) ತೆಗೆದುಕೊಂಡು ಅಶುದ್ಧ ಗಾಳಿ ಯನ್ನು ವಾತಾವರಣಕ್ಕೆ ಬಿಡುತ್ತೇವೆ. ಗಿಡ ಮರಗಳು 'ಹಸಿರು ಜೀವನದ ಉಸಿರು' ಎಂಬಂತೆ ಅಶುದ್ಧಗಾಳಿಯನ್ನು ಹೀರಿಕೊಂಡು ಶುದ್ಧ ಗಾಳಿಯನ್ನು ಬಿಡುವ ಮೂಲಕ ವಾತಾವರಣದ ಸಮತೋಲನ ಕಾಪಾಡುತ್ತವೆ. ಸ್ವಾರ್ಥಿ ಮಾನವ ಇಂಥ ಗಿಡ ಮರ ಗಳನ್ನು ನಿಷ್ಕರುಣೆಯಾಗಿ ಕಡಿಯುತ್ತಿದ್ದಾನೆ. ಅವನ ದುರಾಸೆಗೆ ಮಿತಿಯೇ ಇಲ್ಲ.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ
ಸಿರಿಗೆರೆ-577541, ಚಿತ್ರದುರ್ಗ ತಾಲ್ಲೂಕು

ತನ್ನಂತೆ ಅವುಗಳಿಗೂ ಜೀವವಿದೆ; ಕೊಡಲಿ ಹಾಕುವುದರಿಂದ ಅವು ನೋವು ಅನುಭವಿಸುತ್ತವೆಂಬ ಪಾಪಪ್ರಜ್ಞೆ ಗಿಡ ಮರಗಳನ್ನು ಕಡಿಯುವ ಕಟುಕರಿಗೆ ಎಂದಿಗೂ ಒರಲು ಸಾಧ್ಯವಿಲ್ಲವೇನೋ ?

ರಾಷ್ಟ್ರೀಯ ಹೆದ್ದಾರಿಗಳಲ್ಲಿಯ ಮರಗಳ ದುರವಸ್ಥೆಯನ್ನು ಕಂಡು ನಮ್ಮ ಮನ ನೊಂದಿದೆ. ಹೃದಯ ತಳಮಳಗೊಳ್ಳುತ್ತಿದೆ. ಪುಣ್ಯಾತ್ಮರು ಬೆಳಸಿರುವ ಹೆಮ್ಮರಗಳ ಸೌಂದರ್ಯವನ್ನು ಸವಿಯಂದ ನೀಚರು ಅವುಗಳನ್ನು ಕಬಳಿಸುವ ವಿವಿಧ ತಂತ್ರಗಳನ್ನು ಕಂಡುಕೊಂಡಿದ್ದಾರೆ. ಪಕ್ಷಿಗಳು ತಮ್ಮ ವಾಸಕ್ಕಾಗಿ ಮಾಡಿಕೊಂಡಿರುವ ಪೊಟರೆಗಳಿಗೆ ಈ ಪಾಪಿಗಳು ಬೆಂಕಿ ಸುರಿಯುತ್ತಾರೆ. ಮುಂದೊಂದು ದಿನ ಆ ಮರ ಬಿದ್ದು ನೆಲಕ್ಕುರುಳುತ್ತದೆ. ಕೆಲವರು ಮರದ ಸುತ್ತ ತೊಗಟೆಯನ್ನು ಕೆತ್ತುತ್ತಾರೆ. ಕ್ರಮೇಣ ಅದು ಒಣಗುತ್ತಲೇ ಖುಷಿಯಿಂದ ಕೊಡಲಿ ಹಾಕುತ್ತಾರೆ. ಮತ್ತೆ ಕೆಲವರು ಹೆಮ್ಮರದ ರೆಂಬೆ ಕೊಂಬೆಗಳನ್ನು ಸವರುತ್ತಾರೆ. ಇದರಿಂದಾಗಿ ಆ ಮರ ಬಡಕಲಾಗಿ ಒಣಗುತ್ತದೆ. ಒಣಗಿದ ಮರವನ್ನು ಸಂತೋಷದಿಂದ ಕಡಿದುಕೊಂಡು ಹೋಗುತ್ತಾರೆ.

ನಮ್ಮ ದೇಹದ ಚರ್ಮ ಸುಲಿದರೆ, ಅಂಗಾಂಗಗಳನ್ನು ಕತ್ತರಿಸಿದರೆ ನಾವು ಬದುಕಲು ಸಾಧ್ಯವೇ ? ಮುಳ್ಳು ಚುಚ್ಚಿದಾಗಲೇ ವಿಲಿವಿಲಿ ಒದ್ದಾಡುತ್ತೇವೆ. ಹೀಗಿರುವಾಗ ನಮ್ಮಂತೆಯೇ ಜೀವವುಳ್ಳ ಮರಗಳ ತೊಗಟೆ ಸುಲಿದರೆ, ರೆಂಬೆಗಳನ್ನು ಕಡಿದರೆ ಅವು ಎಂಥ ಯಾತನೆ ಅನುಭವಿಸುತ್ತವೆ ಎಂಬ ಅರಿವು ಮರಗಟುಕರಿಗೆ ಅದಾವಾಗ ಬರುತ್ತದೋ ?

ಹುಟ್ಟಿನಿಂದ ಹುಗಿಯುವವರೆಗೂ ಗಿಡ ಮರಗಳು ಮಾನವನಿಗೆ ಬೇಕಾಗುತ್ತವೆ. ತಾಯಿಯ ಗರ್ಭದಿಂದ ಹೊರಬಂದ ಹಸುಳೆಯನ್ನು ಮೊದಲು ಹಾಕುವುದು ಮೊರದಲ್ಲಿ, ಮುಂದೆ ಆ ಕಂದಮ್ಮನನ್ನು ಜೋಗುಳ ಹಾಡಿ ತೂಗುವುದು ಮರದ ತೊಟ್ಟಿಲಲ್ಲಿ. ಮಗು ದೊಡ್ಡದಾದಂತೆ ಮನೆ ಕಟ್ಟಲು, ಪೀಠೋಪಕರಣ ತಯಾರಿಸಲು, ಕಾಗದ, ಬಟ್ಟೆ ಇತ್ಯಾದಿಗೆ ಬಳಸುವುದು ಮರವನ್ನೇ. ಸತ್ತಾಗ ಹೊತ್ತೊಯ್ಯುವುದು ಮರದ ಚಟ್ಟದಲ್ಲೇ. ಹೀಗೆ ಮರಗಳಿಂದಾಗುವ ಪ್ರಯೋಜನ ವರ್ಣಿಸಲಸದಳ.

ಗಿಡ ಮರಗಳು ಶುದ್ಧ ಗಾಳಿಯನ್ನು ಹೊರಸೂಸುತ್ತವೆ. ನೆರಳು, ಗೊಬ್ಬರ, ಹಣ್ಣು ಹಂಪಲು ಕೊಡುತ್ತವೆ. ಭೂಸವೆತ ತಪ್ಪಿಸಿ ಮಣ್ಣಿನ ಫಲವತ್ತತೆ ಹೆಚ್ಚಿಸುತ್ತವೆ. ಮೋಡಗಳನ್ನು ಸೆರೆಹಿಡಿದು ಮಳೆ ಸುರಿಸಲು ಸಹಕರಿಸುತ್ತವೆ. ಗಿಡ ಮೂಲಿಕೆಗಳ ಕಣಜಗಳಾಗಿವೆ. ಜೇನುತುಪ್ಪ, ಅಂಟು ಕರುಣಿಸುತ್ತವೆ. ದನಕರುಗಳಿಗೆ ಮೇವು, ಜನರಿಗೆ ಆಹಾರ ಒದಗಿಸುತ್ತವೆ. ಉರುವಲು, ಪೀಠೋಪಕರಣಗಳಿಗೆ ಬೇಕಾಗುವ ಕಟ್ಟಿಗೆ ಒದಗಿಸುತ್ತವೆ. ಬಟ್ಟೆ ತಯಾರಿಸಲು ಬೇಕಾಗುವ ವಸ್ತುಗಳನ್ನು ದಾನವೀಯುವ

ತ್ತವೆ. ಹೀಗೆ ಮಾನವನ ಆಶೋತ್ತರಗಳನ್ನು ಪೂರೈಸುವಲ್ಲಿ ಗಿಡ ಮರಗಳು ಗುರುತರ ಪಾತ್ರ ನಿರ್ವಹಿಸುತ್ತವೆ.

"ಕಾಡು ಎಂದರೆ ಒಂದು ವಿಶಿಷ್ಟ ಜೀವಕೋಶ. ಇದರ ಔದಾರ್ಯ ನಿಸ್ಸೀಮ. ಕಲ್ಯಾಣ ಗುಣ ಅನಂತ. ಇದು ತನಗಾಗಿ ಬೇಡಿಬಂದವರೆಲ್ಲರಿಗೂ ಅಸ್ತಿತ್ವವನ್ನೇ ಧಾರೆಯೆರೆಯುತ್ತದೆ. ಆದರೆ ತನಗಾಗಿ ಏನನ್ನೂ ಬೇಡುವುದಿಲ್ಲ. ತನ್ನನ್ನು ಕಡಿಯಲು ಕೊಡಲಿ ತಂದವನಿಗೂ ನೆರಳು ನೀಡುತ್ತದೆ", ಎಂಬ ಗೌತಮ ಬುದ್ಧರ ನುಡಿ ಚಿಂತಾನಾರ್ಹವಾಗಿದೆ.

ತೆಂಗನ್ನು ಮಾತ್ರ ಕಲ್ಪವೃಕ್ಷವೆಂದು ಭಾವಿಸಲಾಗಿದೆ. ಆದರೆ ಇತರೇ ಗಿಡ ಮರಗಳ ಪ್ರಯೋಜನವನ್ನು ಗಮನಿಸಿದಾಗ ಪ್ರತಿಯೊಂದು ವೃಕ್ಷವೂ ಒಂದೊಂದು ಕಲ್ಪತರು ಎಂಬ ಸತ್ಯ ಗೋಚರವಾಗುತ್ತದೆ. ಆದುದರಿಂದ ಆ ಕಲ್ಪತರುವನ್ನು ಕಡಿಯದೆ ಸಂರಕ್ಷಿಸಲು ಮುಂದಾಗಬೇಕಾಗಿದೆ. ಈಗಾಗಲೇ ಕಡಿದಿರುವುದು ಸಾಕಷ್ಟು ಅನರ್ಥಕ್ಕೆ ಅವಕಾಶವಾಗಿದೆ. ಈಗಲೂ ಪಾಠ ಕಲಿಯದೆ ಮತ್ತೆ ಮತ್ತೆ ಮರಗಳನ್ನು ಕಡಿಯುತ್ತಲೇ ಹೋದರೆ ನಮ್ಮ ಸುಂದರ ಬದುಕನ್ನು ನಾವಾಗಿಯೇ ಹಾಳುಮಾಡಿ ಕೊಂಡಂತಾಗುತ್ತದೆ. ಆದುದರಿಂದ ಇದುವರೆಗಿನ ನಮ್ಮ ಪಾಪಕಾರ್ಯಗಳಿಗಾಗಿ ಪಶ್ಚಾತ್ತಾಪದುರಿಯಲ್ಲಿ ಬೆಂದು ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಾಗಿದೆ.

ಪರಿಹಾರ ಬಹು ಸುಲಭವಾಗಿದೆ. ಮನೆಯಲ್ಲಿ ಮಗು ಹುಟ್ಟುತ್ತಲೇ ಸಿಹಿ ಹಂಚಿ. ಸಂತೋಷ ಪಡುತ್ತೇವೆ. ಅದೇ ಸಂದರ್ಭದಲ್ಲಿ ನಮಗೆ ಬೇಕಾದ ಸಸಿಯೊಂದನ್ನು ಹಿತ್ತಿಲಲ್ಲೋ, ಮನೆಯ ಮುಂಭಾಗದಲ್ಲೋ ನೆಡಬೇಕು. ಮಗುವಿನ ಪೋಷಣೆಯೊಂದಿಗೆ ಆ ಸಸಿಯೂ ಮಗುವೆಂದು ಭಾವಿಸಿ ಅದಕ್ಕೆ ಗೊಬ್ಬರ, ನೀರು ಹಾಕುತ್ತಿದ್ದರೆ ಅದು ಸಮೃದ್ಧವಾಗಿ ಬೆಳೆಯುತ್ತದೆ. ಮುಂದೆ ನಮ್ಮ ಮಗು ಸತ್ತರೂ ನಾವು ಬೆಳಸಿರುವ ಮರದ ಮೂಲಕ ಮಗುವಿನ ನೆನಪು ಸದಾ ಹಸಿರಾಗಿರುತ್ತದೆ.

ಮದುವೆಯಲ್ಲಿ ಅರ್ಥವಿಲ್ಲದ ಹಲವು ಶಾಸ್ತ್ರಗಳನ್ನು ಮಾಡಿ ಅಪಾರ ಹಣವನ್ನು ದುಂದುವೆಚ್ಚ ಮಾಡುವುದು ಮಾಮೂಲಾಗಿದೆ. ಆಗ ಸಸಿ ಹಚ್ಚುವುದೂ ಒಂದು ಶಾಸ್ತ್ರವೆಂದು ನಂಬಿ ನೂತನ ದಂಪತಿಗಳಿಂದ ಒಂದೆರಡು ಸಸಿಗಳನ್ನು ಹಾಕಿಸಬೇಕು. ಅವು ತಮ್ಮ ಕಂದಮ್ಮಗಳಾಗಿ ಬೆಳೆಯುವಂತೆ ಕಾಳಜಿವಹಿಸಬೇಕು. ಮುಂದೆ ಅವು ಆ ದಂಪತಿಗಳ ಅಮರ ಪ್ರೇಮದ ಸಾಕಾರಮೂರ್ತಿಗಳಾಗಿ ಕಂಗೊಳಿಸುತ್ತವೆ.

ಕೆಲವರು ತಮ್ಮ ಪ್ರೀತಿಯ ಬೆಕ್ಕು, ನಾಯಿ, ದನ ಕರುಗಳು ಸತ್ತಲ್ಲಿ ಅವುಗಳನ್ನು ಸ್ವಂತ ಭೂಮಿಯಲ್ಲಿ ಹೂತು ಅದರ ಮೇಲೆ ಪ್ರಿಯವಾದ ಗಿಡ ನೆಡುತ್ತಾರೆ.

ಆ ಗಿಡ ಹುಲುಸಾಗಿ ಬೆಳೆದು ಫಲ ನೀಡುವಾಗ ಸತ್ತ ಪ್ರಾಣಿಗಳನ್ನು ನೆನಪಿಸಿಕೊಳ್ಳು ತ್ತಾರೆ. ಈ ವಿಧಾನವನ್ನು ಮಾನವರು ಸತ್ತಾಗಲೂ ಜಾರಿಯಲ್ಲಿ ತಂದರೆ ಎಷ್ಟೊಂದು ಅರ್ಥಪೂರ್ಣವಾಗುತ್ತದೆಯಲ್ಲವೇ ?

ಹಿಂದೆ ಸತ್ತವರನ್ನು ಹೂಳಲು ಎಲ್ಲ ಊರುಗಳಲ್ಲೂ ರುದ್ರಭೂಮಿಗಳಿರು ತ್ತಿದ್ದವು. ಜನಸಂಖ್ಯೆಯ ಒತ್ತಡ, ದುರಾಸೆಗಳಿಂದಾಗಿ ಇಂದು ಆ ರುದ್ರಭೂಮಿಗಳೂ ಮಾಯವಾಗಿವೆ. ಸತ್ತವರನ್ನು ಅವರವರ ಸ್ವಂತ ಭೂಮಿಯಲ್ಲೇ ಹುಗಿಯಬೇಕಾಗಿದೆ. ಹಾಗೆ ಹೂತ ಸ್ಥಳದಲ್ಲಿ ಮಂಟಪ ಕಟ್ಟಿ ಲಿಂಗವಿಟ್ಟು ಪೂಜಿಸುವ ಪದ್ಧತಿಯೂ ಬೆಳೆದಿದೆ. ಸತ್ತವರೆಲ್ಲರಿಗೂ ಹೀಗೆ ಮಂಟಪ ಕಟ್ಟುತ್ತ ಹೋದರೆ ಮುಂದೊಂದು ದಿನ ನಿಲ್ಲಲೂ ನೆಲ ಸಿಗದಂತಾಗಬಹುದು. ಆದುದರಿಂದ ಮಂಟಪದ ಬದಲು ಸಮಾಧಿಯ ಮೇಲೆ ಫಲ ನೀಡುವ ಸಸಿ ನೆಟ್ಟು ಬೆಳೆಸಿದಲ್ಲಿ ಆ ಮರದ ಮೂಲಕ ಸತ್ತವರು ಸದಾ ನಮ್ಮ ಸ್ಮರಣೆಯಲ್ಲಿರುತ್ತಾರೆ. ಇಂಥ ಪುಣ್ಯ ಕಾರ್ಯದಲ್ಲಿ ಪ್ರತಿಯೊಬ್ಬರೂ ತಮ್ಮನ್ನು ತಾವು ತೊಡಗಿಸಿಕೊಂಡಲ್ಲಿ ಪ್ರಕೃತಿ ಮಾತೆ ಹಸಿರು ಸೀರೆಯುಟ್ಟು ಸಂತೋಷದಿಂದ ನಲಿಯುತ್ತಾಳೆ. ಅವಳ ಸಂತೋಷವೇ ನಮಗೆ ವರವಾಗಿ ಸಮೃದ್ಧ ಜೀವನ ಸಾಗಿಸಲು ಸಾಧ್ಯವಾಗುತ್ತದೆ.

ಜನರು ಈ ರೀತಿಯ ಸತ್ಕಾರ್ಯಗಳನ್ನು ಮಾಡುತ್ತ ಬಂದರೆ ಆಗ ತಾವು ನೆಟ್ಟು ಬೆಳಸಿರುವ ಮರಗಳಿಗೆ ತಾವೇ ಕೊಡಲಿ ಹಾಕಲು ಖಂಡಿತ ಮನಸ್ಸು ಬರುವುದಿಲ್ಲ. ದೌರ್ಭಾಗ್ಯದ ಸಂಗತಿಯೆಂದರೆ ಮರಗಳನ್ನು ಕಡಿಯಲು ಕಾತುರರಾಗುವ ಜನರು ಅವು ಗಳನ್ನು ಬೆಳೆಸಲು ಆಸಕ್ತಿ ತೋರದಿರುವುದು. ಮರಗಳನ್ನು ಕಡಿಯದಿರಲು ಸಾಧ್ಯ ವಿಲ್ಲ ನಿಜ. ಆದರೆ ಅದಕ್ಕೊಂದು ನಿಯಂತ್ರಣ ಹಾಕಿಕೊಳ್ಳಬೇಕು. ಎಲ್ಲರೂ ವೀರಪ್ಪನ್ ಗಳಾಗದೆ ಒಂದು ಮರವನ್ನು ಕಡಿಯುವ ಮುನ್ನ ಮತ್ತೊಂದು ಸಸಿಯನ್ನು ಹಾಕಿ ಬೆಳೆಸುವ ಸತ್‌ಸಂಕಲ್ಪ ತಳೆದು ಕಾರ್ಯಕಾರಿಗೊಳಿಸಬೇಕು.

ಕಾಡು ಹೆಚ್ಚಿನ ಪ್ರಮಾಣದಲ್ಲಿ ನಾಶವಾಗುತ್ತಿರುವುದು ಜನಸಾಮಾನ್ಯರಿಂದಲ್ಲ. ಇವರು ತಮ್ಮ ಆವಶ್ಯಕತೆಗನುಗುಣವಾಗಿ ಕಡಿಮೆ ಪ್ರಮಾಣದಲ್ಲಿ ಕಾಡು ಕಡಿದರೆ ಭ್ರಷ್ಟ ರಾಜಕಾರಣಿಗಳು, ದುಷ್ಟ ಅಧಿಕಾರಿಗಳು ಮತ್ತು ಬಂಡವಾಳಶಾಹಿ ಶಕ್ತಿಗಳು ಒಂದಾಗಿ ತಮ್ಮ ಕುಟಿಲ ಕುತಂತ್ರಗಳ ಮೂಲಕ ಕಾಡಿಗೆ ಕಾಡನ್ನೆ ನುಂಗುತ್ತಾ ಬಂದಿದ್ದಾರೆ. ಇದೇ ಸ್ಥಿತಿ ಮುಂದುವರಿದರೆ ಈ ದೇಶ ಮರುಭೂಮಿಯಾಗುವ ಕಾಲ ದೂರವಿಲ್ಲ. ಆದುದರಿಂದ ಮರಗಟುಕರ ವಿರುದ್ಧ ಜನಸಾಮಾನ್ಯರು ಬಂಡೆದ್ದು ವ್ಯವಸ್ಥಿತ ಚಳುವಳಿಯನ್ನೇ ನಡೆಸಬೇಕಾಗಿದೆ. ಅರಣ್ಯ ಬೆಳೆಸುವುದು ಅರಣ್ಯ ಇಲಾಖೆ ಯವರ ಕೆಲಸವೆಂದು ಭಾವಿಸದೆ ಇದು ನಮ್ಮೆಲ್ಲರ ಪ್ರಮುಖ ಕರ್ತವ್ಯವೆಂದು ತಿಳಿದು ಕಾರ್ಯೋನ್ಮುಖರಾಗಬೇಕು. ಅಪ್ಪಿಕೋ, ಹಚ್ಚಿಕೋ ಚಳುವಳಿಗಳು ಎಲ್ಲೆಡೆ ನಡೆಯು

ಬೇಕು. ಆಗ ಕಾಡು ಬೆಳೆಯಲು, ಉಳಿಯಲು, ನಾಡಿನ ಜನರು ನೆಮ್ಮದಿಯಿಂದ ಬಾಳಲು ಸಾಧ್ಯ.

"ಕಾಡಿದ್ದರೆ ನಾಡು, ಕಾಡನ್ನು ಬೆಳೆಸಿ ನಾಡನ್ನು ಉಳಿಸಿ, ಮರ ಬೆಳೆಸಿ ಬರ ಅಳಿಸಿ, ಕಾಡಿದ್ದ ನಾಡು ಮಂತ್ರ್ಯದೆಯ ಮುಖದಂತೆ, ಮನೆ ಮಲತಾಯಿ–ಅಡವಿ ಹೆತ್ತತಾಯಿ, ಕರುಬರಿದ್ದೂರಿಗಿಂತ ಕಾಡೊಳ್ಳಿತ್ತು, ಹಸಿರು ಜೀವನದ ಉಸಿರು" ಎಂಬ ನುಡಿಗಟ್ಟುಗಳು ಹಸಿರಿನ ಮಹತ್ವ, ಗಿಡ ಮರಗಳ ಪ್ರಯೋಜನ, ಕಾಡಿನ ಆವಶ್ಯಕತೆಯನ್ನು ಸಾರಿ ಸಾರಿ ಹೇಳುತ್ತಿವೆ. ಆದುದರಿಂದ ಗಿಡ ಮರಗಳನ್ನು ಕಡಿಯುವ ಕಾರ್ಯಕ್ರಮಕ್ಕಿಂತ ಅವುಗಳನ್ನು ನೆಡುವ, ಬೆಳೆಸುವ, ಉಳಿಸುವ ಕಡೆ ಆದ್ಯ ಗಮನ ಈಯಬೇಕು. ಆಗ ಮನಕುಲ ಆರೋಗ್ಯದಿಂದ ಸಂತೃಪ್ತ ಜೀವನ ನಡೆಸಲು ಸುಲಭವಾಗುತ್ತದೆ.

●

ದೂರದರ್ಶನ ಮತ್ತು ಸಮೂಹ ಸಂಸ್ಕೃತಿ

— ಡಾ|| ಕರೀಗೌಡ ಬೀಚನಹಳ್ಳಿ

I

ಇಪ್ಪತ್ತನೆಯ ಶತಮಾನ ಪ್ರಮುಖವಾಗಿ ಮಾಧ್ಯಮಗಳ ಯುಗ; ಸಾಹಿತ್ಯ (ಬರಹ ಮತ್ತು ಮೌಖಿಕ ಎಂಬ ಎರಡೂ ಅರ್ಥದಲ್ಲಿ), ನಾಟಕ, ಸಿನೆಮಾ, ಪತ್ರಿಕೆ, ಆಕಾಶವಾಣಿ, ದೂರದರ್ಶನ–ಹೀಗೆ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಇದರ ಜೊತೆಗೆ ಈ ಯುಗದ ವಿಜ್ಞಾನ ಮತ್ತು ತಂತ್ರಜ್ಞಾನದ ಸಾಧನೆ ಹಾಗೂ ವೈಫಲ್ಯಗಳೆರಡೂ ನಮ್ಮ ಕಣ್ಮುಂದೆ ಇದೆ.

ಇಂದು ಭಾರತೀಯ ಸಂದರ್ಭದಲ್ಲಿ ಪತ್ರಿಕೆ (Press) ಚಲನಚಿತ್ರ (Cinema) ದೂರದರ್ಶನ (Television) ಇವು ತುಂಬಾ ಶಕ್ತಿಶಾಲಿ ಮಾಧ್ಯಮಗಳಾಗಿವೆ. ಆದರೆ ನಮ್ಮ ದೇಶದ ದೂರದರ್ಶನವನ್ನು ಅಮೆರಿಕಾದ ದೂರದರ್ಶನದ ಸಾಮರ್ಥ್ಯಕ್ಕೆ ಹೋಲಿಸಿದರೆ, ಭಾರತದಲ್ಲಿ ಈ ಮಾಧ್ಯಮ ಇನ್ನೂ ಸಾಧಿಸಬೇಕಾದದ್ದು ಅಗಾಧವಾಗಿದೆ. ಆಕಾಶವಾಣಿಗೆ ಪ್ರಾಪ್ತವಾಗಿದ್ದ ಜನಪ್ರಿಯತೆ ದೂರದರ್ಶನಕ್ಕೆ ಇನ್ನೂ ದೂರದಲ್ಲಿಯೇ ಉಳಿದಿದೆ. ಇದಕ್ಕೆ ಮುಖ್ಯ ಕಾರಣ, ಇನ್ಸಾಟ್–ಡಿ ಯ ವೈಫಲ್ಯ; ಜೊತೆಗೆ, ಭಾರತೀಯ ಸಮಾಜದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪರಿಸರವೂ ಕಾರಣವಾಗಿದೆ.

ಡಾ|| ಕರೀಗೌಡ ಬೀಚನಹಳ್ಳಿ, ನಂ. 31, 'ಗಂಧವತಿ', 80 ಅಡಿ ರಸ್ತೆ, ಕೆಂಗೇರಿ ಉಪನಗರ ಬೆಂಗಳೂರು-560 060

ಸಂಶೋಧಕರೊಬ್ಬರು 'ಆಕಾಶವಾಣಿ'ಯನ್ನು 'Companion medium' 'ದೂರದರ್ಶನ'ವನ್ನು 'Cultural Mainstream' ಎಂದು ಕರೆದಿದ್ದಾರೆ. (Robert P. Snow: Creating Media Culture, 1983, England) ಆಕಾಶವಾಣಿಯ ಇತಿಹಾಸವನ್ನು ಸ್ಥೂಲವಾಗಿ ಹೇಳುವುದಾದರೆ ಅದು 'ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಸರ್ವೀಸ್' ಹೆಸರಿನಿಂದ 1927ರಲ್ಲಿ, ಖಾಸಗಿ ಒಡೆತನದಲ್ಲಿ ಪ್ರಾರಂಭವಾಯಿತು. ನಂತರ ಅದು 1930ರಲ್ಲಿ ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿತು. ಆಗ ಅದು ಬರೀ ಒಂದು ಸಂಪರ್ಕ ಮಾಧ್ಯಮವಾಗಿ, ಅದರಲ್ಲಿಯೂ ಮುಖ್ಯವಾಗಿ 1932ರ ದ್ವಿತೀಯ ಮಹಾ ಯುದ್ಧದ ವಾರ್ತೆ (News) ಗಳನ್ನು ಬಿತ್ತರಿಸುವ ಕೆಲಸವನ್ನು ನಿರ್ವಹಿಸುತ್ತಿತ್ತು. ಅನಂತರ ಮುಂದೆ ಅದು ವಾರ್ತೆಯ ಜೊತೆಗೆ, ಶಿಕ್ಷಣ (Education) ಹಾಗೂ ಮನರಂಜನೆ (Entertainment) ಯ ಕಾರ್ಯಕ್ರಮಗಳನ್ನೂ ಪ್ರಸಾರ ಮಾಡ ತೊಡಗಿತು. 1957ರಲ್ಲಿ ಅದಕ್ಕೆ 'ಆಕಾಶವಾಣಿ' ಎಂಬ ಹೆಸರು ಪ್ರಾಪ್ತವಾಯಿತು. ಆರಂಭದಲ್ಲಿ ಸುದ್ದಿ ಸಂಪರ್ಕ ಮಾಧ್ಯಮವಾಗಿ ಶುರುವಾದ ಈ ಮಾಧ್ಯಮ ಕಲಾತ್ಮಕ ಗುಣವನ್ನು ಪಡೆದುಕೊಂಡಿದ್ದು ಕಳೆದೆರಡು ದಶಕಗಳಿಂದೀಚೆಗೆ. ಆಕಾಶವಾಣಿ, 30 ಮತ್ತು 40ರ ದಶಕಗಳಲ್ಲಿ ಅಮೆರಿಕಾದಲ್ಲಿ ಒಂದು ಸುವರ್ಣಯುಗವನ್ನು ಸೃಷ್ಟಿಸಿದ್ದು ಒಂದು ಚಾರಿತ್ರಿಕ ಸತ್ಯ. ಆದರೆ ಭಾರತದಲ್ಲಿ ಅದರ ಸುವರ್ಣಯುಗವನ್ನು ನಾವು ಕಾಣುವುದು 50 ಮತ್ತು 60ರ ದಶಕಗಳಲ್ಲಿ ಎನ್ನಬಹುದು.

ಅನಕ್ಷರಸ್ಥ ಸಮುದಾಯವನ್ನು ಅಕ್ಷರಸ್ಥರನ್ನಾಗಿ ಮಾಡುವ ಏಕೈಕ ಉದ್ದೇಶ ದಿಂದ 1959ರಲ್ಲಿ ದೆಹಲಿಯಲ್ಲಿ ಪ್ರಾರಂಭವಾದದ್ದು ದೂರದರ್ಶನ. ಆರಂಭದಲ್ಲಿ ಇದು ಶಿಕ್ಷಣ ಪ್ರಸಾರವೇ ತನ್ನ ಮೂಲ ಆಶಯವೆಂಬ ನಿಲುವನ್ನು ಪ್ರಕಟಿಸಿತು. ಆದರೆ ಇದು ಕೂಡ ಬರುಬರುತ್ತ ಆಕಾಶವಾಣಿಯ ಹಾಗೆಯೇ ವಾರ್ತೆ ಮತ್ತು ಮನರಂಜ ನೆಯ ಕಾರ್ಯಕ್ರಮಗಳ ಪ್ರಸಾರಕ್ಕೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು.

ಆಕಾಶವಾಣಿ, "ಬಹುಜನ ಹಿತಾಯ, ಬಹುಜನ ಸುಖಾಯ" ಎಂಬ ತತ್ವವನ್ನು ಮಂತ್ರವನ್ನಾಗಿ ಸ್ವೀಕರಿಸಿದರೆ, ದೂರದರ್ಶನ, 'ಸತ್ಯಂ ಶಿವಂ ಸುಂದರಂ' ಎಂಬ ಸೂತ್ರವನ್ನು ತನ್ನ ಬೀಜವಾಕ್ಯವನ್ನಾಗಿ ಸ್ವೀಕರಿಸಿದೆ. ಬಹುಸಂಖ್ಯಾತರಿಗೆ ಹಿತವಾಗಿ ರುವುದು ಸುಖವಾಗಿಯೂ ಇರುತ್ತದೆ ಎಂದು ಆಕಾಶವಾಣಿ ಹೇಳಿದರೆ ಸತ್ಯವಾಗಿರು ವುದು ಮಂಗಳಕರವಾಗಿಯೂ, ಸುಂದರವಾಗಿಯೂ ಇರುತ್ತದೆ ಎಂದು ದೂರದರ್ಶನ ಹೇಳುತ್ತದೆ. ಆಕಾಶವಾಣಿ ಬಹುಸಂಖ್ಯಾತ ಸಮೂಹವನ್ನು ತಲುಪಿದ್ದರೆ, ದೂರ ದರ್ಶನ ಇನ್ನೂ ಅಲ್ಪಸಂಖ್ಯಾತ ಸಮುದಾಯದ ಹಂತದಲ್ಲೇ ಉಳಿದಿದೆ. ನಾನು ಮೊದಲೇ ಹೇಳಿದ ಹಾಗೆ, ತಂತ್ರಜ್ಞಾನದ ವೈಫಲ್ಯವೂ ಒಂದು ಕಾರಣ. ಸತ್ಯ ಮತ್ತು ಸೌಂದರ್ಯ ಎರಡನ್ನೂ ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸುವ ಅದ್ಭುತ ಶಕ್ತಿ ದೂರ

ದರ್ಶನಕ್ಕಿದೆ. ಅದು ಸತ್ಯದ ಜೊತೆಗೆ ಮಿಥ್ಯೆಯನ್ನೂ ಒಳಗೊಳ್ಳಬೇಕಾಗಿದೆ. ಸತ್ಯ ಮತ್ತು ಮಿಥ್ಯೆ ಅನ್ನುವುದನ್ನು ಸಮಾಜದ ಒಟ್ಟು ಸಂಸ್ಕೃತಿಯ ವಾಸ್ತವ ಸ್ಥಿತಿ ಎಂದು ಗ್ರಹಿಸುವ ಮನೋಧರ್ಮವನ್ನು ಈ ದೂರದರ್ಶನ ರೂಢಿಸಿಕೊಳ್ಳಬೇಕಾಗಿದೆ.

ದೂರದರ್ಶನ ಇಂದು ಬಲಿಷ್ಠವಾದ ಹಾಗೂ ಆಕರ್ಷಕವಾದ ಮಾಧ್ಯಮ. ಧರ್ಮಕ್ಕೆ ಇರುವ ಮಾದಕ ಶಕ್ತಿ ಇಂದು ದೂರದರ್ಶನಕ್ಕೆ ಲಭ್ಯವಾಗಿದೆ. ಸಾಮಾಜಿಕ, ರಾಜಕೀಯ, ಧಾರ್ಮಿಕ ನಂಬಿಕೆಗಳ ಮೇಲೆ ಇದು ಗಾಢ ಪರಿಣಾಮ ಬೀರುತ್ತದೆಂದು ಇತ್ತೀಚಿನ ಕೆಲವು ಸಂಶೋಧನೆಗಳು ತಿಳಿಸುತ್ತವೆ. ಆರಂಭದ ದಿನಗಳಲ್ಲಿ ಆಕಾಶವಾಣಿಗೆ ಅಂತಹ ಧಾರ್ಮಿಕವಾದ, ರಾಜಕೀಯವಾದ ಪ್ರಭೆ ಇತ್ತು. ಆಕಾಶವಾಣಿ ಪ್ರಧಾನವಾಗಿ ಶ್ರವ್ಯ ಮಾಧ್ಯಮ, ಅಲ್ಲಿ ಕೇಳುಗರು ಇರುತ್ತಾರೆ. ಆದರೆ ದೂರದರ್ಶನ ಶ್ರವ್ಯ ಹಾಗೂ ದೃಶ್ಯ ಮಾಧ್ಯಮ. ಇಲ್ಲಿ ಪ್ರೇಕ್ಷಕರಿರುತ್ತಾರೆ.

II

ಇಂದು ಭಾರತದಲ್ಲಿ ಆಕಾಶವಾಣಿಗಿಂತ ದೂರದರ್ಶನ ಒಂದು ಪರಿಣಾಮಕಾರಿಯಾದ, ಚಲನಚಿತ್ರಕ್ಕಿಂತ ಭಿನ್ನವಾದ ಹಾಗೂ ತುಂಬಾ ಸ್ಪರ್ಧಾತ್ಮಕವಾದ ಮಾಧ್ಯಮವಾಗಿದೆ. ಪ್ರಸ್ತುತ ಬರಹದಲ್ಲಿ ದೂರದರ್ಶನ ಕುರಿತಂತೆ ಕೆಲವು ವಿಚಾರಗಳನ್ನು ಹೇಳಲಿದ್ದೇನೆ. ಈ ಮಾತುಗಳು ಆಕಾಶವಾಣಿಗೂ ಅನ್ವಯಿಸಬಹುದು. ಆದರೆ ದೂರದರ್ಶನದ ಕಾರ್ಯಕ್ರಮ, ಪ್ರದರ್ಶನ, ಸ್ವಾಯತ್ತತೆ, ಸೆಕೆಂಡ್ ಛಾನಲ್‌ಗಳ ಬಗ್ಗೆ ಕುರಿತು ಬರೆಯುವ ಬದಲು, ಇದುವರೆಗೆ ಈ ದೂರದರ್ಶನ ಮಾಧ್ಯಮವನ್ನು ಕುರಿತು ನಡೆದಿರುವ ಕೆಲವು ಸಂಶೋಧನೆಗಳ ಬಗ್ಗೆ ನೋಡಬಹುದು.

70 ಮತ್ತು 80ರ ದಶಕಗಳಲ್ಲಿ ದೂರದರ್ಶನ ಕುರಿತು ಅನೇಕ ಸಂಶೋಧನೆಗಳು ಮತ್ತು ಕಮಿಷನ್‌ಗಳು ನಡೆದಿವೆ. ಅವುಗಳು ಮುಖ್ಯವಾಗಿ ದೂರದರ್ಶನದ ಶಿಕ್ಷಣ, ದೂರದರ್ಶನದ ಪರಿಣಾಮ, ದೂರದರ್ಶನದ ಅಭಿವೃದ್ಧಿ ಮತ್ತು SITE (Satellite Instructional Television Experiment) ಗಳಿಗೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳಾಗಿವೆ. ಭಾರತದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಹಾಗೆ ನಡೆದಿರುವ 'ಶಿಕ್ಷಣದ ಸಂಶೋಧನೆ' (Educational Research) ಗಳು ಬಹುಮಟ್ಟಿಗೆ ಅಮೆರಿಕಾದಲ್ಲಿ ದೂರದರ್ಶನವನ್ನು ಕುರಿತು ಆಗಿರುವ ಸಂಶೋಧನೆಗಳ ಮಾದರಿಗಳಾಗಿವೆ; ಅಥವಾ ಅದರ ಅನುಕರಣೆಗಳಾಗಿವೆ. ದೂರದರ್ಶನದ ಪ್ರಾಥಮಿಕ ಗುರಿಯೆಂದರೆ ವಿವಿಧ ನಮೂನೆ ಹಾಗೂ ಸಾಧ್ಯತೆಗಳ ಮುಖಾಂತರ ಶೈಕ್ಷಣಿಕ ಕಾರ್ಯಕ್ರಮಗಳನ್ನು ದೂರದರ್ಶನದಲ್ಲಿ ಬಿತ್ತರಿಸುವುದು; ಬಗೆಬಗೆಯ ಅನಕ್ಷರಸ್ಥ ಸಮುದಾಯವನ್ನು ಅಕ್ಷರಸ್ಥರನ್ನಾಗಿ ಮಾಡುವುದು. ಈ ಹಿನ್ನೆಲೆಯಲ್ಲಿ 70 ಮತ್ತು 80ರ ದಶಕಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಡೆದಿರುವ ಸಂಶೋಧನೆಗಳು ದೂರದರ್ಶನವು ಒಂದು ಸಮರ್ಥವಾದ

'ಶೈಕ್ಷಣಿಕ ದೂರದರ್ಶನ' (Educational Television) ಎಂದು ಅಭಿಪ್ರಾಯ ಪಟ್ಟಿವೆ. ಹಾಗಾಗಿ, ಶಿಕ್ಷಣದಲ್ಲಿ ವಯಸ್ಕರ ಶಿಕ್ಷಣ (Adult Education), ಸಾಂಪ್ರದಾಯಿಕ ಶಿಕ್ಷಣ (Formal Education), ವಿದ್ಯುಕ್ತವಲ್ಲದ ಶಿಕ್ಷಣ (Informal Education), ಉನ್ನತ ಶಿಕ್ಷಣ (Higher Education) ಹಾಗೂ ಯು. ಜಿ. ಸಿ. (University Grant Commission) ಗಳಂತಹ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದರ ವ್ಯಾಪ್ತಿ ಮತ್ತು ವೈವಿಧ್ಯತೆಗಳನ್ನು ಹಿಗ್ಗಲಿಸಲಾಯಿತು. ಒಂದೊಂದು ಕ್ಷೇತ್ರದ ಬಗ್ಗೆಯೂ ಹಲವಾರು ರೀತಿಯ ಅಧ್ಯಯನಗಳು, ವರದಿಗಳು, ಲೇಖನಗಳು ಪ್ರಕಟವಾಗಿವೆ.

ಇವುಗಳ ಜೊತೆಗೆ ದೂರದರ್ಶನವನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಬಹುದು ಎಂಬುದರ ಬಗ್ಗೆ ಮತ್ತು 'SITE' ಬಗ್ಗೆ ಕೂಡ ಸುದೀರ್ಘವಾದ ಸಂಶೋಧನೆಗಳು ಸಾಗಿವೆ. ಆದರೆ ಇಷ್ಟಾಗಿ ಕೂಡ, ಶೈಕ್ಷಣಿಕ ಕಾರ್ಯಕ್ರಮಗಳು ದೂರದರ್ಶನದಲ್ಲಿ ಯಾಕೆ ಪರಿಣಾಮಕಾರಿಯಾದ ಕಾರ್ಯಕ್ರಮಗಳಾಗಿ ರೂಪುಗೊಂಡಿಲ್ಲ ಎಂಬ ಪ್ರಶ್ನೆ ನಮ್ಮೆಲ್ಲರನ್ನು ಕಾಡುತ್ತದೆ. ಆದರೆ ನಡುವೆ ನೈಸರ್ಗಿಕ ವಿಜ್ಞಾನ (Natural Science), ಪರಿಸರ ವಿಜ್ಞಾನ (Environmental Science), ಕಥಾ ಚಿತ್ರ (Feature Film) ಗಳ ಕುರಿತಂತೆ ದೂರದರ್ಶನದಲ್ಲಿ ಮೂಡಿಬರುತ್ತಿರುವ ಕಾರ್ಯಕ್ರಮಗಳು ತುಂಬಾ ಪರಿಣಾಮಕಾರಿಯಾಗಿ ಮತ್ತು ಗಂಭೀರವಾಗಿರುತ್ತವೆ. ಇವು ಮಕ್ಕಳಾದಿಯಾಗಿ ಎಲ್ಲ ವಯಸ್ಸಿನ ಜನರಿಗೂ ಪ್ರಿಯವಾಗಿರುತ್ತವೆ. ಭಾರತದ ದೂರದರ್ಶನ ಇನ್ನೂ ಇಪ್ಪತರ ತಾರುಣ್ಯದಲ್ಲಿರುವುದರಿಂದ ಮುಂದೆ ಅದರ ಯೌವನ, ಪ್ರೌಢ, ವೃದ್ಧಾಪ್ಯದ ವಯಸ್ಸಿನಿಂದ ಹೆಚ್ಚಿನದನ್ನು ನಿರೀಕ್ಷಿಸಬಹುದಾಗಿದೆ.

III

ದೂರದರ್ಶನ ಕುರಿತಂತೆ ಈ ನಡುವೆ ಸಾಂಸ್ಕೃತಿಕ ಅಧ್ಯಯನದ ಶಿಸ್ತುಗಳು ಭಾರತಕ್ಕೆ ಪ್ರವೇಶಿಸಿದ್ದು 80ರ ದಶಕದಲ್ಲಿ. ಇದು ಮುಖ್ಯವಾಗಿ ಬರ್ಮಿಂಗ್‌ಹ್ಯಾಮ್‌ನ 'ಬ್ರಿಟಿಷ್ ಕಲ್ಚರಲ್ ಸ್ಟಡೀಸ್' ಶಾಲೆಯಿಂದ ಬಂದದ್ದು. ಆದರ ಮುಖ್ಯ ಅಧ್ಯಯನದ ತಾತ್ವಿಕ ನೆಲೆ ಎಂದರೆ ಬದುಕಿನ ಅರ್ಥವನ್ನು ಆದರ ಸಾಮಾಜಿಕ ಒತ್ತಾಸೆಗಳ ಮತ್ತು ಸಾಂಸ್ಕೃತಿಕ ಸಂಬಂಧಗಳ ನೆಲೆಗಳಲ್ಲಿ ಅರ್ಥೈಸಿಕೊಳ್ಳುವುದು. ಒಂದು ಕಾಲಕ್ಕೆ ಸಮೂಹ ಮಾಧ್ಯಮಗಳಿಲ್ಲದೆಯೇ ಸಮೂಹ ಚಳುವಳಿಗಳು ನಡೆದಿರುವುದಕ್ಕೆ ಐತಿಹಾಸಿಕ ದಾಖಲೆಗಳಿವೆ. ಇದಕ್ಕೆ ಸ್ಪಷ್ಟವಾದ ಉದಾಹರಣೆಗಳೆಂದರೆ ಗಾಂಧೀಜಿಯ ರಾಜಕೀಯ ಚಳುವಳಿ ಮತ್ತು ಮಾವೋನ ಸಾಂಸ್ಕೃತಿಕ ಚಳುವಳಿ. ಆದರೆ ಇಬ್ಬರ ಸಮೂಹ ಚಳುವಳಿಗಳಲ್ಲೂ ಭಾಷೆ, ಪ್ರಾಂತ್ಯ, ಸಮಾನತೆ, ಸ್ವಾತಂತ್ರ್ಯ, ರಾಜಕೀಯಕ್ಕೆ ಸಂಬಂಧಿಸಿದಂತೆ ಸಮಾನವಾದ ಕೆಲವು ಅಂಶಗಳಿದ್ದವು. ಆದರೆ ಇಂದು ಮಾಧ್ಯಮಗಳು

ಅಸಂಖ್ಯಾತ ಇವೆ. ಆದರೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗೆ ಈ ಮಾಧ್ಯಮಗಳು ಯಾಕೆ ಸ್ಪಂದಿಸಲಾರದೆ ದೂರ ಉಳಿದಿವೆ ಎಂಬ ಪ್ರಶ್ನೆ ಎದುರಾಗುತ್ತದೆ. ಆಳುವ ವರ್ಗದ ಹಿತಾಸಕ್ತಿಗಳಿಗನುಗುಣವಾಗಿ ಈ ಮಾಧ್ಯಮಗಳು ಕೆಲಸ ನಿರ್ವಹಿಸಬೇಕಾಗಿ ಬಂದಿರುವ ಅನಿವಾರ್ಯ ಮಿತಿಗಳಿಂದಾಗಿ ಈ ಸಮಸ್ಯೆ ಜಟಿಲವಾಗಿದೆ ಅನ್ನಿಸುತ್ತದೆ.

ಆದರೆ ಪಠ್ಯದ ವಿಶ್ಲೇಷಣೆ ಭಾರತಕ್ಕೆ ಫ್ರೆಂಚ್‌ನ ಕೃತಿನಿಷ್ಠ ಸಂಪ್ರದಾಯದಿಂದ [Structuralist tradition] ಬಂದದ್ದು. ಆಕಾಶವಾಣಿ ಮತ್ತು ದೂರದರ್ಶನಗಳ ಪಠ್ಯ, ಪ್ರೇಕ್ಷಕವರ್ಗ ಮತ್ತು ಸಮೂಹಸಂಸ್ಕೃತಿಯ ಅಧ್ಯಯನಗಳನ್ನು ಈ ಆಕೃತಿನಿಷ್ಠ ಅಧ್ಯಯನಕ್ಕಿಂತ ಭಿನ್ನವಾಗಿ ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ರೂಪಿಸಿಕೊಳ್ಳಬೇಕಾದ ಸ್ಥಿತಿ ಇಂದು ಅಗತ್ಯವಾಗಿ ಆಗಬೇಕಾಗಿದೆ. ಆದರೆ ಭಾರತದಲ್ಲಿ ಇದುವರೆಗೂ ದೂರದರ್ಶನದ ಶೈಕ್ಷಣಿಕ ಅಭ್ಯಾಸ ಆಗಿದೆಯೇ ಹೊರತು ಸಾಮಾಜಿಕವಾದ ಹಾಗೂ ಸಾಂಸ್ಕೃತಿಕವಾದ ಅಧ್ಯಯನಕ್ಕೆ ಹೆಚ್ಚು ಒತ್ತು ಬಿದ್ದಿಲ್ಲ.

ಆದರೆ ಈ ಮಾಧ್ಯಮಗಳು "ಮನರಂಜನೆ"ಗಾಗಿ ಪಠ್ಯಗಳನ್ನು ಆಯ್ಕೆಮಾಡಿಕೊಳ್ಳುವಾಗಲೇ ಹೆಚ್ಚು "ಸಿದ್ಧವಸ್ತು" [Readymade] ಗಳನ್ನು ಆಶ್ರಯಿಸುತ್ತವೆ. ಇದಕ್ಕೆ ಸ್ಪಷ್ಟ ಉದಾಹರಣೆಗಳೆಂದರೆ "ರಾಮಾಯಣ" ಮತ್ತು "ಮಹಾಭಾರತ"ದಂತಹ ವಸ್ತುಗಳು. ಆದರೆ ಇವು "ಉತ್ಪಾದಿತ" [Creative] ವಸ್ತುಗಳ ಆಯ್ಕೆ ಅಥವಾ ಸೃಷ್ಟಿಗೆ ತೊಡಗುವುದಿಲ್ಲ; ತೊಡಗಿದ್ದರೂ ಕಡಿಮೆ. ಹೀಗೆ ಆಯ್ಕೆಯ ಮಟ್ಟದಲ್ಲಿಯೇ ಈ ಪ್ರಶ್ನೆಯ ಸಮಸ್ಯೆ ಇದೆ. ಅಷ್ಟೇ ಅಲ್ಲ, ಅಂತಹ ಸಿದ್ಧವಸ್ತುಗಳು ಜಾತಿ, ವರ್ಗ, ಧರ್ಮ, ಭಾಷೆ, ಪ್ರಾಂತ್ಯಗಳಿಗೆ ಸೀಮಿತವಾದ ಪಠ್ಯಗಳಾಗಿರುತ್ತವೆ. ಇವೇ ಭಾರತೀಯ ಸಂಸ್ಕೃತಿಯ "ಅಧಿಕೃತ" [Authentic] ಹಾಗೂ "ಅಭಿಜಾತ"[Classical]ದಾಖಲೆಗಳೆಂದು ತೋರಿಸುವುದರ ಅಪಾಯಗಳನ್ನು ಈ ಮಾಧ್ಯಮಗಳು ಚಿಂತಿಸುವುದಿಲ್ಲ. ಇಂತಹ ತಪ್ಪು ಆಯ್ಕೆಗಳಿಂದಾಗಿ ಈ ಮಾಧ್ಯಮಗಳು ಪ್ರೇಕ್ಷಕರ ಭಾವನೆಗಳಲ್ಲಿ "ಶೈಕ್ಷಣಿಕ ಧಾರವಾಹಿ", [Educational Serial] ಮತ್ತು "ಮನರಂಜನಾ ಧಾರವಾಹಿ" [Entertainment Serial] ಎಂಬ ವಿಭಾಗವನ್ನೇ ಸೃಷ್ಟಿಸಿವೆ. ಇದು ಈ ಮಾಧ್ಯಮಗಳು ಸೃಷ್ಟಿಸಿಕೊಂಡಿರುವ "ಮಾಧ್ಯಮ ಸಂಸ್ಕೃತಿ" [Media Culture]. ಈ ಮಾಧ್ಯಮಗಳಿಗೆ ಕ್ರಿಯೇಟಿವ್ ಮತ್ತು ಕಮರ್ಶಿಯಲ್‌ಗಳ ನಡುವಿನ ಸೂಕ್ಷ್ಮ ಅಂತರ ತಿಳಿಯದಾದಾಗ ಇಂತಹ ಕೀಳು ಅಭಿರುಚಿಯ ಮನರಂಜನೆಯ ವಸ್ತುಗಳನ್ನು ಬಿತ್ತರಿಸುವ ಕೆಲಸವನ್ನು ಮಾಡುವ ಹಂತದಲ್ಲಿಯೇ ನಿಷ್ಫಲವಾಗಿ ನಿಂತುಬಿಡುತ್ತವೆ. ನಿರ್ದೇಶಕ ಅಥವಾ ಸಂಗ್ರಾಹಕನಿಗೆ ಕ್ರಿಯೇಟಿವ್ ಮತ್ತು ಕಮರ್ಶಿಯಲ್‌ಗಳ ನಡುವಿನ ತಾರ

ತವಮ್ಯದ ಸೂಕ್ಷ್ಮತೆಯಂ ಬಗ್ಗೆ ಎಚ್ಚರ ಅತ್ಯಗತ್ಯ. ಇಂತಹ ಕಂದರವನ್ನು ಈ ಮಾಧ್ಯಮಂಗಳಂ ತೊಡೆದುಹಾಕಬೇಕಾಗಿದೆ.

ಸಮುದಾಯಂದ ಅಭಿರುಚಿಯನ್ನು ಬೆಳೆಸುವ, ರೂಪಿಸುವ ಹಾಗೂ ಅವರ ಪ್ರಜ್ಞೆಯನ್ನು ವಿಸ್ತರಿಸುವ ಜವಾಬ್ದಾರಿಯನ್ನು ಈ ಮಾಧ್ಯಮಂಗಳಂ ಅತ್ಯಂತ ಎಚ್ಚರದಿಂದ ಹೊರಬೇಕಾಗಿದೆ. ಇದನ್ನು ಅಮೆರಿಕಾದಲ್ಲಿ ದೂರದರ್ಶನ ತುಂಬಾ ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ. ಆಫ್ರಿಕನ್ ಬುಡಕಟ್ಟು ಜನಾಂಗವೊಂದರ ಬಗ್ಗೆ ಅಮೆರಿಕಾದ ದೂರದರ್ಶನದಲ್ಲಿ ಪ್ರಸಾರವಾದರೆ, ಅದನ್ನು ನೋಡಿದ ಅಕ್ಷರಸ್ಥ ಪ್ರೇಕ್ಷಕ ವರ್ಗ ಕೂಡಲೇ ಆ ಜನಾಂಗದ ಬಗ್ಗೆ ಬಂದಿರುವ ಪುಸ್ತಕಗಳನ್ನು, ಅಧ್ಯಯನಗಳನ್ನು ಓದಲು ತೊಡಗುತ್ತದೆ. ಅಮೆರಿಕಾದ ಗ್ರಂಥಾಲಯಂದಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದುವವರ ಸಂಖ್ಯೆ ಜಾಸ್ತಿಯಾಗುತ್ತದೆ. ಇದು ಅಧ್ಯಯನವೊಂದರಿಂದ ತಿಳಿದುಬಂದಿರುವ ಸಂಗತಿ. ಮತ್ತು ಅಲ್ಲಿ 'Comic Books and Cartoon Strips'ಗಳು ಕೂಡ ತುಂಬಾ ಜನಪ್ರಿಯವಾದ ಸಮೂಹ ಸಂಸ್ಕೃತಿಯ ಮಾಧ್ಯಮಗಳಾಗಿವೆ ಎಂದು ಸಂಶೋಧನಾ ವರದಿಗಳು ತಿಳಿಸುತ್ತವೆ [Mass Culture, 1957: edited by Bernard Rosenberg and David Manning White, Newyork]. ಭಾರತದಲ್ಲಿ ಕೂಡ "ಕಾಮಿಕ್ಸ್ ಬುಕ್ಸ್" ಜನಪ್ರಿಯ ಮಾಧ್ಯಮವಾಗುವತ್ತ ಸಾಗಿದಂತಿದೆ.

ಆದರೆ ಭಾರತದ ದೂರದರ್ಶನ ಅಮೆರಿಕಾದ ದೂರದರ್ಶನದ ಮಾದರಿಗಳನ್ನು ಅನುಸರಿಸುತ್ತಿರುವಂತೆ ಕಂಡುಬರುತ್ತದೆ. ಇಲ್ಲಿನ ಬರೀ ಮಧ್ಯಮವರ್ಗದ ಜನರ ದೈನಂದಿನ ಬದುಕಿನ ಆಲೋಚನ ಕ್ರಮ, ನಡವಳಿಕೆಗಳು, ಬದುಕುವ ಮಾರ್ಗ ಹಾಗೂ ಅವರ ಜೀವನ ಸಮಸ್ಯೆಗಳನ್ನು ಕುರಿತು ಅವರ ಅಭಿರುಚಿಗೆ ತಕ್ಕಂತೆ ತೋರಿಸುವ ದೃಷ್ಟಿ ಮಾತ್ರ ಇದೆ. ದೂರದರ್ಶನದ ಈ ನಿಲುವು ಬದಲಾಗಬೇಕು. ಅಮೆರಿಕಾದ ಸಮಾಜ, ಮೂಲತಃ ನಗರಗಳ ಹಾಗೂ ಕೈಗಾರಿಕಾ ಪ್ರಧಾನವಾದ ಸಮಾಜ; ಮತ್ತು ಮಧ್ಯಮವರ್ಗದ ಹಾಗೂ ಅದಕ್ಕಿಂತ ಮೇಲ್ಪಟ್ಟ ಶ್ರೀಮಂತವರ್ಗದ ಸಮಾಜ. ಜೊತೆಗೆ, ಅಕ್ಷರಸ್ಥ ಸಮಾಜ. ಹಾಗಾಗಿ ಅಮೆರಿಕಾದಲ್ಲಿ ಸಮೂಹ ಎನ್ನುವುದು ಇರುವುದು ಕೈಗಾರಿಕಾ ಸಮಾಜದಲ್ಲಿ ಮತ್ತು ನಗರಗಳ ಸಮಾಜದಲ್ಲಿ. ಆದರೆ ಭಾರತೀಯ ಸಮಾಜ ಮೂಲತಃ ಹಳ್ಳಿಗಳ, ಕೊಳಗೇರಿಗಳ ಹಾಗೂ ಕೃಷಿ ಪ್ರಧಾನವಾದ ಸಮಾಜ ಮತ್ತು ಪಶುಪಾಲನೆಯ ಪ್ರವೃತ್ತಿ ಪ್ರಧಾನವಾದ ಸಮಾಜ. ಜೊತೆಗೆ ಅನಕ್ಷರಸ್ಥರ ಸಂಖ್ಯೆಯೇ ಅಧಿಕವಾಗಿರುವ ಹಾಗೂ ಮಧ್ಯಮವರ್ಗದವರಿಗಿಂತ ಕೆಳಜಾತಿಯವರು ಹೆಚ್ಚಿನ ಸಂಖ್ಯೆಯಲ್ಲಿರುವ ಸಮಾಜ. ಹಾಗಾಗಿ ಸಮೂಹ ಸಂಸ್ಕೃತಿ ಎನ್ನುವುದು ಪ್ರಕಟವಾಗುವುದು ಪ್ರಧಾನವಾಗಿ ಹಳ್ಳಿಗಳಲ್ಲಿ, ಕೊಳಗೇರಿಗಳಲ್ಲಿ, ಕೆಳಜಾತಿ ಹಾಗೂ

ಬುಡಕಟ್ಟು ಜನಾಂಗಗಳಲ್ಲಿ. ಹೀಗೆ ಅಮೆರಿಕಾಕ್ಕಿಂತ ಭಿನ್ನವಾದ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶವನ್ನು ಹೊಂದಿರುವ ಭಾರತೀಯ ಸಮಾಜದ ಸಂದರ್ಭದಲ್ಲಿ ಅಮೆರಿಕಾದ ದೂರದರ್ಶನದ ಮಾದರಿಗಳನ್ನು ಅನುಕರಿಸುವುದರಿಂದ ಆಗುವ ಸಾಂಸ್ಕೃತಿಕ ದುರಂತದ ಬಗ್ಗೆ ಎಚ್ಚರಿಕೆ ಅತ್ಯಗತ್ಯ.

ಕೆಲವು ಅಡ್ಡಾದಿಡ್ಡಿ ರೇಖೆಗಳು

೧

ಇಲ್ಲೊಂದು ಕುಟುಂಬ
ಮನುಷ್ಯ ಸುಖದ ಬದುಕ ನೆರಳ
ಗತಿಗಳಡಿಯಲ್ಲಿ ಜೀವದೂಡಲು
ಯತ್ನಿಸುತ್ತಾ ಚುಕ್ಕಿ ಎಣಿಸುವ ಮಾದರಿ
ಎಷ್ಟೋ ಕ್ಷೌರಿಕರ 'ಬಾಳಿನಲಗಿ'ಗೆ
ಮುಖಕೊಟ್ಟು, ಚಪ್ಪಲಿಗಳಿಗೆ ಪಾದನೀಡಿದ
ಜೀವರಾಶಿಗಳ ಮೇಲೆ ಒಂದೆರಡು ಕಾಲುಗಳು
ನೀಲಿಮೆ ತುಂಬಾ ಚೆಲ್ಲಿದ ಬಿಳಿ ಚೂರುಗಳ
ಕೆಳಗೆ
ಕಪ್ಪು ದಿಗಂತದಾಳದಲ್ಲಿ
ಚಿಮಿಣಿ ದೀಪದ ಸುತ್ತ ಸೆಣಬುದಾರ
ಸೇರಿಸಿ, ಗೋಡೆಯು
ಮೊಳೆಯಲಿ ನೇತಾಕಿ
ನೇರ ಕೆಳಗಿನ ನೆರಳು ಹೊದ್ದ ನೋಟ ಪೂರ್ತಿ
ನೆರೆದ ಆಕಾಶದ ಬೆರೆತ ಗೂಬೆಗಳು
ಮತ್ತೂ ದಾಟಿ ಬೆಳೆದು ಮನೆ ಮಾಡನ್ನು ಹಿಂದಿಕ್ಕಿದ
ನುಗ್ಗೆ ಮರ.

ಹಮೀದ್ ಮಂಜೇಶ್ವರ್, ಮಜಿಬೈಲ್ ಅಂಚೆ, ಮಂಜೇಶ್ವರ-671 323

೨

ಹೊರಗೆ ಹಸಿವು ಹಾಡಿನ ಪಲ್ಲವಿ
ಒಳಗೆ ಕ್ಷಯದ ಚೆಂಡೆಗೆ ಆತುಕೊಂಡ ಗಂಟಲು
ಉಬ್ಬಸದ ವಾದ್ಯಕ್ಕೆ ಧ್ವನಿ ನೀಡುವ ಬಾಯಿ
ಪಿಸಾಟಿ ಪಿಸಾಟಿಸುತ್ತಲೇ ರಸಮಂಜರಿ;
ಪಕ್ಕದ ಗೋಡೆಗಳ ತುಂಬಾ ಸಾಲುಗಟ್ಟಿದ ಇರುವೆ
ಗಳು
ಮೆಲ್ಲನೆ ಮಾತಾಡಿಕೊಂಡಿದ್ದು:
ಜಗ್ಗಕ್ಕೂ ಕೊಡಕ್ಕೂ ಹನಿಹನಿಯಲ್ಲೇ ಮರೀಚಿಕೆ–
ಯಾದ ನೀರು ತಳ,
ಒದ್ದೆ ಸೌದೆಯೊಂದಿಗೇ
ಗುಳಿಬಿದ್ದ ಬಿಲೆಗಳು ಕೆಲವು ಕೇವಲಗಳು.

೩

ಮುತ್ತಿ ಬಂದ ಹೊಗೆಗಳು ಮುಸುಕಿ
ಮೂಗು ಹೊಳ್ಳೆಗಳಲ್ಲಿ; ಅವನ ಪಂಚೆಯೊಳಗೆ
ತೊಡೆಯ ಸಂದುಗಳಲ್ಲಿ
ಅವಳ ಜೋತ ಮೊಲೆಗಳ ನಡುವೆ
ಅರಳಿದ ಜಾಗದಲ್ಲೆಲ್ಲಾ ಹಾದಿ ಬಿಡಿಸಿ ಸೇರಿ
ಯಾತನೆಗಳಿಗೆ ಚಾಲಕನಾಗುತ್ತಲೇ
ಮುಂದುವರಿಯುತ್ತಿದೆ ಬಿಸಿಲು, ಮಳೆ ಚಳಿ ಖಾರಗಳಿಗೆ.
ಪಿಸುಕಾಡುತ್ತಲೇ ಉಸಿರುವ ಪಕ್ಕಾಸುಗಳಿಗೆ
ದೂರದ ಮಸೀದಿಯ ಬಾಂಗು
ಇಗರ್ಜಿಯ ಗಂಟೆ, ಗುಡಿಯ ಸುಪ್ರಭಾತ
ಎಲ್ಲವೂ ಇದೆ
ಬೇಯಿಸಿದ ಅನ್ನಗಳನ್ನು ತಣಿಸುವುದಕ್ಕೆ
ಬೇಯಿಸುವ ನೀರನ್ನು ಕುದಿಸುವುದಕ್ಕೆ.

— ಹಮೀದ್ ಮಂಜೇಶ್ವರ್

ಕೆಡಹಬಲ್ಲರು ಅವರು ; ಕಟ್ಟಬಲ್ಲೆವು ನಾವು

೧

ಕೆಡಹಬಲ್ಲರು ಅವರು ;
ಕಟ್ಟಲರಿಯರು.
ಕಟ್ಟಬಲ್ಲೆವು ನಾವು :
ಕೆಡಹಲರಿಯೆವು.
ಅವರು ಕಟ್ಟಲೂಬಲ್ಲರು !
ರಾಮಮಂದಿರ.
ಕೆಡಹಲೂ ಬಲ್ಲರು ;
ಮಸೀದಿ, ಸರಕಾರ.
ನಡೆಸಬಲ್ಲರು ರಥಯಾತ್ರೆ
ಅಶ್ವಮೇಧಯಾಗ ಜಾತ್ರೆ.
ನಡೆಸಬಲ್ಲರು ಹಿಂದೆ ದೇಶ !
ಹಾಕಬಲ್ಲರು ತ್ರೇತಾಯುಗದ ಪಾಶ !!
ಅವರು ನುಡಿದಲ್ಲಿ ಕಳಿಂಗ
ಅವರು ನಡೆದಲ್ಲಿ ಕುರುಕ್ಷೇತ್ರ.

೨

ಹಿಂದೆಳೆಯಬಲ್ಲರು ಇತಿಹಾಸ ಚಕ್ರ !
ಸಿಡಿದೇಳಬಲ್ಲರು ಸಮಾನತೆ ವಿರುದ್ಧ !!
ಹುಟ್ಟುಹಾಕಬಲ್ಲರು ಅಸ್ಪೃಶ್ಯತೆಯ ಹೊಸತಳಿ
ಪ್ರಚೋದಿಸಬಲ್ಲರು ಪ್ರತಿಭೆಯ ಹೆಸರಿನಲ್ಲಿ
ಕಾಲ, ಕಾಲಕ್ಕೆ ಮನುವಿನವತಾರ ತೊಡಬಲ್ಲರು ;
ಬಲಿ ನೀಡಬಲ್ಲರು, ವಾಮನ ಆಗಬಲ್ಲರು !!
ರಾಷ್ಟ್ರಭಕ್ತಿಯೋ, ರಾಮಭಕ್ತಿಯೋ
ಅದೆ ಶಕ್ತಿ, ಯುಕ್ತಿಯೋ ಸಿಂಹಾಸನಕೆ !
ಅಲ್ಲಾ ಎನ್ನುವವರ ಇಲ್ಲವೆನಿಸಲು
ಕೋಮು ಪಂಜಿಗೆ ದ್ವೇಷ, ಮೋಸದೆಣ್ಣೆಯನೆರೆದು
ಅದನ್ನೆ ರಾಷ್ಟ್ರಭಕ್ತಿಯ ಮಸಾಲೆಯಾಗಿ ಅರೆದು

ಅಲ್ಲಮಪ್ರಭು ಬೆಟ್ಟದೂರು, ಅಧ್ಯಾಪಕ, ಶ್ರೀ ಗವಿಸಿದ್ದೇಶ್ವರ ಕಾಲೇಜ್, ಕೊಪ್ಪಳ
ರಾಯಚೂರು ಜಿಲ್ಲೆ

ಮೋಸ ಆರದ ಮಕ್ಕಳ ತಲೆಗೆ ಸುರಿದು
ದೇಶವನ್ನ ನಿಗಿನಿಗಿ ಅಗ್ನಿಕುಂಡವಾಗಿಸಿ
ಶಾಂತಿ, ನೆಮ್ಮದಿ, ಪ್ರೀತಿ, ವಿಶ್ವಾಸಗಳ ಕತಕತ ಕುದಿಸಿ
ಬೇಳೆ ಬೇಯಿಂಸಿಕೊಳ್ಳುತ್ತಿದ್ದಾರೆ.

೩

ಚರಿತ್ರೆಯಲ್ಲಿ ಚಿನ್ನ ಹುಡುಕದೆ ಚಿಂದಿ ಹುಡುಕುವವರು
ಇತಿಹಾಸ, ಪುರಾಣಗಳ ಪುಂಡೆಪಲ್ಲೆ ಮಾಡಿದವರು
ಬರುತ್ತಿದ್ದಾರೆ ಮತ ಮೂಢರಾಗಿ ರಥಾರೂಢರಾಗಿ
ದಾರಿ ಬಿಡಿ ಸ್ವಾಮಿ, ದಾರಿ ಬಿಡಿ.
ದಾರಿ ಬಿಡದಿದ್ದರೆ ಹಿಂದಿನಿಂದಲೆ ಚಾಕು ಹಾಕುತ್ತಾರೆ
ವಾಲಿಗೆ ಹಾಕಿದಂತೆ!
ಕೆಲವು ಸಲ ಮುಂದಿನಿಂದಲೂ ವಂದಿಸಿ ಗುಂಡಿಡುತ್ತಾರೆ
ಗೋಡ್ಸೆಯಂತೆ!!
ಕರ್ಣ, ಕಣ್ಣಪ್ಪರೆ, ಶಂಬೂಕ, ವಾಲಿ, ಏಕಲವ್ಯರೆ
ಅವರು ರಾಮರಾಗುತ್ತಾರೆ: ನಾವು ರಾವಣರೋ
ಹನುಮಂತರೋ ಆಗಬೇಕು.
ಅವರು ಕೃಷ್ಣರಾಗುತ್ತಾರೆ ; ನಾವು ಸುಧಾಮರೋ
ಸುಯೋಧನರೋ ಆಗಬೇಕು.

೪

ಮಸೀದಿಯ ಕೆಡವಿ ಅಲ್ಲೆ ಮಂದಿರ ಕಟ್ಟಬೇಕೆ ?
ಹುಟ್ಟದ ರಾಮನಿಗೆ ದೇವಪಟ್ಟ ಬೇಕೇ ?
ವಾಲ್ಮೀಕಿಯ ಕವಿ ಮನವೇ ರಾಮ ಜನ್ಮಭೂಮಿ.
ಮನವ ಕಟ್ಟಬೇಕಲ್ಲದೆ ಮಂದಿರ ಬೇಡ
ಜನವ ಕಟ್ಟಬೇಕಲ್ಲದೆ ಜಾತ್ರೆ ಬೇಡ
ರಾಮ ಜ್ಯೋತಿ ಕೋಮು ಜ್ಯೋತಿ
ರಥ ಯಾತ್ರೆ ಮತ ಯಾತ್ರೆ
ಮನದೊಳಗೆ ಹುಟ್ಟಲಿ ಜ್ಯೋತಿ
ಎರೆ ಸಹಿಷ್ಣುತೆ, ಸಹನೆ, ಸ್ನೇಹ, ಪ್ರೀತಿ,

ಕಟ್ಟಿದರೆ ನಾವು ಏಕತೆಯ ಕಟ್ಟುವೆವು ;
ಕೆಡಹಿದರೆ ಅನೈಕ್ಯತೆಯ ಕೆಡಹುವೆವು.
ಅವರು ಕಟ್ಟಿದರೆ ರಾಮ ಮಂದಿರ ;
ಕೆಡಹಿದರೆ ಮಸೀದಿ, ಸರಕಾರ.

— ಅಲ್ಲಮಪ್ರಭು, ಬೆಟ್ಟದೂರು

(ಈ ಕವನವನ್ನು ಇತ್ತೀಚೆಗೆ ಗುಲಬರ್ಗಾ ವಿಶ್ವವಿದ್ಯಾಲಯ ಪಠ್ಯಪುಸ್ತಕದಲ್ಲಿ ಪ್ರಕಟಿಸಿತ್ತು. ಕೊನೆಗೆ ವಿವಾದಕ್ಕೆ ಒಳಗಾಗಿ ತೆಗೆಯಲಾಗಿದೆ.—ಸಂ.)

ಕಥೆ

ಬೀಳುವ ನಾಡಿ

— ಕುಂದರನಾಡ ಪಾಟೀಲ

ಹೀಂಗ ಒಂದು ಊರು. ಈ ದೇಶದ ಯಾವದ ಊರಿನಂಗ ಅದೊಂದು ಪಾಳೆಗಾರಿಕೆ ಊರು. ಹಾಂಗಂದ ಕೂಡಲೆ ಐವತ್ತು ವರ್ಷದ ಹಿಂದಿನ ನೆನಪು ಕೆದಕಿ ಬರೆಯುವ ನಗರವಾಸಿ ಬುದ್ಧಿವಂತರ ಕಥ್ಯಾಗ ಬರೊ ಮಂದಿ ಈಗ ಊರಾಗ ಇಲ್ಲ. ಮೇಣ್ಯಾಗ ಕೂತ ಮುಂದ ಸಾಗೋ ಇನಾಮದಾರರಿಲ್ಲ. ಕುದರಿಮ್ಯಾಗ ಕುಂತ ಕುಣೀತ ಹೋಗೋ ದೇಸಾಯಿ ಇಲ್ಲ. ಧಣೇರ ಬಂದ್ರು ಸರ್ರಿ....ಧಣೇರ ಬಂದ್ರು ಸರ್ರಿ........ ಅಂತ ಕೋಲ ಹಿಡಿದ ಕೂಗಿಕೊಂತ ಹೊಗೊ ಕೋಲಕಾರರಿಲ್ಲ. ಕ್ವಾರಿ ಮೀಸಿ ಗೌಡ್ರು ಬರೂತನಾ ಕತ್ತಿ ಹಿಡಿದ ಕಾಯುಕೊಂತ ಚಾವಡ್ಯಾಗ ಕುಂಡ್ರೊ ಸನದಿಗಳೂ ಇಲ್ಲ. ಈಗದೆಲ್ಲಾ ಸೆಡಗರ ಹೋಗಿ ಅವೆಲ್ಲಾ ಪಳೆಯುಳಿಕೆಗಳು ಹಳಿವಾಡೇದ ಬೀಳೂ ಕಲ್ಲಿನ ಕೆಳಗ ಸಿಕ್ಕು ಜಿಬ್ಬಿ ಆಗಿದಾವ.

ಎಲ್ಲಾ ಊರಿಗಿರುವಂಗ ಅದಕ್ಕೂ ಒಂದು ಪುರಾಣ ಐತಿ. ಇತಿಹಾಸ ಐತಿ. ವರ್ತಮಾನ ಐತಿ. ಬಚ್ಚಬಾಯಿ ಮುದಿಕೇರು ಸ್ಥಳ ಪುರಾಣ ಬಿಚ್ಚಿರಂದ್ರ ಸಾಲಿಗಿ ಹೋಗೊ ಹುಡುಗೋರು ತಗದ ಬಾಯಾಗ ನೊಣಾ ಹೊಕ್ಕರೂ ಖಬರಿಲ್ದ ಕೇಳತಿರತಾವ. ಸೀತಾನ್ನ ಹುಡುಕಾಕ ರಾಮ ಲಂಕಾಕ್ಕ ಹೋಗುವಾಗ ಏಳೂರ ಮ್ಯಾಲಿಂದ ಹೋಗಿದ್ದಂತ ಒಂದ್ಹೆಜ್ಜಿ ನಿರ್ವಾಣೆಪ್ಪನ ದಿಬ್ಬದ ಮ್ಯಾಲ ಇಟ್ರು ಮತ್ತೊಂದ ಹೆಜ್ಜಿ ಏಳ ಹರದಾರಿ ಆಚೆಕ ಕಲ್ಲಳ್ಳ ಪಡಿಮ್ಯಾಲ ಇಟ್ಟಿದ್ದಂತ, ಅವನ ಪಾದದ ಗುರುತು ಇನ್ನೂ ಮಾಸದ ಹಂಗs ಉಳದ್ದಾವಂತ.

ಕುಂದರನಾಡ ಪಾಟೀಲ, ಹುದಲಿ–591 148, ಬೆಳಗಾವಿ ಜಿಲ್ಲೆ

ಜಹಗೀರಿ ಪಡೆದ ಇನಾಮದಾರನಿಗೂ ಸೈತ ಹೇಳಾಕ ಜನ್ನತದಂಥಾ ಪುರಾಣ ಐತಿ. ಪೈಗಂಬರರು ಮೊಮ್ಮಗನ್ನ ಪೂರ್ವದಿಕ್ಕಿಗಿ ಕಳಿಸಿದ್ರಂತ, ಹೊತ್ತ ಮುಳುಗುವಲ್ಲಿ ವಸ್ತಿ ಮಾಡಂತ ಹೇಳಿದ್ರಂತ. ಏಳೂರಾಗ ತಳಾಊರಿ ಸುಲ್ತಾನನ ಕಡಿಂದ ಸನದ ಪಡದ ಕಥೀನ್ನ ಅಲ್ಲಾನ ಆಣಿ ಮಾಡಿ ಹೇಳತಾರ, ನಸೀಬ ಗಾಂಡೂ ಇದ್ರ ಪಾಂಡೂ ಏನ ಮಾಡ್ಯಾನು ಅಂತ ಮುಸೋತ್ಯಾಗ ನಮಾಜ ಮಾಡತ ಗಡ್ಡದ ಮ್ಯಾಲ ಕೈ ಎಳಕೋತಾರ.

ಕಾರಭಾರಿ ಇಲ್ಲದಿದ್ರ ಇನಾಮದಾರನ ಕಥಿ ಅರ್ಧಾಕ್ಕ ನಿಂತ ಬಿಡತೈತಿ. ದೇಶ ಪಾಂಡೆ ಅಂತ ಕಾರಭಾರಿ ಇದ್ದಂತ. ಇವರ ಜಾಹಗೀರಿನೆಲ್ಲಾ ಎತ್ತಿ ಹಾಕಿದ ಕಥೆಯನ್ನ ಉಪ್ಪಾಖಾರಾ ಹಚ್ಚಿ ಉಪಸಂಹಾರ ಮಾಡೊದನ್ನ ಸಯ್ಯದ ಸಾಹೇಬರ ಬಾಯಿಂದನs ಕೇಳಬೇಕ. ಮುಸಲಗ ಮುಸಾಲಿ ಮುರಗಿ ಹಾಕಿದರ ಮುಸೋತಿನ್ನ ಬರಕೊಟ್ಟ ಬಿಟ್ಟಿತ್ರಂತ. ಅಂತ ಅಗಸಿ ಬಾಗಿಲಾ ತಗದಂಗ ಗಡ್ಡದೊಳಗ ಬಾಯಿ ತಗದ ಖೊಳ್ಳಂತ ನಗತಾರ.

ಮುಂದ ಬರೊ ಬಿರುಗಾಳಿ ಸೂಚನಾ ಕಂಡ ದೇಶಪಾಂಡೆಗಳು ಭೂಮಿನ್ನೆಲ್ಲಾ ಕಾರಕೂನರ ಉಡಿಗೆ ಹಾಕಿ ಅಬಚಿ ಕಕ್ಕಿಯು ಮಕ್ಕಳ ವಶೀಲಿಯಿಂದ ನೌಕರಿ ಹಿಡಿದು ನಗರ ಸೇರಿದಾರ.

ಭೂ ಹಿಡುವಳಿ ಕಾಯ್ದೆದಿಂದ ಕಡ ಉತಾರದಾಗಿನ ಧಣೇರ ಹೆಸರ ಕಡಿಮಿ ಆಗಿ ರೈತರ ಹೆಸರ ಮ್ಯಾಲೇರಾಕ ಸುರು ಮಾಡಿದ ಕೂಡಲೆ ಮಗಳ ಮದುವಿ ವರದಕ್ಷಣೆ ಕೂಡಸೂದಕ ಕಾರಕೂನರು ಊರಾಗಿನ ಮದವ್ಯಾಗ ಮಂತ್ರಾ ಅನ್ನಾಕ ಸುರು ಮಾಡಿದಾರ.

ದೇಸಗತ್ತಿ ಕಳಕೊಂಡ ದೇಸಾಯರ ಸಂತಾನ ಕಂದರಿ ಏರುದನ್ನ ಬಿಟ್ಟಿಲ್ಲ. ಜರಾಜಾಗ್ ಬದಲಾಗೈತಿ ಅಷ್ಟ. ಕಂದರಿ ಬೆನ್ನಮ್ಯಾಲ ಕುಂಡ್ರತಿದ್ದವನು ಸ್ವಲ್ಪ ಹಿಂದ ಸರಿದು ಇಜಾರ ಏರಿಸಿ ಟಾಂಗಾ ಹೊಡ್ಯಾತಾರ.

ಗೌಡಿಕೆ ಖಾಲ್ಸಾ ಆಗಿದ್ದರೂ ಹಿಂದಿಂದ ಮರ್‍ಯಾಕ ಆಗದ, ವರ್ತಮಾನಕ್ಕ ಹೊಂದಿಕೊಳ್ಳೂದೂ ಆಗದ, ಗೌಡಿಕಿ ಠೆಬರ ಕಾಯುದ್ಧಕೊಂಡ ಹೋಗೂದಕ ಭವಿಷ್ಯ ಹಾಳುಮಾಡಿಕೊಳ್ಳುತ್ತಿರುವ ಗೌಡ್ರು ತಾನೊಬ್ಬ ಬ್ರಿಟಿಷರು ಫರ್ಮಾನು ಕೊಟ್ಟು ಹೋದ ವಿಶಿಷ್ಟ ನಾಗರಿಕ ಅಂತ ತಿಳಕೊಂಡಿದಾರ.

ಊರ ಅಂದ ಮ್ಯಾಗ ಹೊಲಗೇರಿ ಇರೂದನs ಹೊಲಿಗೇರಿ ಹೊಕ್ಕರನs ಗೌಡ್ರ ವಜನ ಹೆಚ್ಚತೈತಿ ಅಂತ ತಿಳಕೊಳ್ಳು ಕುಳಗೋಳ ಪೈಕಿ ಟೊಣ್ಣೆ ಗೌಡ್ರು ಒಬ್ಬರು. ಹೇಟ್ಟ ಹೆಸರಾಗಲಿ ಇಟ್ಟ ಹೆಸರಾಗಲಿ ಊರಾಗಿನ ಭಾಳಮಂದಿಗಿ ಗೊತ್ತಿಲ್ಲ. ಅವರು ಟೊಣ್ಣಾ ಹಾಕ್ಕೊಳ್ಳು ಮೊದಲು ಸಮಿಾಪದ ಸಂಬಂಧಿ ಸಾಮಾನಾ ಆಸ್ತಿ ಹೊರಗ

ಹೋಗಬಾರದಂತ ಹಿರಿಗೌಡ ಹೆಣಕ್ಕ ಇವರನ್ನ ದತ್ತಕ ಮಾಡಿದ್ದಂತ. ಹಿಂಗಾಗಿ ಗೌಡ್ರು ಗಿಜಿಬಿಜಿಯಾಗಿ ಗಸಕ್ಕನ ಒಂದ ಸಹಿ ಜಾಡಿಸಿಬಿಡತಾರ. ಖರೆ ಹೇಳಬೇಕಂದ್ರ ಟೊಣ್ಣೆ ಗೌಡ್ರ ಅಂಬು ಹೆಸರ ಹ್ಯಾಂಗ ಬಂತಂಬಂದನ್ನ ಗೌಡ್ರ ಹೇಳದಿದ್ದರೂ ಗೌಡ್ರ ಹಳಬ ಹಂಕೆ ತುಂಬಿದಾಗ ಹೇಳತಾನ. ಬಸರಿಗಿಡದ ಕಟ್ಟೆಗಿ ಕುಂತ ಬಾಬುಸಾಬ ಒಂದ ಜುರುಕಿ ಬೀಡಿ ಜಗ್ಗಿ ಎಲ್ಲಾ್ಕ ಮೊದಲು ಫಸ್ಟ ಪಹಿಲಾ ಹೊಲೇರ ಮಲ್ಲಿನ್ನ ಚಾವಡಿಗೆ ಎಳತಂದು ಫೌಜದಾರ ಸಾಹೇಬರಿಗೆ ಒಪ್ಪಿಸಿದ ಕಥಿ ಹೇಳತಾನ. ಆಮ್ಯಾಲ ಗೌಡ್ರ ಕೂಡ ಬಂಟಾಣಿಕಿ ಮಾಡಿದ ಗಂಟ ಬಿಚ್ಚತಾನ. ಅದs ಆಗ ಗೌಡ್ರಿಗೆ ಕುಡಿ ಮಿಸಿ ಒಡದಿದ್ದು ವಂತ. ಗೌಡ್ರಿಗೆ ಮದುವಿ ಮಾಡ್ಸಿ ಹಿರಿ ಗೌಡ್ರ ಹರಾ ಅಂದಿದ್ದರಂತ. ಅದೇನೊ ಅಂತಾರಲಾ ಮಿಸಿ ಬಂದಾವಗ ದೇಶ ಕಾಣುದುಲ್ಲಾ ಮಲಿ ಬಂದಾಕಗಿ ನೆಲಾ ಕಾಣು ದುಲ್ಲಾ, ಹಂಗ ನಮ್ಮ ಗೌಡ್ರು ತಪ್ಪ ಇರಲಿ ಒಪ್ಪ ಇರಲಿ ಕೈಯ್ಯಾಗ ಸಿಕ್ಕ ಸದರಗಟ್ಟಿ ಕಂಬಕ ಕಟ್ಟಿ ಟೊಣ್ಣೀನs ಎಬ್ಬಸತಿದ್ದರಂತ. ಆರತಿಂಗಳದೊಳಗ ಟೊಣ್ಣೆ ಗೌಡನ ಉಸಾ ಬರಿ ಬ್ಯಾಡ ಮಾರಾಯಾ ಅಂತ ಊರಾಗಿನ ಮಂದಿ ಓಡತಿದ್ದರಂತ. ದಿನ ಹ್ವಾದಂಗ ಹೊಡ್ಯೂ ಅವುಲ ಎಷ್ಟು ಏರಿತಂದ್ರ ಹೊಡ್ಯೂದಕ್ಕ ಯಾರೂ ಸಿಗದಿದ್ರ ಮುನ್ಯಾಗಿನ ದನಾ ಕರಾ ನಾಯಿ ಬೆಕ್ಕ ಕೈಗಿ ಸಿಕ್ಕ ಮನಿಮಂದಿ ಮ್ಯಾಲ ಮುಗಿಬೀಳಂತಿದ್ದರಂತು. ಇನ್ನೊಬ್ಬರನ್ನು ಹಿಂಸಿಸಿ ಅವರು ಯಾತನೆ ಪಡೂವದನ್ನ ನೋಡಿದಪ್ಪೂ ಗೌಡ್ರ ಖುಷಿ ಉಕ್ಕೇರುವ ಒಂದ ನಮೂನಿ ವಿಕೃತಿ ಬೆಳೀತಂತ. ರಾತ್ರಿ ಉಂಡ ನೀರ ಉಗಳಕ ಹೊಲ ಗೇರಿಗಿ ಹೋಗೂ ಗೌಡ್ರನ್ನ ಗೌಡತಿ ಒಂದಿನಾ ಅಡ್ಡಗಟ್ಟಿ ಮುನ್ಯಾಗ ಸಿಗದ ಸುಖಾ ಹೊಲಿಗೇರ್ಯಾಗ ಸಿಗತೈತ್ಯ ಅಂತ ಕೆಣಕಿದಳು. ಅಂದು ಮುನ್ಯಾಗ ಉಳಿದ ಗೌಡರು, ಆಕಿ ಮ್ಯಾಲ ಆಕ್ರಮಣ ಮಾಡಿ ಮಲಿ ಮುಸಡಿ ಗಲ್ಲಾ ತುಟಿ ಅನ್ನದ ಚೋಳನಾಯಿ ಹರದಂಗ ಹಲ್ಲಿಗಿ ಸಿಕ್ಕಷ್ಟು ಪಡಾಳಿ ಹಾರಿಸಿದ್ರು. ಡಾಕ್ಟರ ಕೇಳಿದರ ಹೇಳೂದೇನಂತ ಗೌಡತೀನ್ನ ವಾಡೇದಾಗ ನವಿಸಿದ್ದರು.

ಗೌಡ್ರ ಪ್ರಕಾರ ಹೆಂಡತಿ ಅಂದ್ರ ವಂಶ ಬೆಳೆಸು ಹೊಲಾ ಇದ್ದಂಗ. ಗಟ್ಟಿ ಬೇಲಿ ಹಚ್ಚಿ ದನಾ ಹೊಗದಂಗ ಕಾವಲಾ ಮಾಡಬೇಕಂತಿದ್ರು. ತಮ್ಮ ಹೆಂಗಸರನ್ನ ಯಾರೂ ನೋಡದಂಗ ವಾಡೇದ ಸುತ್ತ ಗ್ವಾಡಿ ಕಟ್ಟಿಸಿದ್ರು. ಗೌಡತಿ ಹೊಸಮನಿಗಿತ್ತಿಗಿ ಬಂದಾಗ ತಲಿನೋವು ಎದ್ದಿತು. ಗೌಡ್ರ ಅಂದ ಮ್ಯಾಗ ಅಂತಿಂಥಾ ಡಾಕ್ಟರಗ ಹ್ಯಾಂಗ ತೋರಸೂದು ಅಂತ ತಾರದೊಳಗಿನ ದೊಡ್ಡ ಆಸ್ಪತ್ರಿಗೆ ಹೋಗೂ ತಯಾರಿ ಮಾಡಿದ್ರು. ಕೂಗಳತಿಯೊಳಗಿನ ಬಸ್ಸಸ್ಟಾಂಡತನಾ ಕೊಲ್ಹಾರಿ ಬಂಡಿ ಹೂಡಿಸಿದ್ರು. ಬುರಖಾ ಹಾಕ್ಕೊಂಡು ಸರಕ್ಕನ ಬಂದ ಚಕ್ಕಡಿಯೊಳಗ ಕುಂತ ಗೌಡತೀನ್ನ ನೋಡಾವರ ನೋಡಿದ್ರು, ನೋಡಲ್ದವರು ನಸೀಬ ಇಲ್ಲಂತ ಹಳಹಳಸಿದರು. ಬಂಡಿ ಮುಂದ ಬಡಗಿ ಹಿಡಕೊಂಡ ಕೊಲ್ಹಾರ, ತಲವಾರ ಹಿಡದ ತಳವಾರನ ಹಿಂದಿಂದ ಹಳಬರಾ, ಹಾರಿಗೆಜ್ಜಿ

ಹಾಕ್ಕೊಂಡ ಹೋರಿಗೋಳಾ ಚಳಚಳ ಅಂತ ನಡಿಯೋದನ್ನ ಕಣ್ಣುತುಂಬ ನೋಡಿ ಗೌಡತಿ ನಶೀಬಕ್ಕ ಚಿಟಿಕಿ ಮುರದಿದ್ರು. ಗೌಡಸಾನಿ ಆಗೂ ನಸೀಬ ಇಲ್ದಿದ್ದರೂ ಗೌಡನ ರಂಡಿ ಆಗೇರೆ ಮೆರಿಬೇಕನ್ನು ಹಣಬರ ಕಲ್ಲವ್ವನಂಥಾ ಹೆಂಗಸರು ಊರಾಗ ಭಾಳಮಂದಿ ಇದ್ದರು. "ಏಯ್ ನಾ ಯಾರಂತ ತಿಳದ್ದಿ ಗೌಡ್ರಿಗೆ ಹೇಳಲೇನೂ ಮುಲ್ಲಾ" ಅಂತ ಕಲ್ಲವ್ವ ಗುಂಡುಗಿದರ ಊರೆಲ್ಲಾ ಗಡಾ ಗಡಾ ನಡಗತಿತ್ತು. ಹಾಂಗ ಅಂಜುಂದಕ್ಕ ಕಾರಣ ಇಲ್ದ ಇರಲಿಲ್ಲ. ಕಲ್ಲವ್ವನ ಮ್ಯಾಲ ಕಣ್ಣಿಟ್ಟ ಸಲಿಗಿ ಮಾಡಿದ್ದಕ್ಕ ಚಾಕರಿ ಮಾರೋತ್ಯಾನ ಮುರ್ವಕ್ಕ ಕ್ಯಾರ ಹಚ್ಚಿದ್ರು ಅವನ ತಲಿ ಮಟಾ ದಂಡ್ಡು ಖರ್ಚು ಮಾಡಿದ್ರೂ, ಎರಡು ವರ್ಷದ ಜೇಲಿನ ಬಾಕಿ ಗೌಡ್ರು ತೀರಿಸಿ ಬರಬೇಕಾಗಿತ್ತು. ಜೇಲಿನಿಂದ ಬರೋದ್ರೊಳಗ ಮೈನೆರೆದು ನಿಂತ ಕಿರಿಮಗಳು ಹರಕೊಂಡ ತಿನ್ನವರಂಗ ಆವಾರ ಗ್ನಾಡಿ ಹೊರಗ ನೋಡಾಕ ಸುರು ಮಾಡಿದ್ದಳು. ಪೋಸ್ಟ ಆಫೀಸಿನ್ಯಾಗ ಪೋಸ್ಟಲ್ ಆರ್ಡರ ಸಿಗದ ಪರದಾಡು ಹುಡುಗೋರು ಗೌಡ್ರ ವಾಡೇದ ಮುಂದ ಸೀಟಿ ಹೊಡೀತ ದಾಟಿ ಹೋಗೂದನ್ನ ನೋಡಿದ ಮ್ಯಾಲಂತೂ ಗೌಡ್ರ ಮೈ ಭಗಾಭಗಾ ಉರೀತು, ಸಿಟ್ಟಿನ ಕೈಯ್ಯಾಗ ಬುದ್ದಿಕೊಟ್ಟು ಸುಟಗೊಂಡ ಸಾಯೋದನ್ನ ಗೌಡ್ರು ಅನುಭೋಗಿಸಿದ್ರು. ಜೇಲಿಗಿ ಹ್ವಾದ ಮ್ಯಾಲ ಗೌಡ್ರಿಗೆ ಜಗತ್ತ ಕಂಡಿತ್ತು. ಮಗಳ ಮದುವಿ ಮಾಡೂ ತಯಾರಿ ನಡಿಸಿದರು. ಮಗಳ ಮದುವಿ ಒತ್ತಟ್ಟಿಗಿರಲಿ ಹಬ್ಬಾ ಹುಣ್ಣಿವಿ ಬಂದ್ರ ಗೌಡ್ರ ಯಾವ ಹೊಲಾ ಮಾರಬಹುದು ಅಂತ ಕಟ್ಟಿಗಿ ಕುಂತ ಜನಾ ಲೆಕ್ಕಾ ಹಾಕುತಿತ್ತು. ಗೌಡ್ರ ಹೊಲಗಳ ಸರ್ವೆ ನಂಬರ ಎದಿ ಮ್ಯಾಲಿನ ಕಿಸೆದಾಗ ಜಪ್ಪಿಸಿಕೊಂಡ ಹಲಮಂಗ್ರಿ ಸಂಗ್ಯಾ ಹಲ್ಲ ಮಾಸಗೊಂಡ ಯಾವ ಹೊಲಾ ಎಷ್ಟಕ್ಕ ಹರಕೊಬೇಕನ್ನು ಲೆಕ್ಕಾ ಹಾಕತಿರತಾನ. ಅರ್ಧಾ ಡಜನ ಹೆಣ್ಣ ಮಕ್ಕಳನ್ನು ಕಪ್ಪಸ ಬೇಕಾದ್ರ ಊರ ಮುಂದಿನ ಕರಿ ಹೊಲಾ ಎರಿಹೊಲಾ ಗೌಡ್ರ ಚೌಕಾ ಮಾರಬೇಕಾ ಗಿತ್ತು. ಮಾಂಸಾ ತಿನ್ನು ಹುಲಿ ಹಸದರ ಹುಲ್ಲ ತಿನ್ನಾಕಿಲ್ಲಾ ಅನ್ನು ಗೌಡ್ರು ಸಾಲ ಬೇಕಾದ್ರು ವಾಡೇಕ ಕರೆಯಿಸಿ ಕೇಳ್ಯಾರ ಹೊರತಾಗಿ ಇನ್ನೊಬ್ಬರ ಬಾಗಿಲಿಗಿ ಹ್ವಾದವರ ಅಲ್ಲ. ದೊಡ್ಡಸ್ತಿಕೆ ಕಾಯ್ಕೊಳ್ಳಂದಕ ಹಳ್ಳಕಿ ಕೆಲಸಾ ಅವರ ಮಗಾನನ ಮಾಡೊ ಪರಸಂಗ ಬಂದೈತಿ. ಮೂರ ಸಲಾ ಕರ್ದ್ಯಾಕ ಹ್ವಾದರೂ ಸಂಗ್ಯಾ ಬಂಧಿರಲಿಲ್ಲ. ಮೂರ ಹರದಾರಿ ಆಚಿಗಿನ ಸೀಮಿ ಹೊಲಾ ಕೊಳ್ಳೂದು ಸಂಗ್ಯಾಗ ಬ್ಯಾಡಾಗಿತ್ತು. ಮುಳುಗು ಸಾಲಾ ಕೊಡೂ ಮನಸ್ಸಿಲ್ಲದ ಮುಖಾ ತಪ್ಪಿಸಿ ಅಡ್ಡಾಡತಿದ್ದ. ಮಗಳ ಮದವಿ ಠರಾಯಿಸಿದ ಗೌಡ್ರು ಪೇಚಿನೊಳಗ ಸಿಕ್ಕರು. ಮರ್ಯಾದಿ ಉಳಿಸಿಕೊಳ್ಳಂದಕ ಮಟಕಾ ಬುಕಿ ಮುಲ್ಲಾನ ಕರಿಸಿಕೊಂಡ್ರು. ತಮ್ಮ ದರ್ಜೆಕ್ಕ ಸಮನಾದವರು ಊರಾಗ ಯಾರೂ ಇಲ್ಲಂತ ತಿಳಕೊಂಡ ಗೌಡ್ರು ಮುನ್ಯಾಗ ಇರೂ ಒಂದs ಕುರ್ಚಿಮ್ಯಾಲ ಕೂಂತ ಬಂದ ವರನ್ನು ಕೆಳಗ ಕುಂದ್ರುಸತಾರ. ಗೌಡ್ರ ಕರೆಯಿಸಿದ ಕಾರಣ ಗೊತ್ತಾದ ಕೂಡಲೆ

'ಹೌದs! ಹರಕತ್ತಿಲ್ಲ ತಲಿ ಮ್ಯಾಲ ಸಣ್ಣ ಅವ್ವಾರದೊಂದ ಭಾರ ಕುಂತಿತ್ತ್ರಿ. ಅದನ್ನೂ ಇಳಿಸಿದಿರೆಂದ್ರ ಜಟ ಕಡದಂಗ ಆತ ಬಿಡ್ರಿ' ಅಂತಂದ, ಗೌಡಗ್ರು ಭಾಳ ಒತ್ತಾಯಂ ಮಾಡಿದ ಮ್ಯಾಲ 'ಅಪ್ಪಾರ ಹೊಲಾ ನಮಂಗ ನೀಗದ ಮಾತ್ರಿ. ನಿಮ್ಮ ಸೂರ ನೆಳ್ಳಾಗ ಒಂದಿಷ್ಟ ಜಾಗಾ ತೋರಿಸಿದ್ರ ಸಣ್ಣದೊಂದ ಗೂಡ ಕಟ್ಟಿಗೊತೇನರಿ' ಅಂತ ಜಾಗ ಖರೀದಿಸಂವ ಇಂಗಿತ ಹೊರಗೆಡವಿದ. ಗೌಡ್ರು ಹ್ಯೆಗೈ ಮಾಡದ ವಾಡೇದ ಬಾಜೂಕಿನ ದನದ ಮಂನಿ ಮಾರಾಟ ಮಾಡಿಯೇಂಬಿಟ್ಟರು.

ಊರೊಳಗ ಹೊಕ್ಕ ನಳದ ನೀರಿಗಿಂತ ವೇಗವಾಗಿ ಕಾಂಕ್ರಿಟ ಗೋಡೆಗಳಂ ಏಳತಿದ್ರ ವಾಡೇದ ಕಲ್ಲಂ ಒಂದೊಂದಾಗಿ ಬೀಳಾಕ ಹತ್ತಿದಾವ. ಹೊಟ್ಟೆಗಿಲ್ಲದ ಗೌಡತಿ ಹೊಲಕ ಹೋಗತೇನಂತ ಹಾಟಾ ಮಾಡಾನಾ ಆಕಿಗಿ ಹುಚ್ಚು ಹತ್ತೇತೆಂತ ಖೋಲಿದಾಗ ಹಾಕಿ ಕೀಲಿ ಜಡದ್ದಾರ. ಅವರ ಮಗಾ ಊರ ಬಿಟ್ಟು ಓಡಿ ಹೋಗಿ ಹೊಟೆಲದಾಗೆಲ್ಲೊ ಕಪ್ಪಾಬಸಿ ತೊಳ್ಯಾತಾನಂತ ಸಂದ್ದಿ ಆಗೇತಿ. ಧಣೇರ ಹೊಲದಾಗ ಕೂಲಿ ಮಾಡಾಕ ಬಂದ ಪರಿಶ್ಯಾ ರೈತ ನಾತೆದಿಂದ ಮಾಲಕನೂ ಆಗಿ ಧಣೇರಕ್ಕಿಂತ ದೊಡ್ಡ ಧಿಮಾಕಲೆ ಊರಾಗ ಅಡ್ಡಾಡತಾನ. ಮಂಟಕಾ ಮಂಲ್ಯಾ ಮಂಲ್ಲೂ ಸೇಟನಿಂದ ಮಂಲಶೆಟ್ಟಿಯಾಗಿ ಗೌಡ್ರ ದನದ ಮಂನಿ ಬಿಚ್ಚಿ ಆರ್.ಸಿ.ಸಿ. ಬಂಗಲೆ ಕಟ್ಟಿಸಿದಾನ, ಅವನ ಬಚ್ಚಲ ನೀರ ಹಾಯಂಬಾರದಂತ ತಕರಾರ ಮಾಡಿದ ಗೌಡ್ರ ವಾಡೇದ ಮುಂದ ಗಟಾರ ಆಗಿ ಓಣ್ಯಾಗಿನ ಪಾಯಂಖಾನೆ ನೀರ ಹರ್ಯಾತಾವ. ಸಂಜಿಲೆ ಫೋನಿನ ಮ್ಯಾಲ ಮಂಟಕಾ ನಂಬರ ಕಳಿಸಿದ್ರ ರಾತ್ರಿ ಕಲರ ಟೀವ್ಹಿಯೊಳಗ ಬ್ಲೂಫಿಲ್ಮ ತೋರಸ್ತಾನ. ಅದೆಲ್ಲಾ ದುಂಬಡಿ ಸಹಿಸಾ ಕಾಗದ ಗೌಡಗ್ರು ಬಾಗಿಲಾ ಕಿಡಕಿ ಬಂದ ಮಾಡಿ ಒಳಗs ಇರತಾರ. ವರ್ಷಗಟ್ಟಲೆ ಅವರ ಮಂಖಾನನs ಕಾಣಂದುಲ್ಲ.

ಊರ ಉಪಕಾರ ಅರಿಯಂಮದಿಲ್ಲಾ ಹೆಣಾ ಸಿಂಗಾರ ಅರಿಯಂಮದಿಲ್ಲ ಅನ್ನುಮಂಗ ಊರೆಲ್ಲಾ ಹುಚ್ಚು ಕಡಮಿ ಗೌಡ್ರನ್ನ ಮಂರತಂಗ ಆಗಿದ್ರೂ ಹೊಲೇರ ಗೌರಿ ಮಾತ್ರ ಅವರನ್ನ ಮಂರೆತಿಲ್ಲ. ಬೆಳಿಗೆದ್ದು ಬಾಗಿಲ ಮುಂದಿನ ಕಸಾಗೂಡಿಸತಾಳ. ವಲಿ ಹೊತ್ತಿಸಿ ಗೌಡ್ರಿಗೆ ಚಾ ಮಾಡಿಕೊಡತಾಳ. ವಾಡೇದಾಗ ಕಾಳ ಇಲ್ಲಿದ್ದರ ಊರೆಲ್ಲಾ ಜೋಹಾಡಿ ಗೌಡ್ರ ಹೊಟ್ಟಿ ನೆತ್ತಿ ನೋಡತಾಳ. ಸಿಕ್ಕೀತೊ ಇಲ್ಲಂತ ಗಪಾಗಪಾ ತಿನ್ನೂದನ್ನ ನೋಡಿ ಹಿಂದಿನ ಗೌಡ ಇಂವs ಅಂತ ಗದ್ದಾಗ ಕೈ ಹಚಿಕೊಂಡ ಕೌತಂಕ ಪಡತಾಳ.

"ಅಲ್ರಿ ಗೌಡ್ರ ನಮ್ಮ ಕೈಲಿಂದ ಮಾಡಿದ ಅಡಿಗಿ ಉಂಡ್ರ ಜಾತಿ ಕೆಡತೈತಿ ಅಂತೀರಿ; ರಾತ್ರಿ ನಮ್ಮ ಬಗಲಾಗಿನ ಬೆವರ ನೆಕ್ಕಿ ಬಾಯಾಗ ಬಾಯಿ ಹಾಕತೇರಿ, ನಿಮ್ಮ ಜಾತಿ ಕೆಡೂದುಲ್ಲಾ ?" ಅಂತ ಗೌರಿ, ಹರೆ ಉಕ್ಕಿ ಹರ್ಯುವಾಗ ಗೌಡರನ್ನೊಮ್ಮೆ ಕೇಳಿದ್ದಳಂ. ಗೌಡಗ್ರು ಉತ್ತರಕ್ಕ ತಡಬಿಡಿಸಿ ತಲಿಗಿ ಹೊಳದದ್ದನ್ನ ಹೇಳಿದ್ದರಂ.

'ನಿಮ್ಮ ಊಟ ಹೊಟ್ಯಾಗ ಹೋಗಿ ರಕ್ತ ಆಗತೈತಿ, ನಮ್ಮ ಉಚ್ಚ ರಕ್ತದಾಗ ಕೆಟ್ಟ ರಕ್ತ ಕೂತಿ ಜಾತಿ ಕೆಡತೈತಿ ಉಗಳ ನುಂಗಿದ್ರ ರಕ್ತ ಆಗತೈತಿ' ಅಂತ ಆಕೀನ್ನ ಕೇಳಿದ್ದರು. ಎಲಾ ಇವನ ಹೆಣಾ ಹೊರಲಿ ದುರ್ಗಿ ಬ್ಯಾನಿ ಹಾಯ್ಲಿ! ನಮ್ಮ ಊಟ ಇವನ ಹೊಟ್ಯಾಗ ಹೊಕ್ಕರ ಇವನ ಜಾತಿ ಕೆಡತೈತಿ, ಇವನ ರಕ್ತ ನಮ್ಮ ಹೊಟ್ಯಾಗ ಬೆಳದ್ರ ಕುಲಗೇಡಿ ಆಗತೈತಿ. ಇವನ ಜಾತಿ ಯಾವ ಮಾಡಿದಾನೊ ಹಾದರಕ ಹುಟ್ಟಿದುವ ಅಂತ ಮನಸ್ಸಿನ್ಯಾಗ ಶಾಪಾ ಹಾಕಿದ್ದಳು.

ಭಾಳ ಭಾಳ ಮೆರದವರನ್ನ ದೇವರ ಹಿಂಗ ಮರೀಬಾರದಾಗಿತ್ತು ಅಂತ ಮರಗತಾಳ, ದರಿದ್ರ ಬಾಳೇದ ನಶೀಬ ಎಂದಾದರೊಂದು ದಿನ ತಗದೀತನ್ನು ಆಶಿ ಇಟಗೊಂಡ ಗೌಡ್ರು ಲಾಟರಿ ತಿಕೀಟ ತರಿಸಿ ಪೂಜಾ ಮಾಡತಾರ. ಸಿದ್ಧಿ ಪುರುಷರ ಕಾಲಿಗೆರಗಿ ವಾಡೇದಾಗ ಹೂಳಿಟ್ಟ ಬದಕ ಹುಡುಕಾಕ ಹಚ್ಚತಾರ. ಅಂಜನಾ ಹಚ್ಚಿದ ಸಿದ್ಧಿ ಬಾಬಾ ಬರು ಹುಣ್ಣಿವಿ ದಿನಾ ಬಾರಾ ಗಂಟೇಕ್ಕ ದೇವರ ಮನಿ ಪೂರ್ವ ದಿಕ್ಕಿಗಿ ಅಗಿ ಅಂತ ಅಪ್ಪಣಿ ಕೊಟ್ಟಿದ್ರು. ಯಾರ ಮ್ಯಾಲೂ ವಿಶ್ವಾಸ ಇಲ್ಲದ ಗೌಡ್ರು ಗೌರಿ ಸಹಾಯದಿಂದ ಅಗ್ಯಾಕ ಸುರು ಮಾಡಿದ್ರು. ಒಬ್ಬೊಬ್ಬರನ್ನ ನೋಡಿ ಬಿಡಬೇಕನ್ನು ಸಿಟ್ಟಿನೊಳಗ ಗೌಡ್ರು ಬೆಳತನಕಾ ತಲಿ ಮುಟಾ ತೆಗ್ಗ ತೆಗದರೂ ಸಂದೂಕದ ಸುದ್ದೀನ ಇಲ್ಲ. ಬ್ಯಾಸತ್ತು ಬಿಡಬೇಕನ್ನುವಾಗ ಹಾರಿ ಝಣ್ ಅಂತು. ಗೌಡ್ರ ಎದೀನೂ ಝಲ್ ಅಂತು. ಹಾಸ ಪಡಿಹಾರಿ ಹಾಕಿ ಎಬ್ಬಸಾಕ ಸುರು ಮಾಡಿದ ಕೂಡಲೆ ವಾಡೇದ ಗ್ವಾಡೆಗಳೆಲ್ಲಾ ನಡಗಾಕ ಸುರು ಮಾಡಿದವು. ಗೌರಿ ಎಚ್ಚರಾ ಮಾಡಿದ್ರೂ ಗೌಡ್ರು ಹುಚ್ಚರಂಗ ಪಡಿ ಎಬ್ಬಿಸಿಯೇಬಿಟ್ಟರು. ಗಡಗಡ ಅಂತ ವಾಡೆಯು ಗೋಡೆಗಳು ಉರುಳಿಧವು. ತಲೆಮುಟ ತೆಗೆದ ತಗ್ಗಿನಲ್ಲಿ ಪಾಳೆಗಾರಿಕೆಯು ಕೊನೆಯು ಕೊಂಡಿ ಕಳಚಿ ಹೂತು ಹೋಗಿತ್ತು. ಸಾಕ್ಷಿಯಾಗಲಿಚ್ಚಿಸಿದ ಗೌರಿ ಇದೆಲ್ಲಿಯು ಉಸಾಬರಿ ಎಂದು ಭಯದಿಂದ ಹೊರಗೆ ಓಡಿದಳು.

ಬಿದ್ದ ಗೋಡೆಯ ಸಂದಿನಿಂದ ಗೌಡತಿ ಹೊರಬಂದಳು. ಜುಮ್ಮು ಜುಮ್ಮು ನಸುಕಿನ ತಂಗಾಳಿಗೆ ಮೈಯೊಡ್ಡಿದಳು, ಹಿತವೆನ್ನಿಸಿ ಮುಂದಣಕ್ಕೆ ಹೊರಳಿದಳು. ಕೆಂಪಗಿನ ಸೂರ್ಯ ತುಂಟಾಟದೊಂದಿಗೆ ಗುಡ್ಡದ ಸಂದಿನಿಂದ ಹೊರಬರಲು ತವಕಿಸುತ್ತಿದ್ದ. ತಂಗಾಳಿಗೆ ಹಾರಿಬಂದ ಕಾಗದ ಕಾಲ ಮೇಲೆ ಬಿದ್ದಿತು. ಮಗನ ಪತ್ರ ಓದತೊಡಗಿದಳು. ಮಾತೋಶ್ರೀಯವರ ಚರಣ ಸನ್ನಿಧಿಗೆ ಮುಂದಿನ ತಿಂಗಳಿನಿಂದ ಮಾಲಕರು ಪಗಾರ ಹಿಡಿಯುತ್ತೀನೆಂದು ಹೇಳಿದ್ದಾರೆ. ಬಂದು ಕರೆದುಕೊಂಡು ಹೋಗುವೆ. ಚುಟುಕಾಗಿ ನಿಮ್ಮ ಮಗ ಅಂತ ಮುಗಿಸಿದ್ದ.

(ಕೃಪೆ – ಆಕಾಶವಾಣಿ)

ನೀಲು *

1

ಅವನ ಅಗಲಿ ದೂರ
ಹೋದ
ನೀಲು ಅವನ
ನೆನಪಿನ ಕೌದಿ ಹೊದ್ದು
ರಾತ್ರಿಯೆಲ್ಲಾ ಕನಸಿದಳು

2

ಅಲ್ಲಿ ಅವನ ಆ ಮಾತು ಕೇಳಿ
ನೀಲು
ಬಾಗಿಲಿಗೆ ನೂರು ನೆನಪುಗಳ
ಹೂವು ತೋರಣ ಕಟ್ಟಿ
ಅವನ ಬರುವಿಕೆಗೆ –
ಕಾತರಿಸಿ ಕಾದು ಕೂತಳು !

3

ಸುತ್ತಿ ಬಳಸಿ
ಕೋಗಿಲೆಯಂತೆ ಹಾಡುಕಟ್ಟುವ
ನೀಲುವಿಗೆ
ಒಮ್ಮೊಮ್ಮೆ ಏಕಾಕಿತನ ಕಾಡಿ
ಸಣ್ಣಗೆ ಬೆವರುವಳು !

4

ನೀಲು ಹಾಡುತ್ತಾಳೆ
ನೂರು ಕನಸಿನ ರಾಗ
ಅದರಲ್ಲಿ ತೊಯ್ಯುತ್ತವೆ;
ಒಂದಿಷ್ಟು
ವಿರಾಗ ತೆಪ್ಪ !

ಈ. ಚಂದ್ರು ತಾಳೀಕಟ್ಟೆ, ತಾಳೀಕಟ್ಟೆ-577 539, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

5

ನೀಲು ಜಾಣ-ಜಾಣೆಯರಲ್ಲಿ
ತೀವ್ರ ಕಾಮನೆಯು
ಕನಸುಗಳನ್ನು ಅರಳಿಸಿದಳು
ಮುಖ್ಯವಾದವು :
ಪ್ರೇಮ ಕಾಮ ಕಾತರ

6

ನೀಲು ಅಂಗಾಂಗಗಳ
ಪುಲಕ
ಜವ್ವನೆಯರಿಗೆಲ್ಲಾ
ಸ್ಫೂರ್ತಿ !

7

ನೀಲು ಬರೆಯುವ
ಕಾವ್ಯಕ್ಕೆ
ಸ್ಫೂರ್ತಿ ಯಾರೆಂದಿರಾ ?
ಗಿಣಿಮೂತಿನ ಮಾವಿನಮರ ತುಂಬೆಗಿಡ
ಹೊಳೆವ ಗರುಕೆ ಲಂಟಾನ ಹೂವುಗಳ
ಕಟುವಾಸನೆ !

8

ತಾವರೆಕೆರೆ ಏರಿಯ ಮೇಲೆ
ನೀಲು
ನಡೆಯುತ್ತ ಬಾಲ್ಯದಲ್ಲಿ
ಸಂಪಿಗೆಯ ಮರದ ನೆರಳಲ್ಲಿ
ಹುಡುಗನೊಬ್ಬನ ತೋಳ ತೆಕ್ಕೆಯಲ್ಲಿ
ಸಿಕ್ಕಿ ನಜ್ಜುಗುಜ್ಜಾದದ್ದು; ಅವಳ
ಜೀವನದ ವಿಚಿತ್ರಗಳಲ್ಲಿ
ಒಂದು – ಪ್ರೇಮಗಾಥೆ !

ನೀಲು ಯಾರು ಎಂದು ಕೇಳಿದಿರಾ ?
ಮಂಡ್ಯದ ಗೌಡ ಸಾರಸ್ವತ
ಕೇರಿಗಳಲ್ಲಿ
ಆಕೆ ನಚ್ಚಗೆ ಹನ್ನೆರಡು ಮೊಳದ ಸೀರೆ
ಉಟ್ಟು –
ಸೀರೆಯು ನಿರಿಗೆಗಳನ್ನು
ಕ್ಷಣ ಕ್ಷಣಕೂ ಬಿಚ್ಚುತ್ತಾ
ತನ್ನ ಮೈ ತುಂಬ ಕನಸುಗಳ
ನೇಯ್ದು –
ಪ್ರಿಯಂಕರನ ತೋಳ ತೆಕ್ಕೆಗೆ
ಕಾತರಿಸಿ ಕುಳಿತವಳೇ–ನೀಲಾಂಜನೆ ನೀಲು !

— ಈ. ಚಂದ್ರ ತಾಳೀಕಟ್ಟೆ

* ಕಳೆದ ಹನ್ನೊಂದು ವರ್ಷದಿಂದ ಲಂಕೇಶ್ ಪತ್ರಿಕೆಯಲ್ಲಿ ಬರೆಯುತ್ತಿರುವ ಲೇಖಕರು

ಬಿರುಕು

ಸೂರಿಂದ ಗಾರೆ
ನೆಲದತನಕ ಮನೆ ಕೀಳುವಂತೆ ಇದ್ದ ಗೆರೆ
ಕೊಚ್ಚಿ ಗಾಯವಾದಂತಿದ್ದ
ಆ ಬಿರುಕಲ್ಲಿ ಬೆರಳ ತುರುಕಿದರೆ
ಜಿನುಗುತ್ತಿತ್ತು ನವುರಾದ ಕಪ್ಪು ದೂಳು.

ರಾತ್ರೋರಾತ್ರಿ ಕಂಡುಬಂದದ್ದಲ್ಲ
ಎಂದಿಂದಲೂ
ಇದ್ದು, ಅಷ್ಟೊಂದು ಸಲ

ರಾಮಚಂದ್ರ ಶರ್ಮ, ನಂ. 222, 'ಪರಾಶರ', 39ನೇ 'ಸಿ' ಕ್ರಾಸ್, 5ನೇ ಬ್ಲಾಕ್, ಜಯನಗರ
ಬೆಂಗಳೂರು-41

ತೊಟ್ಟಿಲ ಹತ್ತಿ ತೊಟ್ಟಿಲಿಳಿದಾಗಲೂ
ಗೋಡೆ ಭಾವಣೆಯನ್ನು
ಹೋಳಾಗಿಸುತ್ತಿದ್ದ
ಒತ್ತಡದ ಕಡೆ
ನಮ್ಮಿಬ್ಬರ ಕಣ್ಣು
ಹರಿಯುವ ಹಾಗೆ ಕೆಳಗಿದ್ದು ಬಿಟ್ಟ ಗೆರೆ.

ಕಾಣದೇಹೋದ ಗೆರೆ
ಕಂಡರೂ, ಮಣ್ಣೊಣಗಿ
ಮುಳುಗಿದ ಬಿರುಕು ಮಳೆ ಬಂದಾಗ
ತಾನೆತಾನಾಗಿ
ಬೇಗ
ಮುಚ್ಚಿ ಮಾಯವಾಗುವ ಭ್ರಾಂತಿ
ಹುಟ್ಟಿಸಿದ್ದ ಗೆರೆ.

ಜೀವಂತವಾದದ್ದು ಎಂಥದೋ ರಾತ್ರಿ
ಹೊತ್ತಲ್ಲಿ ಹೊರಳಾಡಿದಂತೆ ಸದ್ದು
ಕೇಳಿಬಂದದ್ದನ್ನು ನೀನು
ನನಗೆ ಹೇಳಲಿಲ್ಲ.

ನಿದ್ದೆಗಣ್ಣಲ್ಲಿ
ಹೊರಳಿ
ನಾವು ಪರಸ್ಪರ ಕೈ ಚಾಚಿದರೆ
ಇಬ್ಬರನ್ನೂ ನುಂಗಿಬಿಡುವೊಂದು
ಕಂದರದಂತೆ ಬಿರುಕು ಬಾಯಿ ತೆರೆಯುವವರೆಗೆ
ನಾನೂ
ತುಟಿ ಪಿಟಕ್ಕೆನ್ನಲಿಲ್ಲ.

ಮೂಲ : ವಿಕೀ ಫೀವರ್ (Vicki Feaver) ನ
'The Crack'
ರೂಪಾಂತರ : ರಾಮಚಂದ್ರ ಶರ್ಮ

ಗಾಯನ ಗಂಗೆಯ ಋಷಿ - ಶೇಷಾದ್ರಿ ಗವಾಯಿ

— ಶಾಲಿನಿ ಶ್ರೀನಿವಾಸ

1930ರ ಸುಮಾರಿನಲ್ಲಿ ಬೆಂಗಳೂರಿನ ವಾರ್ತಾಪತ್ರಿಕೆಯಲ್ಲಿ ಗದುಗಿನ ಪೂಜ್ಯಶ್ರೀ ಪಂಚಾಕ್ಷರಿ ಗವಾಯಿಗಳು ಹಾಗೂ ಅವರ ಶಿಷ್ಯ ನಾಟಕ ಮಂಡಳಿಯವರ ಹೆಸರು ಪ್ರಕಟವಾಯಿತು. ವಾರ್ತಾಪತ್ರಿಕೆಯನ್ನು ಓದುತ್ತಿದ್ದ ತಿಮ್ಮಮ್ಮನವರ ಕಣ್ಣು ಶೇಷಾದ್ರಿ ಎಂಬ ಹೆಸರಿನ ಮೇಲೆ ನೆಟ್ಟು ಹೋಯಿತು. ಹನ್ನೆರಡು ವರ್ಷಗಳಾಯಿತು, ಸಂಗೀತ ಕಲಿಯುವ ಆಸೆಯಿಂದ ಮನೆ ಬಿಟ್ಟು ಹೋದ ತಮ್ಮ ಪುಟ್ಟ ಮಗ ಶೇಷಾದ್ರಿ ಇವನಾಗಿರಬಹುದೇ ಅನಿಸಿತು. ಅವನೇ ಆಗಿರಲಿ ಎಂದು ಹಾರೈಸಿತು. ಏನು ಮಾಡಿದರೂ ತಾಯಿ ಕರುಳು ಸುಮ್ಮನಿರದಾಯಿತು. ತಳಮಳ ತಡೆಯದೆ ಹಿರಿಯ ಮಗನನ್ನು ಕರೆದು, ಹೇಗಾದರೂ ಮಾಡಿ ಗದುಗಿಗೆ ಹೋಗಿ ಬರಬೇಕೆಂದು ಕಣ್ಣೀರಿಡುತ್ತಾ ಹೇಳಿದಳು.

ತಮ್ಮನನ್ನು ಅರಸುತ್ತಾ ಅಣ್ಣ ಸತ್ಯನಾರಾಯಣ ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಬಂದರು. ಯೋಗಿವರ್ಯ ಶ್ರೀ ಪಂಚಾಕ್ಷರಿ ಗವಾಯಿಗಳ ಆಶ್ರಮವಾಸಿ ಶೇಷಾದ್ರಿ ತನ್ನ ತಮ್ಮನೆಂದು ಗುರುತು ಹಿಡಿದರು. ಶುಕ್ರವಾರ ಕಾಮನಹುಣ್ಣಿಮೆ ದಿನಾಂಕ 21–3–24ರಂದು ರಾಜಾಪುರದ ಶ್ರೀ ವೆಂಕಟಸುಬ್ಬಯ್ಯನವರ ಪತ್ನಿ ಶ್ರೀಮತಿ ತಿಮ್ಮಮ್ಮನವರಿಗೆ ಪುತ್ರೋತ್ಸವವಾಯಿತು. ಹೊರಗೆ ಬಯಲಲ್ಲಿ ಕಾಮದಹನವಾಗುತ್ತಿದೆ, ಮನೆಯೊಳಗೆ ಕಾಮನೆಗಳನ್ನು ಗೆದ್ದ ಸುಪುತ್ರ ಜನಿಸಿದ್ದಾನೆ. ಪುಟ್ಟ ಹುಡುಗ ಶೇಷಾದ್ರಿಗೆ ಯಾವಾಗಲೂ ಸಂಗೀತದ ಹುಚ್ಚು. ಆ ಕಾಲದಲ್ಲಿ ಶಾಸ್ತ್ರೀಯ ಸಂಗೀತ ಹೆಚ್ಚು ಶ್ರೀಮಂತವಾಗಿದ್ದ ರಂಗಭೂಮಿ ಸಹಜವಾಗಿ ಬಾಲಕನ ಗಮನ ಸೆಳೆಯಿತು. ಅವಕಾಶ ಸಿಕ್ಕಿದಾಗಲೆಲ್ಲಾ ತಪ್ಪದೇ ನಾಟಕ ನೋಡುತ್ತಿದ್ದ (ಕೇಳುತ್ತಿದ್ದ) ಹುಡುಗ ಕೊನೆಗೊಂದು ದಿನ

ಶಾಲಿನಿ ಶ್ರೀನಿವಾಸ, ನಂ. 236, 'ಧವಳ', ಸರ್ ಸಿ.ವಿ. ರಾಮನ್ ರಸ್ತೆ,
ರಾಜಮಹಲ್‌ವಿಲಾಸ ಮೊದಲನೇ ಹಂತ, ಬೆಂಗಳೂರು-80

ನಾಟಕ ಕಂಪೆನಿಯವರು ಗಂಟುಮೂಟೆ ಕಟ್ಟಿ ಬೇರೊಂದೂರಿಗೆ ಹೊರಟಾಗ ಅವರನ್ನೇ ಹಿಂಬಾಲಿಸಿದ. ಸಂಗೀತ ಕಲಿಯುವ ಅದಮ್ಯ ಬಯಕೆ ಮನೆ ತೋರಿಸಿತು. ಮಧುರ ಶಾರೀರದ ಸ್ಫುರದ್ರೂಪಿ ಬಾಲಕ ಬಾಲನಟನಾಗಿ ಕನ್ನಡನಾಟಕ ರಂಗಭೂಮಿಯಲ್ಲಿ ಮಿಂಚಿದರು. ಹೆಚ್ಚಾಗಿ ಇವರಿಗೆ ಹೆಣ್ಣು ಹುಡುಗಿಯರ ಪಾತ್ರಗಳೇ ಸಿಗುತ್ತಿದ್ದವಂತೆ. ಆ ನಾಟಕ ಕಂಪೆನಿಯಲ್ಲಿದ್ದ ಸುಪ್ರಸಿದ್ಧ ಶ್ರೀ ಕಲ್ಕೋಟೆ ಚನ್ನಬಸವಯ್ಯನವರು ಇವರಿಗೆ ಹಾರ್ಮೋನಿಯಂ ವಾದನವನ್ನು ಕಲಿಸಿದರು. ಮುಂದೆ ಹೆಚ್ಚಿನ ಸಂಗೀತಾಭ್ಯಾಸಕ್ಕಾಗಿ ಅವರೇ ಶೇಷಾದ್ರಿಯವರನ್ನು ಗದುಗಿನ ಗಾನಯೋಗಿ ಶ್ರೀ ಪಂಚಾಕ್ಷರಿ ಗವಾಯಿಗಳ ವೀರೇಶ್ವರ ಪುಣ್ಯಾಶ್ರಮಕ್ಕೆ ಕರೆತಂದರು. ಶ್ರೀ ಪಂಚಾಕ್ಷರಿ ಗವಾಯಿಗಳು ನಾಟಕ ಮಂಡಳಿ ಮತ್ತು ಧರ್ಮಾರ್ಥ ಸಂಚಾರಿ ಸಂಗೀತ ವಿದ್ಯಾಲಯವನ್ನು ನಡೆಸುತ್ತಿದ್ದರು. ಹೀಗೆ ಏಕಕಾಲದಲ್ಲಿ ಶೇಷಾದ್ರಿಯವರು ವಿದ್ಯಾರ್ಥಿಯಾಗಿಯೂ, ನಟನಾಗಿಯೂ ಪರಿಶ್ರಮಿಸಿದರು.

ನಮ್ಮ ರಾಜ್ಯದ ಆ ಕಾಲದ ಅನೇಕ ಸುಪ್ರಸಿದ್ಧ ನಾಟಕ ಮಂಡಳಿಯಲ್ಲಿ ಹುಂಗನೂರು ಸಿದ್ರಾಮಪ್ಪ ಕಂಪೆನಿ, ಕಲಾ ಸೇವಾ ಮಂಡಳಿ ಮತ್ತು ವೆಂಕಟರೆಡ್ಡಿ ಕಂಪೆನಿ ಹೀಗೆ ಹಲವಾರು ನಾಟಕ ಕಂಪೆನಿಗಳಲ್ಲಿ ನಟನಾಗಿ ದುಡಿದರು. ಹಲವು ಪ್ರಸಿದ್ಧ ಹಿರಿಯ ನಟರಾದ ಬಿ. ಆರ್. ಪಂತುಲು, ಡಿಕ್ಕಿ ಮಾಧವರಾವ್, ಎಂ. ಎಸ್. ಮಾಧವರಾವ್, ಶಂಕರಾಚಾರ್ ಮತ್ತು ಹನುಮಂತಪ್ಪ ಅವರೊಂದಿಗೆ ಸಹಕಲಾವಿದರಾಗಿ ಅಭಿನಯಿಸಿದ ಹೆಮ್ಮೆ ಇವರದು. ಶ್ರೀ ಶೇಷಾದ್ರಿಯವರು ಪಂಡಿತ ಶ್ರೀ ಪಂಚಾಕ್ಷರಿ ಗವಾಯಿ ಮತ್ತು ಡಾ॥ ಪುಟ್ಟರಾಜ ಗವಾಯಿಯವರಲ್ಲಿ ಹತ್ತಾರು ವರ್ಷ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ವಾದನಗಳನ್ನು ಆಳವಾಗಿ ಅಭ್ಯಸಿಸಿ ಕಲೆಯನ್ನು ಕರಗತ ಮಾಡಿಕೊಂಡರು. ಅಖಿಲ ಭಾರತ ಗಂಧರ್ವ ವಿದ್ಯಾಲಯದ ಸಂಗೀತ ಅಲಂಕಾರ ಪದವಿ ಪಡೆದರು (ಎಂ.ಎ.).

ಮನೆ ತೊರೆದು ಹತ್ತು ಹನ್ನೆರಡು ವರ್ಷಗಳಾದ ಪುಟ್ಟ ಹುಡುಗನಿಂದು ಬೆಳೆದು ನಿಂತ ಯುವಕನಾಗಿದ್ದಾನೆ. ಸಹೋದರರು ಪರಸ್ಪರ ಗುರುತು ಹಿಡಿದು ಆನಂದಿಸಿದ್ದಾರೆ. ತನ್ನ ಅನ್ನವನ್ನು ತಾನೇ ಬೇಯಿಸಿಕೊಳ್ಳುತ್ತಾ, ವಾರಾನ್ನ ಮಾಡುತ್ತ ಆಶ್ರಮವಾಸಿ ಸಂಗೀತಪ್ರೇಮಿ ತಮ್ಮನನ್ನು ಗುರುಗಳ ಅಪ್ಪಣೆ ಪಡೆದು ತಾಯಿಯ ದರ್ಶನಕ್ಕಾಗಿ ಅಣ್ಣ ಸತ್ಯನಾರಾಯಣ ಬೆಂಗಳೂರಿಗೆ ಕರೆತಂದಿದ್ದಾರೆ. ಮರಳಿ ಬಂದ ಮಗನನ್ನು ಕಂಡು ತಾಯಿ ಹಿಗ್ಗಿದರು. ಮತ್ತೆಲ್ಲಿ ಈ ಮಗ ಸಂಗೀತವನ್ನರಸುತ್ತ ಮನೆ ತೊರೆದು ಹೊರಟು ಬಿಡುತ್ತಾನೋ ಎಂದು ಹೆದರಿ, ಮಗನನ್ನು ಮದುವೆಗೆ ಒಪ್ಪಿಸಿದರು. 1944ರಲ್ಲಿ ರುಕ್ಮಿಣಿ ಎಂಬ ಕನ್ಯೆಯೊಂದಿಗೆ ಇವರ ಲಗ್ನವಾಯಿತು. ಸಂಗೀತವೇ ಉಸಿರಾಗಿದ್ದ ಇವರಿಗೆ ಸಂಗೀತ ಪಾಠ ಹೇಳುವ ವೃತ್ತಿ ಬಹು ಹಿತವೆನಿಸಿತು. ಕಾಸಿಗಾಗಿಯೋ, ಪ್ರತಿಷ್ಠೆಗಾಗಿಯೋ ಹಾತೊರೆದವರಲ್ಲ. ತನಗೆ, ಹೆಂಡತಿಗೆ ಹರಕು ಬಟ್ಟೆ-ಅರೆ ಹೊಟ್ಟೆ

ಶೂದ್ರ

ಯಾದರೂ ಲೆಕ್ಕಿಸದೇ ಕಾಲುನಡಿಗೆಯಿಂದ ಮನೆಮನೆಗೂ ಸುತ್ತಿ ಸಂಗೀತ ಪಾಠ ಹೇಳಿದರು. ಕರ್ನಾಟಕ ಸಂಗೀತವೇ ಹೆಚ್ಚು ಪ್ರಚಾರವಿದ್ದ ಕಾಲದಲ್ಲಿ ಎರಡು ಗಾಲಿಯ ಸೈಕಲ್ಲಿನಲ್ಲಿ ಸಂಚರಿಸುತ್ತಾ ಬೆಂಗಳೂರು ಭಾಗದಲ್ಲೆಲ್ಲಾ ಹಿಂದೂಸ್ತಾನಿ ಸಂಗೀತ ಪ್ರಚಾರ ಮಾಡಿದರು. ಹೀಗೆ ಅವರು ಸಂಗೀತ ಪ್ರಪಂಚಕ್ಕೆ ಸಲ್ಲಿಸಿದ ಸೇವೆ ಅಮೋಘ, ಅನುಪಮ. ಇಂದಿಗೂ ಅವರು ತುಳಿದ ಹಾದಿಯ ನೆನಪು ಮಾಡುತ್ತ ಅವರ ಪುಟ್ಟ ಮನೆಯ ಮೂಲೆಯಲ್ಲಿ ಹಳತಾದ ಸೈಕಲ್ಲೊಂದಿದೆ. ಆ ಗುರುಗಳ ಆಶೀರ್ವಾದ ಪಡೆದು, 1944ರಲ್ಲಿ ಉಭಯ ಗಾಯನಾಚಾರ್ಯ ಪಂಡಿತ ಪಂಚಾಕ್ಷರಿ ಗವಾಯಿಗಳ ಕೃಪಾಪೋಷಿತ ಶ್ರೀ ಅರವಿಂದ ಸಂಗೀತ ವಿದ್ಯಾಲಯವನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸಿದರು. ಈವರೆಗೂ ಸಾವಿರಾರು ವಿದ್ಯಾರ್ಥಿಗಳನ್ನು ತಯಾರುಗೊಳಿಸಿ ಆ ಮೂಲಕ ಹಿಂದೂಸ್ತಾನಿ ಸಂಗೀತ ಕರ್ನಾಟಕದಲ್ಲಿ ಗಟ್ಟಿಯಾಗಿ ನೆಲೆಯೂರುವಂತೆ ಮಾಡಿದರು. ಬೆಂಗಳೂರಿನ ಬಸವ ಭವನ ವಿದ್ಯಾಲಯದ ಸಂಗೀತ ವಿಭಾಗದ ಪ್ರಾಧ್ಯಾಪಕರಾಗಿ ಇಂದಿಗೂ ಸಂಗೀತ ಸೇವೆ ಮಾಡುತ್ತಿರುವ ವಿಷಯ ಸರ್ವಜನವಿಧಿತ. ಶ್ರೀ ಗವಾಯಿಗಳು 1950ರಿಂದ ಉರಗಾಚಲ ಎಂಬ ಅಂಕಿತದಲ್ಲಿ ನೂರಾರು ಗೇಯ ಕೃತಿಗಳನ್ನು ರಚಿಸಿದ್ದಾರೆ. ಧಾರ್ಮಿಕ, ಆಧ್ಯಾತ್ಮಿಕ ನೀತಿ ತತ್ವಗಳನ್ನು ಎತ್ತಿ ಹಿಡಿದ ಈ ಕೃತಿಗಳು ಅತ್ಯಮೂಲ್ಯ. ಸಂಗೀತ ಕಲಾವಿಂಬ (ಎರಡು ಭಾಗಗಳು), ತತ್ವಗಾನ ರತ್ನಾಕರ ಈ ಕೃತಿಗಳು ಸಂಗೀತ ಪ್ರಪಂಚಕ್ಕೆ ಅತ್ಯುಪಕಾರಿಯಾದ ಗ್ರಂಥಗಳಾಗಿವೆ. ಇಷ್ಟೆಲ್ಲ ದುಡಿಮೆ ಮತ್ತು ಆರ್ಥಿಕ ಬವಣೆಗಳ ನಡುವೆ ಸಂಗೀತಕ್ಕೆ ವಿಶೇಷವಾಗಿ ಮೀಸಲಾದ ಪತ್ರಿಕೆಯೊಂದನ್ನು ಪ್ರಕಟಮಾಡಬೇಕೆಂಬ ಬಯಕೆ ಗವಾಯಿಗಳಿಗೆ ತೀವ್ರವಾಯಿತಂತೆ. ಹೀಗೆ ಗಾಯನಗಂಗಾ ಜನ್ಮ ತಾಳಿತು. 1958ರಲ್ಲಿ ಶ್ರೀ ಅರವಿಂದ ಸಂಗೀತ ವಿದ್ಯಾಲಯದ ಪುಟ್ಟ ಮುದ್ರಣಾಲಯ ಇದಕ್ಕೆಂದೇ ಸ್ಥಾಪಿತವಾಯಿತು. ಗಾಯನಗಂಗಾ ಎಂಬ ಏಕೈಕ ಸಂಗೀತ ಮಾಸಪತ್ರಿಕೆಯನ್ನು ತಮ್ಮ ಸಂಪಾದಕತ್ವದಲ್ಲಿ ಕಳೆದ 33 ವರ್ಷಗಳಿಂದ ಒಮ್ಮೆಯಾದರೂ ನಿಲ್ಲದಂತೆ ಏಕಪ್ರಕಾರವಾಗಿ ನಡೆಸುತ್ತಿರುವುದು ಅವರ ನಿಸ್ವಾರ್ಥ ಸೇವೆಯ ಸಾಕ್ಷಿಯಾಗಿದೆ. ಹಿಂದೂಸ್ತಾನಿ ಮತ್ತು ಕರ್ನಾಟಕಿ ಸಂಗೀತದ ಕೃತಿಗಳನ್ನು ಅದಕ್ಕೆ ಸಂಬಂಧಪಟ್ಟ ಥಿಯರಿಗಳನ್ನು ಈ ಪತ್ರಿಕೆ ಒಳಗೊಂಡಿದೆ; ಮತ್ತು ಅನೇಕ ವಿದ್ಯಾರ್ಥಿಗಳಿಗೆ ಕೈಪಿಡಿಯಾಗಿ ಸಹಾಯಕವಾಗಿದೆ. ಶ್ರೀ ಗವಾಯಿಗಳು ಉತ್ತಮ ಸೋಲೋ ಹಾರ್ಮೋನಿಯಂ ವಾದಕರು.

ಆಡು ಮುಟ್ಟದ ಸೊಪ್ಪಿಲ್ಲ ಎಂಬ ನಾಣ್ಣುಡಿಯಂತೆ ಇವರಿಗೆ ತಿಳಿಯದ ವಾದ್ಯ ವಾದನಗಳಿಲ್ಲ. ಸಿತಾರ, ಕೊಳಲು, ತಬಲ, ವೀಣೆ ಹೀಗೆ ಎಲ್ಲಾ ವಾದ್ಯ ವಾದನ ಚತುರರು. ಭಾರತ ದೇಶದ ಅತಿ ಹಿರಿಯ ಕಲಾವಿದರಾದ ಸರ್ವಶ್ರೀ ಡಾ॥ ಮಲ್ಲಿಕಾರ್ಜುನ ಮನ್ಸೂರ್, ಪಂಡಿತ ಬಸವರಾಜ ರಾಜಗುರು, ಡಾ॥ ಭೀಮಸೇನ ಜೋಶಿ,

ಪರವಿನ್ ಸುಲ್ತಾನ್, ಶ್ರೀಮತಿ ಗಂಗೂಬಾಯಿ ಹಾನಗಲ್ ಮುಂತಾದವರಿಗೆ ಹಾರ್ಮೋನಿಯಂ ಸಾಥಿ ಮಾಡಿ ಪ್ರಖ್ಯಾತರಾಗಿದ್ದಾರೆ. ಶ್ರೀ ಗವಾಯಿಗಳು ಕರ್ನಾಟಕ ಸರ್ಕಾರದ ಸಂಗೀತ ಪರೀಕ್ಷಾ ಮಂಡಳಿಯ ಹಾಗೂ ಸಂಗೀತ ನೃತ್ಯ ಅಕಾಡೆಮಿ ಸದಸ್ಯರಾಗಿ ಮತ್ತು ವಿದ್ವತ್ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ ದಕ್ಷತೆಯ ಸೇವೆ ಸಲ್ಲಿಸಿದ್ದಾರೆ. ಶ್ರೀ ಗವಾಯಿಯವರ ಪರಿಚಯವಿಲ್ಲದವರೇ ವಿರಳ. ಬಿಳಿದಾದ ಗಡ್ಡ, ಹಣೆಯಲ್ಲಿ ಶ್ರೀಗಂಧ ಕುಂಕುಮ ತಿಲಕ. ಬಾಚಿ ಎತ್ತಿಕಟ್ಟಿದ ಮುಂಡಿ. ಮೈ ಮರೆತು ಹಾರ್ಮೋನಿಯಂ ಬಾರಿಸುತ್ತ ಕೂತ ಅವರನ್ನು ಕಂಡಾಗ, ಗಾನಋಷಿಯ ದರ್ಶನವಾಗುತ್ತದೆ. ಗೀತಾಚಾರ್ಯರಂತೆ ಕರ್ಮವನ್ನೇ ನಂಬಿದ ಕರ್ಮಯೋಗಿ. ಸೂರ್ಯ ಚಂದ್ರರಂತೆ, ಗಡಿಯಾರದ ಮುಳ್ಳುಗಳಂತೆ ಇವರು ಕರ್ತವ್ಯನಿಷ್ಠರು. ನುಡಿದಂತೆ ನಡೆವವರು. ಸರಳ, ನಿಗರ್ವಿ, ಮಿತಭಾಷಿ, ಸ್ನೇಹಮಯಿ, ತೇಜಸ್ವಿ. ಒಮ್ಮೆ ನೋಡಿದರೆ ಸಾಕು ತನ್ನಷ್ಟಕ್ಕೆ ಕೈಮುಗಿಸಿಕೊಳ್ಳುವ ವ್ಯಕ್ತಿತ್ವ. ತಮ್ಮ ಗುರುಗಳಾದ ಪಂಚಾಕ್ಷರಿ ಗವಾಯಿಗಳ ಬಗ್ಗೆ ಅಪಾರ ಅಭಿಮಾನ. ಇಂದಿಗೂ ಅವರ ಆದರ್ಶ ವ್ಯಕ್ತಿತ್ವವನ್ನು ನೆನೆನೆನೆದು ಆರ್ದ್ರರಾಗುತ್ತಾರೆ. ಬಡ ಮಕ್ಕಳಿಗೆ ಅವರು ತೋರುತ್ತಿದ್ದ ಪುತ್ರವಾತ್ಸಲ್ಯ. ವರ್ಷಕ್ಕೊಮ್ಮೆ ಅವರು ನಡೆಸುತ್ತಿದ್ದ ಆರಾಧನಾ ಮಹೋತ್ಸವದಲ್ಲಿ – ಆ ದಿನ ಗೋಧಿಯ ಸಿಹಿ ಹುಗ್ಗಿ, ಮಕ್ಕಳನ್ನು ಸಾಲಾಗಿ ಕೂರಿಸಿ ಗುರುಗಳೇ ಸ್ವಹಸ್ತದಿಂದ ಸೌಟಿನಲ್ಲಿ ಧಾರಾಳವಾಗಿ ಬಡಿಸುತ್ತಿದ್ದ ತುಪ್ಪ, ಅದಕ್ಕೂ ಮೀರಿದ ಅವರ ಸಿಹಿ ಮಾತು ಮತ್ತೆ ಮತ್ತೆ ಕೃತಜ್ಞತೆಯಿಂದ ನೆನೆಯುತ್ತಾರೆ. ಒಮ್ಮೆಯಾದರೂ ತಾನು ಮನೆ ಬಿಟ್ಟು ಬಂದು ಅನಾಥನಾದೆನೆಂಬ ಭಾವನೆ ಬರದಂತೆ ಗುರುಗಳು ಇವರನ್ನು ನಡೆಸಿಕೊಂಡರಂತೆ. ಒಮ್ಮೆ ಚಳಿ ಜ್ವರದಿಂದ ನರಳುತ್ತ ಮಲಗಿದ್ದ ತಮ್ಮ ಹಾಸಿಗೆಯ ಬಳಿ ಬಂದು ಕೂತು ಚೆಂಬಿನ ತುಂಬಾ ಬಿಸಿ ಕಾಫಿ ಕುಡಿಸಿದ್ದನ್ನು, ಮರುದಿನವೇ ಜ್ವರ ಬಿಟ್ಟು ತಾವು ಓಡಾಡಿದ್ದನ್ನು ನೆನೆದು ನಗುತ್ತಾರೆ. ಶ್ರೀ ಶೇಷಾದ್ರಿಯವರಿಗೆ ಅಕಾಡೆಮಿಯ ಪ್ರಶಸ್ತಿ ಸಿಕ್ಕಿದೆ. ಹಾಗೆಂದು ರಾಜ್ಯಪ್ರಶಸ್ತಿ ಇನ್ನೂ ಸಿಕ್ಕಿಲ್ಲ. ಕಳೆದ 45 ವರ್ಷಗಳಿಂದ ಸತತವಾಗಿ ಸಂಗೀತ ಕ್ಷೇತ್ರದಲ್ಲಿ ಹಣ, ಕೀರ್ತಿ, ಪ್ರಶಸ್ತಿಗಳ ನಿರೀಕ್ಷೆಯಿಲ್ಲದೇ ದುಡಿಯುತ್ತಿದ್ದಾರೆ. ಕಲಾವಿದರನ್ನು ಗುರುತಿಸಿ ಗೌರವಿಸುವುದು ನಮ್ಮ ಸಂಸ್ಕೃತಿ. ಗವಾಯಿಗಳ ಹೆಸರು ಪ್ರಸಿದ್ಧವಾಗಿದೆ. ವಿದ್ಯಾರ್ಥಿಗಳ ಸಂಖ್ಯೆ ಅಪಾರ. ಹಾಗೆಂದು ಇವರ ಸ್ಥಿತಿ ಗತಿಗಳಲ್ಲಿ ಹೆಚ್ಚಿನ ಮಾರ್ಪಾಡೇನೂ ಆಗಿಲ್ಲ. ಹಿಂದಿನಂತೆ ಈ ಇಳಿ ವಯಸ್ಸಿನಲ್ಲೂ ಹಗಲಿರುಳು ದುಡಿಯುತ್ತಾರೆ. ಒಮ್ಮೊಮ್ಮೆ ನಾನು ಮಾಸ್ತರರನ್ನು ಕೇಳುತ್ತೇನೆ, ಸ್ವಲ್ಪ ವಿಶ್ರಾಂತಿ ಮಾಡಬಾರದೆ ಎಂದು. ಅವರು ನುಡಿಯುತ್ತಾರೆ, ಕರ್ಮ ಮಾಡುತ್ತ ಮಾಡುತ್ತ ಮತ್ತೊಂದು ದಿನ ಹಕ್ಕಿಯಂತೆ ಹಾರಿ ಬಿಡಬೇಕು.

ಪುಸ್ತಕ ವಿಮರ್ಶೆ

ದಿ ನಾನ್-ರೆಸಿಡೆಂಟ್ ಇಂಡಿಯನ್ : ಚಂದ್ರಶೇಖರ್ ಶಾಸ್ತ್ರಿ (ಪ್ಯಾಂಥರ್ ಪಬ್ಲಿಷರ್ಸ್, ಬೆಂಗಳೂರು).



ಬಂಗಾರದ ನಾಡನ್ನು ಅರಸಿ ಹೋಗುವ ಭಾರತೀಯರ ಭೌತಿಕ ಹಾಗೂ ಮಾನಸಿಕ ಲೋಕಗಳನ್ನು ಈ ಪುಸ್ತಕ ಮಾರ್ಮಿಕವಾಗಿ ಚರ್ಚಿಸುತ್ತದೆ. ಅದರಲ್ಲೂ ಯುರೋಪು ಮತ್ತು ಅಮೆರಿಕಾಗಳಿಗೆ ಹುಚ್ಚು ಹಿಡಿದಂತೆ ಧಾವಿಸುವ ಭಾರತೀಯ ವರ್ಗಗಳು ಅಗತ್ಯವಾಗಿ ಓದಬೇಕಾದ ಪುಸ್ತಕ ಇದು. ಇದಕ್ಕೆ ಮುಖ್ಯ ಕಾರಣ ಎಂದರೆ, ಪಶ್ಚಿಮಕ್ಕೆ ಹೋಗುವಭಾರತೀಯರಿಗೆಸ್ವದೇಶದ ಬಗ್ಗೆ ವಿಚಿತ್ರವಾದ ಹತಾಶೆ ಮತ್ತು ದ್ವೇಷ ಇರುತ್ತದೆ. ಇಲ್ಲಿ ಜಾತಿ, ಭ್ರಷ್ಟಾಚಾರ, ಕೆಟ್ಟ ಪುಢಾರಿತನಗಳಿಂದಾಗಿ ಪ್ರತಿಭೆಗೆ ಬೆಲೆಯೇ ಇಲ್ಲ ಎಂಬುದು ಅವರ ವಾದ. ಈ ಹತಾಶೆಗೆ ಸಾಕಷ್ಟು ಸಮರ್ಥನೆಯೂ ಇದೆ ಎಂಬ ಮಾತು ನಿಜ. ಆದರೆ, ತಕರಾರು ಇರುವುದು ಅವರು ಪಶ್ಚಿಮದ ಬಗ್ಗೆ ಇಟ್ಟುಕೊಂಡಿರುವ ಭ್ರಮೆಗಳ ಬಗ್ಗೆ, ನೀಡುವ ವರ್ಣರಂಜಿತ ಚಿತ್ರದ ಬಗ್ಗೆ. ಸ್ವತಃ ಉನ್ನತ ವ್ಯಾಸಂಗಕ್ಕಾಗಿ ವಿದೇಶದಲ್ಲಿದ್ದ ಶಾಸ್ತ್ರಿಯವರು, ಖಾಸಗಿ ಉದ್ಯಮಗಳಲ್ಲಿ ಉನ್ನತ ಸ್ಥಾನಗಳಲ್ಲಿದ್ದ ಲೇಖಕರು ತುಂಬ ಸೂಕ್ಷ್ಮ ವ್ಯಂಗ್ಯದಿಂದ ಸತ್ಯವನ್ನು ಬಿಡಿಸಿ ಹೇಳುತ್ತಾ ಹೋಗುತ್ತಾರೆ. ಅವರ ಪ್ರಕಾರ ಭಾರತೀಯರಿಗೆ ಪಶ್ಚಿಮದ ವೃತ್ತಿಪರ ಜಗತ್ತಿನಲ್ಲಿ ಒಂದು ಘಟ್ಟದ ತನಕ ಮಾತ್ರ ಬೆಳೆಯಲು ಸಾಧ್ಯ. ಆಮೇಲೆ ವರ್ಣೀಯ ತಾರತಮ್ಯದ ಕಾರಣಕ್ಕಾಗಿ ಉನ್ನತ ವೃತ್ತಿಪರ ಬೆಳವಣಿಗೆಯ ಬಾಗಿಲು ತಾವಾಗಿಯೇ ಮುಚ್ಚಿಕೊಳ್ಳುತ್ತವೆ. ಮುಕ್ತವಾದ, ಮೆರಿಟ್‌ಅನ್ನು ಮಾತ್ರ ಬೆಂಬಲಿಸುವ ಪಶ್ಚಿಮದ ಬಗೆಗೆ ಇರುವ ಮಿಥ್‌ಗಳೆಲ್ಲ ಹೇಗೆ ಬೋಗಸ್ ಎಂಬುದನ್ನು ಅನೇಕ ಸಾಕ್ಷ್ಯಗಳ ಮೂಲಕ ವಿಶ್ಲೇಷಿಸುತ್ತಾರೆ. ಆ ಸ್ವರ್ಗ ವರ್ಣೀಯರಿಗಲ್ಲ.

ಆ ದೃಷ್ಟಿಯಿಂದ ಕೊಲ್ಲಿ ರಾಷ್ಟ್ರಗಳಿಗೆ ಹೋಗುವ ಭಾರತೀಯರು ಹೆಚ್ಚು ಸರಳ ವಾದ ಜನ. ಮತ್ತು ತಮ್ಮ ಬಗೆಗಾಗಲೀ, ಹೋಗುತ್ತಿರುವ ಸಮಾಜದ ಬಗೆಗಾಗಲೀ ಹೆಚ್ಚು ಭ್ರಮೆಗಳನ್ನು ಇಟ್ಟುಕೊಳ್ಳದ ಜನ. ಕುತೂಹಲದ ಸಂಗತಿ ಎಂದರೆ, ಭಾರತದ ಆರ್ಥಿಕತೆಗೆ ಹೆಚ್ಚು ನಿರ್ಣಾಯಕವಾದ ರೀತಿಯಲ್ಲಿ ಬೆಂಬಲ ಕೊಟ್ಟವರು ಈ ರೀತಿಯ ಜನರೇ. ಕೊಲ್ಲಿಯ ಬಡಗಿಗಳು, ಅಡಿಗೆಯವರು, ಎಲೆಕ್ಟ್ರಿಶಿಯನ್‌ಗಳು, ಮೇಸ್ತ್ರಿಗಳು ಮುಂತಾದವರೇ ಈ ದೃಷ್ಟಿಯಿಂದ ಭಾರತಕ್ಕೆ ಹೆಚ್ಚು ಉಪಯುಕ್ತರು. ಅತ್ಯಂತ ಶ್ರೀಮಂತ ಅಲ್ಪಸಂಖ್ಯಾತರಾಗಿರುವ ಪಶ್ಚಿಮದ ಭಾರತೀಯರು ತಮ್ಮ ಮೂಲದೇಶಕ್ಕೆ ದೊಡ್ಡ ರೀತಿಯಲ್ಲಿ ಸಹಾಯ ಮಾಡುತ್ತಾರೆ ಎಂಬ ಭ್ರಮೆಯಿಂದ ಮುಂದುವರಿಯು ತ್ತಿರುವ ನಮ್ಮ ಈಗಿನ ಯೋಜನಾತಜ್ಞರ ಉತ್ಸಾಹಕ್ಕೆ ಈ ಪುಸ್ತಕ ಅನೇಕ ರೀತಿಗಳಿಂದ ತಣ್ಣೀರೆರಚುತ್ತದೆ. ಇವರನ್ನು ನಂಬಿದರೆ ಕೆಡುವುದು ಗ್ಯಾರಂಟಿ ಎಂಬ ಸಂದೇಹ ಇಡೀ ಪುಸ್ತಕದಲ್ಲಿ ಉದ್ದಕ್ಕೂ ಹರಡಿದೆ. ಆದರೆ, ಈ ಪುಸ್ತಕದಲ್ಲಿ ಅನಿವಾಸಿ ಭಾರತೀಯರ ಆರ್ಥಿಕ ಪಾತ್ರದ ಬಗ್ಗೆ ಇನ್ನಷ್ಟು ಸಮಗ್ರ ವಿಶ್ಲೇಷಣೆ ನಿರೀಕ್ಷಿಸಿದವರಿಗೆ ಈ ಕೃತಿ ಅಷ್ಟು ತೃಪ್ತಿ ಉಂಟುಮಾಡುವುದಿಲ್ಲ.

ತನ್ನ ಮೂಲ ಚೌಕಟ್ಟಿನ ದೃಷ್ಟಿಯಿಂದ ಈ ಪುಸ್ತಕ ಹೆಚ್ಚು ಮಹತ್ವಾಕಾಂಕ್ಷೆ ಯನ್ನು ಹೊಂದಿರುವಂಥದು. ಈ ಪುಸ್ತಕದ ಕೆಲವು ಹೃದಯಸ್ಪರ್ಶಿ ಭಾಗಗಳಿರುವುದು ಅನಿವಾಸಿ ಭಾರತೀಯರ ಮಾನಸಿಕ ಹಾಗೂ ಭಾವುಕ ಜಗತ್ತನ್ನು ಪರಿಚಯ ಮಾಡಿ ಕೊಡುವ ಪ್ರಯತ್ನದಲ್ಲಿ. ಅನೇಕ ಸೃಜನಶೀಲ ಲೇಖಕರ ಕಥೆ-ಕವನಗಳನ್ನು ಬಳಸಿ ಕೊಂಡು ಶಾಸ್ತ್ರಿ ಈ ಕೆಲಸ ಮಾಡುತ್ತಾರೆ ಎನ್ನುವುದು ಇದರ ವಿಶೇಷ. ಯಶಸ್ಸಿನ ಮಾಯಾಮೃಗ ಹತ್ತಿದ ಭಾರತೀಯರು ಆತ್ಮಮರುಕ ಮತ್ತು ಆತ್ಮವಂಚನೆಗಳಲ್ಲಿ ಮುಳುಗಿ ಹೋಗುವ ಪ್ರಕ್ರಿಯೆಗಳನ್ನು ಈ ಪುಸ್ತಕ ಹೇಳುತ್ತದೆ. ಉಳಿದ ಕಡೆಗಳಲ್ಲಿ ನಿರೀಕ್ಷಿತ ಅಸಹನೆ ತೋರಿಸುವ ಲೇಖಕರು ಇಂಥಲ್ಲಿ ಹೆಚ್ಚು ಮಾನವೀಯವಾದ ಸ್ಪಂದನದ ಗುಣ ತೋರುತ್ತಾರೆ.

ಈ ಕೃತಿಯ ಇನ್ನೊಂದು ವಿಶೇಷ ಗುಣ ಎಂದರೆ ಸಲ್ಮಾನ್ ರಶ್ದಿಯನ್ನು ಒಬ್ಬ ಅನಿವಾಸಿ ಪ್ರತಿಭೆ ಎಂದು ನೋಡಿ, ಆತನ ಸೃಜನಶೀಲತೆಯ ಸಮಸ್ಯೆಗಳನ್ನು ಆ ನಿಟ್ಟಿ ನಲ್ಲೆ ನೋಡಿರುವುದು ಹೊಸದು. ರಶ್ದಿ ಕೃತಿಗಳಲ್ಲಿ ಆ ರೀತಿಯ ನೆಲೆಗಳು ಇವೆ ಯಾದರೂ ಅದನ್ನು ಇಷ್ಟು ನಿರ್ದಿಷ್ಟವಾಗಿ ಗಮನಿಸಿದವರು ಕಡಿಮೆ.

ಒಟ್ಟಾರೆಯಾಗಿ ಈ ಪುಸ್ತಕದ ಪ್ರಮುಖ ಸಮಸ್ಯೆ ಎಂದರೆ ಸಮಾಜಶಾಸ್ತ್ರಗಳ ಮತ್ತು ಕಲೆಗಳಿಂದ ದೊರಕುವ ಮಾಹಿತಿಗಳು ಅಷ್ಟು ಉನ್ನತಮಟ್ಟದ ಸಾಮರಸ್ಯ ಸಾಧಿಸದೇ ಇರುವುದು. ಇನ್ನಷ್ಟು ಆಳವಾದ ಮೇಳ ಮೂಡಬೇಕಾಗಿತ್ತು ಎಂದು ತೀವ್ರವಾಗಿ ಅನ್ನಿಸುತ್ತದೆ. ಇಷ್ಟಾದರೂ, ಅನಿವಾಸಿ ಭಾರತೀಯರಂಥ ತುಂಬ ಕುತೂ ಹಲಕಾರಿ ಮತ್ತು ಸಂಕೀರ್ಣ ಕ್ಷೇತ್ರದಲ್ಲಿ ಪ್ರಬಂಧ ಪುಸ್ತಕ ತಂದ ಪ್ರಕಾಶಕ ಮತ್ತು ಲೇಖಕರು ಅಭಿನಂದನಾರ್ಹರು.

— ಡಿ. ಆರ್. ನಾಗರಾಜ್

 ಕನಸಿಗೊಂದು ಕಣ್ಣು

ಫಾತಿಮಾ

"ಹೆಂಡತಿ ಗಂಡನ ಹಡೆದು ತೊಟ್ಟಿಲಗಟ್ಟಿ
ಹಾಡಿ ಹರಸಿ ಮೈ ಮರೆದಾಳು
ಪುರುಷರತ್ನವೆಂಬ ಪುತ್ರ ಜನಿಸಲಾಗಿ
ಕಂಡವರ್ಯೆವರು ಕಂಡು ಬೆರಗಾದರು"

— ಅಲ್ಲಮಪ್ರಭು

ಬೆಳಿಗ್ಗೆ ಒಂಬತ್ತೂವರೆಯಾಗಿತ್ತು. ಊರಿಗೆ ಹೋಗೋಣವೆಂದು ಹೆಂಡತಿ ಮಕ್ಕಳೊಂದಿಗೆ ಬಸ್‌ಸ್ಟ್ಯಾಂಡಿನಲ್ಲಿ ನಿಂತಿದ್ದೆ. ಸಂಜೆ ಮಳೆಯನ್ನು ಗಟ್ಟಿಗೊಳಿಸುವ ಬಿಸಿಲು ತೀವ್ರವಾಗಿತ್ತು. ಕನಸಿಗೊಂದು ಕಣ್ಣಲ್ಲಿ ಮತ್ತೆ ಮತ್ತೆ ಪ್ರಸ್ತಾಪಿಸಿರುವ ರಾಷ್ಟ್ರೀಯ ಹೆದ್ದಾರಿ. ದೈತ್ಯರ ರೀತಿಯಲ್ಲಿ ಓಡಾಡುವ ವಾಹನಗಳು. ನಮ್ಮಂತೆ ಬಸ್ಸಿಗಾಗಿ ಕಾಯುತ್ತಿದ್ದ ನಾನಾ ರೀತಿಯ ಜನ. ಮುದುಕಿಯೊಬ್ಬಳು ತನಗೆ ಬೇಕಾದ ಬಸ್ಸು ಬರುತ್ತದಾ ? ಎಂದು ಕೇಳಿದಳು. ಅದು ಬರುವುದು ಬಿಡುವುದು ನನ್ನ ಕೈಯಲ್ಲಿಲ್ಲದಿದ್ದರೂ; ಬರುತ್ತದೆ ಎಂದೆ. ಸಮಾಧಾನದಿಂದ ಹೋಗಿ ಕೂತಳು. ನೀವೂ ಆ ಕಡೆಯೇ ಹೊರಟಿದ್ದೀರಾ ? ಎಂದು ಕೇಳಿದಳು. ಇಲ್ಲವೆಂದು ಸುಮ್ಮನಾದೆ.

ಆಕೆ ಸುಮಾರು ಅರವತ್ತೈದು ವರ್ಷದ ಮುದುಕಿ. ಬದುಕಿನಲ್ಲಿ ಹೋರಾಡಿ ಗಟ್ಟಿಯಾಗಿದ್ದವಳು. ವಕ್ರವಕ್ರವಾಗಿ ಸುತ್ತಿಕೊಂಡ ಸೀರೆ. ಅದರ ಮೇಲೆ ಷರ್ಟಿನಾಕಾರದ ಸ್ವಲ್ಪ ಉದ್ದನೆಯದನ್ನು ಧರಿಸಿದ್ದಳು. ಹಳೆ ತಲೆಮಾರಿನ ಮುಸ್ಲಿಂ ಮುದುಕಿಯರು ಧರಿಸುವ ಬಟ್ಟೆ. ಎಣ್ಣೆ ಕಾಣದ ಕೂದಲು. ಆ ವಯಸ್ಸಿನಲ್ಲಿಯೂ ಇಲಿ ಬಾಲದಂತೆ ನೇತಾಡುತ್ತಿದ್ದ ಜಡೆ. ಮುದುಕಿಯ ವ್ಯಕ್ತಿತ್ವ ಆಕರ್ಷಕವಾಗಿ

ಕಂಡಿತು. ಸ್ವಲ್ಪ ಹತ್ತಿರ ಹೋಗಿ ಹೆಸರು ಕೇಳಿದೆ. ಫಾತಿಮಾ ಎಂದಳು. ಎಲ್ಲಿಗೆ ಹೋಗುತ್ತಿರುವೆ ಎಂದಾಗ; ಮಗಳ ಮನೆಗೆ ಹೋಗುತ್ತಿರುವೆ. ಗಂಡ ತುಂಬ ಗಲಾಟೆ ಮಾಡುತ್ತಾನಂತೆ. ಮುಂಡೇಮಕ್ಕಳು ನಾಲ್ಕೈದು ಮಂದಿ ಹೆಂಡತಿಯರನ್ನು ಕಟ್ಟಿ ಕೊಂಡರೂ ಸುಮ್ಮನೆ ಬಿದ್ದಿರೋದಿಲ್ಲ, ಎಂದು ಸಿಟ್ಟಿನಿಂದ ಒಂದಷ್ಟು ಬೈದಳು. ಕೊನೆಗೆ ಏನು ಮಾಡೋದು ಅವಳು ಮಾಡಿದ ಕರ್ಮ ಎಂದಳು. ಫಾತಿಮಾ ನಿನ್ನ ಗಂಡ ಏನು ಮಾಡ್ತಾನೆ ಎಂದೆ. ಅವರು ಮಾರ್ಕೆಟ್ಟಿನಲ್ಲಿ ಹಣ್ಣು ಮಾರ್ತಾರೆ ಎಂದಳು. ಆತ ಎಷ್ಟು ಮದುವೆಯಾಗಿದ್ದಾನೆ? ಎಂದೆ. ಆಗವ್ನೆ ಮೂರನ್ನು. ಆದರೆ ಇಬ್ಬರು ಬಾಳಲಾರದೆ ಓಡೋದುವು. ಈಗ ನನ್ನ ಹತ್ತಿರ ಬಿದ್ದವ್ವನೆ ಒಂಬತ್ತು ಮಕ್ಕಳನ್ನು ಹುಟ್ಟಿಸಿ ಎಂದಳು. ಒಂಬತ್ತು ಮಕ್ಕಳನ್ನು ಹುಟ್ಟಿಸಿದ ಎಂಬ ಧ್ವನಿಯಲ್ಲಿ ತಾತ್ಸಾರ ವಿರಲಿಲ್ಲ. ಹಾಗೆ ಹೇಳುವಾಗ ನಾಚಿಕೊಂಡಳು ಮುದುಕಿ. ನಗು ತಡೆಯಲಾಗದೆ ನನಗೂ ಹನ್ನೆರಡು ಜನ ಮಕ್ಕಳಿದ್ದಾರೆ ಎಂದೆ. ಮುದುಕಿ ಜೋರಾಗಿ ನಕ್ಕಳು. ಅಕ್ಕ ಪಕ್ಕದ ಹೆಂಗಸರು ನನ್ನ ದೇಹದ ಸ್ವರೂಪವನ್ನು ತುಲನೆ ಮಾಡತೊಡಗಿದರು. ನನ್ನ ಮಗಳು ನಮ್ಮಪ್ಪ ಚೋಡ್ತಾ ಇದ್ದಾರೆ ಎಂದಳು. ನನ್ನ ಹೆಂಡತಿಯನ್ನು ತೋರಿಸಿ ಇವಳು ಅವರಪ್ಪನಿಗೆ ಹದಿನಾರನೆಯವಳು ಎಂದೆ. ಫಾತಿಮಾ ಕುತೂಹಲದಿಂದ ಒಂದೇ ಸಮನೆ ನಿಜವಾ ಎನ್ನುವ ರೀತಿಯಲ್ಲಿ ನೋಡುತ್ತಿದ್ದಳು.

ಇದ್ದಕ್ಕಿದ್ದಂತೆ ಎದ್ದ ಮುದುಕಿ ಪಕ್ಕದಲ್ಲಿದ್ದ ಡಬ್ಬಾ ಅಂಗಡಿಗೆ ಹೋದಳು. ಏನೋ ತೆಗೆದುಕೊಂಡು ಬಂದಳು. ಅದೇನು ಎಂದು ಕೇಳಿದೆ. ಪುಟ್ಟ ಚೀಲ ತೆರೆದು ತೋರಿಸಿದಳು. ಹೋದ ತಕ್ಷಣ ಮಕ್ಕಳು ಓಡಿ ಬರ್ತಾವೆ, ಆಜ್ಜಿ ಏನಾದರೂ ತಂದಿದ್ದಾಳಾ ಎಂದು. ಆದ್ದರಿಂದ ಬಿಸ್ಕಟ್ ತೆಗೆದುಕೊಂಡೆ ಎಂದು ಗ್ಲೂಕೋಸ್ ಬಿಸ್ಕಟ್‌ನ ಪೊಟ್ಟಣವನ್ನು ತೋರಿಸಿದಳು.

ಫಾತಿಮಾ ಹತ್ತಿರ ಇನ್ನೂ ಮಾತಾಡಬಹುದಿತ್ತು. ಆದರೆ ಅಷ್ಟರಲ್ಲಿ ನನ್ನೂರಿನ ಬಸ್ ಬಂತು. ಓಡಿಹೋಗಿ ಹತ್ತಿಕೊಂಡೆವು. ಫಾತಿಮಾ ನಗುತ್ತ ನಮಗೆಲ್ಲ ಕೈಬೀಸುತ್ತಿದ್ದಳು. ಎಂಥ ಆತ್ಮೀಯಳಾದ ಮುದುಕಿ ಅನ್ನಿಸಿತು. ನನ್ನ ಹೆಂಡತಿ ನೀನು ಎಲ್ಲಿ ಹೋದರೂ ನಿನ್ನ ತರಲೆ ಬುದ್ಧಿ ಬಿಡುವುದಿಲ್ಲ ಎಂದಳು.

27-9-91

— ಶೂದ್ರ ಶ್ರೀನಿವಾಸ್

ಓದುಗರ ಓಲೆ / ಬಿಳಿನೋಟ

ಮಾನ್ಯರೆ,

ಡಾ॥ ನಿ. ಮುರಾರಿ ಬಲ್ಲಾಳ ಅವರ "ಮೀಸಲಾತಿಗೆ ಮಾನದಂಡ" ಒಂದು ಅತ್ಯುತ್ತಮ ಲೇಖನ.

ಈ ಲೇಖನ ಡಾ॥ ರಾಮಮನೋಹರ ಲೋಹಿಯಾರವರ ಚಿಂತನೆಗಳನ್ನು ಮತ್ತೆ ಮತ್ತೆ ನೆನಪಿಗೆ ತರುತ್ತದೆ. ವಿಕೇಂದ್ರೀಕೃತ ಆಡಳಿತ, ವಿಕೇಂದ್ರೀಕೃತ ಅರ್ಥವ್ಯವಸ್ಥೆ ಹಾಗೂ ಮೀಸಲಾತಿಯು ಮುಖಾಂತರ ಸಾಮಾಜಿಕ ಸಮಾನತೆಯ ಸಾಧನೆ ಮುಂತಾದ ಸಮಾಜವಾದೀ ಸಿದ್ಧಾಂತಗಳನ್ನು ದಶಕಗಳ ಹಿಂದೆಯೇ ಡಾ॥ ಲೋಹಿಯಾ ರೂಪಿಸಿ ಕೊಟ್ಟವರು. ಅದಕ್ಕೆ ನಿದರ್ಶನವಾಗಿ, ಬರೀ ವರ್ಗಸಮಾನತೆಯ ಯಂತ್ರಾಧಾರಿತ ಉತ್ಪಾದನೆಯ, ಕೇಂದ್ರೀಕೃತ ಆಡಳಿತಗಳ ಟೊಳ್ಳು ಬುನಾದಿಯ ಮೇಲೆ ಕಟ್ಟಿದ ಎಡ ಸಾಮ್ರಾಜ್ಯಗಳು ಇಂದು ಒಂದೊಂದಾಗಿ ಕುಸಿದು ಬೀಳುತ್ತಿರುವುದನ್ನು ಕಾಣುತ್ತಿದ್ದೇವೆ.

ವಿ. ಪಿ. ಸಿಂಗರಿಗೆ 'ಮೀಸಲಾತಿ' ಅವರ ಆಂತರಿಕ ತುಡಿತವೇನಲ್ಲ. ಶರದ್ ಯಾದವ್, ರಾಮವಿಲಾಸ್ ಪಾಸ್ವಾನ್‌ರಂತಹ ಲೋಹಿಯಾ ಶಿಷ್ಯರ ಒಡನಾಟದಿಂದ, ತಮ್ಮ ರಾಜಕೀಯ ಉಳಿವಿಗಾಗಿ ಬಳಸಿಕೊಂಡ ಒಂದು ಪ್ರಬಲ ಅಸ್ತ್ರ ಅಷ್ಟೆ.

ತಮ್ಮ ಲೇಖನದಲ್ಲಿ ಶ್ರೀ ಬಲ್ಲಾಳರು ಹೇಳುವ – 'ಹೆಚ್ಚು ಅಂಕ ಗಳಿಸುತ್ತಿದ್ದ ಅಂಬೇಡ್ಕರರು ಗಾಂಧಿ–ನೆಹರೂಗಿಂತ ಹೆಚ್ಚು ಬುದ್ಧಿವಂತರು ಅನ್ನಬೇಕಾದೀತು' ಎಂಬ ಮಾತನ್ನು ಸದ್ಯದ 'ಮೆರಿಟೋಕ್ರಸಿ'ಯ ಹಿನ್ನೆಲೆಯಲ್ಲಿ ಒಪ್ಪಬಹುದಾದರೂ, ಸಾಮಾಜಿಕ–ಸಾಂಸ್ಕೃತಿಕವಾಗಿ ಡಾ॥ ಅಂಬೇಡ್ಕರ್ ಅವರ ಚಿಂತನೆಗಳು, ನಿಲುವುಗಳು ನಿಸ್ಸಂದೇಹವಾಗಿ ಗಾಂಧಿ-ನೆಹರೂ ಚಿಂತನೆಗಳಿಗಿಂತ ಮೇಲ್ಮಟ್ಟದವು.

ಇನ್ನು ಅರುಣ್‌ಶೌರಿ ಬಳಗದ Facist Journalism (ಬೇಕಾದರೆ ಜನಿವಾರಿಸಂ ಎನ್ನಿ) ಇರುವಂತೆಯೇ ನಮ್ಮ ಸಾಹಿತ್ಯ-ಸಾಂಸ್ಕೃತಿಕ ರಂಗಗಳಲ್ಲಿ Facist ಪ್ರತಿಭೆಗಳೂ, Facist ಪ್ರಥಮ ದರ್ಜೆ ವಿಮರ್ಶೆಗಳೂ ವಿಜೃಂಭಿಸುತ್ತಿರುವುದನ್ನೂ ಕಾಣಬಹುದು.

— ಬಿ. ರಾಜಣ್ಣ

ಬಿ. ರಾಜಣ್ಣ, 133/ಸಿ, ಹುಡ್ಕೊ ಕಾಲೋನಿ, ಭದ್ರಾವತಿ–577 301

ಪ್ರಿಯ ಶ್ರೀನಿವಾಸ್–

ಶೂದ್ರ ಸೆ. 91ರ ಸಂದರ್ಶನ ಗಂದ್ಲಾಟದಲ್ಲಿ ಗೋಕಾಕರ ಬಗ್ಗೆ ನಿಮ್ಮ ಅನಿಸಿಕೆಗಳಿಗೆ ನನ್ನ ಸಹಮತವಿದೆ. ಇಂತಹ ಸನ್ನಿವೇಶಗಳಲ್ಲಿ ಇತರರು ಹೇಳಲು ಹಿಂದೆ ಮುಂದೆ ನೋಡುವ ಮಾತುಗಳನ್ನು ತಾವು ಸಹಜವಾಗಿ ಹೇಳಿಬಿಡುತ್ತೀರಿ–ಯಾವುದೇ ಕೊಂಕು ಕಟಕಿಯಿಲ್ಲದೆ. ನಿಮ್ಮ ಈ ಪಾರದರ್ಶಕತೆ ನನಗೆ ಮೆಚ್ಚುಕೆಯಾಗಿದೆ. ಈ ಸಲದ ಖಾಸಗಿ ಪತ್ರ "ಆ ರಾತ್ರಿ"ಯ ಅನುಭವದಲ್ಲಿ ಒಂದು ಪ್ರಶ್ನೆ ಹಾಗೇ ಉಳಿಯಿತು. ಮುಂದೆ ಆಕೆ ಎಲ್ಲಿ ಹೋದಳು ? ನಿಮ್ಮ "ಕನಸಿಗೊಂದು ಕಣ್ಣು" ವಿಶಿಷ್ಟವಾದುದು. ನಿಮಗಾಗುವ ಅನುಭವಗಳು ನಮಗೆ ಆಗುತ್ತಲಿಲ್ಲವಲ್ಲ ಎಂದು ಒಮ್ಮೊಮ್ಮೆ ಅಸೂಯೆ ಉಂಟಾಗುತ್ತದೆ.

— ಮು. ಅ. ಶ್ರೀರಂಗ, ಚನ್ನಪಟ್ಣ

ಪ್ರಿಯ ಸಂಪಾದಕರೆ,

ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ತಾ. ಸಿ. ತಿಮ್ಮಯ್ಯರವರ "ನನ್ನ ಶಾಲೆ ಪ್ರಯೋಗಶಾಲೆ" ಎಂಬ ಕವನ ಪ್ರಸ್ತುತ ಶಿಕ್ಷಣಾವಸ್ಥೆಗೆ ಕೈಗನ್ನಡಿ ಹಿಡಿದಂತಿದೆ. ಇಂದಿನ ರಾಜಕೀಯದಿಂದ ಕಲುಗೆಟ್ಟು ಹೋಗಿರುವ ಶಿಕ್ಷಣವನ್ನು ಪ್ರತಿಬಿಂಬಿಸುವ ಇಂತಹ ಕವನಗಳು ಇನ್ನೂ ಹೆಚ್ಚಾಗಿ ಪ್ರಕಟವಾಗಲಿ. ಮೇಲಿನ ಕವನ ಬರೆದ ಕವಿವರ್ಯರಿಗೂ ಹಾಗೂ ಅದನ್ನು ಪ್ರಕಟಿಸಿದ ಸಂಪಾದಕರಾದ ತಮಗೂ ಅಭಿನಂದನೆಗಳು.

16-9-91

ವೀಣಾ ಎನ್.ವಿ., ಹಾಸನ

ಮಾನ್ಯರೇ,

ಸೆಪ್ಟೆಂಬರ್ ತಿಂಗಳ ಶೂದ್ರದಲ್ಲಿ ಮೂಡಿಬಂದ ಮೀಸಲಾತಿಗೆ "ಮಾನ"ದಂಡ ಡಾ॥ ನಿ. ಮುರಾರಿ ಬಲ್ಲಾಳರ ಅರ್ಥಪೂರ್ಣ ಲೇಖನ ಓದಿ ಮನಮಿಡಿಯಿತು, ದೇಶಾದ್ಯಂತ ಕೋಲಾಹಲವುಂಟು ಮಾಡಿದ ಬಲಿತವರು, ಸಿರಿವಂತ ಪತ್ರಿಕೆಗಳು, ಇಂಗ್ಲೀಷ್ ಬಲ್ಲವರು, ತಲೆಯಿಲ್ಲದ ಪುಢಾರಿಗಳು ಹೇಗೆ ಹಿಂದುಳಿದವರನ್ನು ತುಳಿಯಬಹುದೋ ಹಾಗೆ ಆತಂಕ ಹುಟ್ಟಿಸಿ ತುಳಿದರು. ಹಿಂದುಳಿದವರೂ ಸಹ ಉಪಯೋಗದ ಅರಿವು ಮರೆತು ಕಾನೂನು ಜಾರಿಗೊಳಿಸಿದ ಅಧಿಕಾರಸ್ಥರಿಗೆ ಗಮನಾರ್ಹ ಬೆಂಬಲ ನೀಡಲಿಲ್ಲ. ದುರ್ದೈವದ ಸಂಗತಿ.

ಜನಪ್ರಿಯ ಹೆಚ್ಚು ಪ್ರಸಾರದ ಪತ್ರಿಕೆಗಳು ಇಂತಹ ಅಮೂಲ್ಯವಾದ ಲೇಖನ ಪ್ರಕಟಿಸುತ್ತಿರಲಿಲ್ಲ.

ಜಾಗೃತ ಭಾವನೆಯಲ್ಲಿ ಮುಂದಿರುವ ಶೂದ್ರ ಪತ್ರಿಕೆ ಪ್ರಕಟಿಸಿ ತುಂಬಾ ಅನುಕೂಲ ಮಾಡಿದೆ, ಸಂಪಾದಕರಿಗೆ, ಲೇಖಕರಿಗೆ ವಂದನೆಗಳು.

— ಎಚ್.ಕೆ. ನರಸಿಂಹಮೂರ್ತಿ, ಗುಬ್ಬಿ ಹೊಸಹಳ್ಳಿ

ಪ್ರಿಯರೆ,

ಈ ಸಲದ 'ಶೂದ್ರ' (ಸೆ. 91) ದಲ್ಲಿ ರಾಮದಾಸ್ ಅವರ 'ಸೀಳುನಾಯಿಗಳು ದೀಪಾವಳಿ ಹಬ್ಬ ಆಚರಿಸಿದ್ದು' ಓದಿದೆ. ಮೈ ರೋಮಾಂಚನವಾಯಿತು. ಅವರ ಹಿಂದಿನ 'ಹುಲಿಯ ಬಾಯಿಂದ ಹಂಡುಗಿಯನ್ನು ಬಿಡಿಸಿದ್ದ'ನ್ನು ಓದಿ ಹೀಗೇ ಆಗಿತ್ತು. ನನ್ನ ವಿದ್ಯಾರ್ಥಿಗಳಿಗೆ ನಾನು ಇದನ್ನು ತರಗತಿಗಳಲ್ಲಿ ವಿವರಿಸುವುದುಂಟು. ಮಗಳನ್ನು ಉಳಿಸಲು ತಾಯೊಬ್ಬಳು ಹುಲಿಗೆ ಕೋಲಿನಲ್ಲಿ ಬಡಿದ ದೃಶ್ಯ Sublime ಆಗಿದೆ. (A. C. Bradley ಎಂಬುವನು ಗುಬ್ಬಿಮರಿಯನ್ನು ನಾಯಿ ತಿನ್ನಬಂದಾಗ ತಾಯಿಗುಬ್ಬಿ ನಡೆಸಿದ ಹೋರಾಟದ ಇಂಥದೇ ಚಿತ್ರ ಕೊಟ್ಟು ಈ ಶಬ್ದ Sublime ಬಳಸಿದ್ದಾನೆ.) ಈ ಲೇಖನದಲ್ಲಿ 'ಒಂದು ಜೀವವನ್ನು ಹಲವಾರು ಜೀವಗಳು ಕಣ್ಣಲ್ಲಿ ಕಣ್ಣಿಟ್ಟು.... ಕುತೂಹಲ' ಎಂಬ ಸಾಲುಗಳು Poetic ಆಗಿವೆ. ಈ ವಿಶ್ಲೇಷಣೆ ಭೀತಿಯನ್ನು ತರುವಷ್ಟು ಉಸಿರುಗಟ್ಟಿಸಿತು. ಅವರ 'ವ್ಯಾಮೋಹ' ನನಗಿನ್ನೂ ಸಿಕ್ಕಿಲ್ಲ. ಅದನ್ನು ಓದಬೇಕೆಂಬ ಆಸೆ ಈಗ ಮತ್ತಷ್ಟು ಬಲಗೊಂಡಿತು. ಕುವೆಂಪು ಕಾದಂಬರಿ ಲೋಕದಲ್ಲಿ ಕಾಣಲಾಗದ ಚಿತ್ರಗಳನ್ನು ಕೊಟ್ಟವರು ಬಹುಶಃ ರಾಮದಾಸ್ ಅವರೇ ಅನಿಸುತ್ತದೆ.

ಡಾ|| ರಹಮತ್ ತರೀಕೆರೆ, ಶಿವಮೊಗ್ಗ

ಪ್ರಿಯರೆ,

ವಿಶ್ವವಿದ್ಯಾಲಯಗಳಲ್ಲಿ ಓದಿ ಉದ್ಯೋಗ ಮಾಡುತ್ತಿರುವ ನಮಗೆ ಅದರ ಸ್ವರೂಪ, ಸಮಸ್ಯೆಗಳ ಬಗ್ಗೆ ಗೊತ್ತೇ ಇರಲಿಲ್ಲ. ಶ್ರೀಪತಿ ತಂತ್ರಿಯವರು ಈ ವಿಷಯದ ಬಗ್ಗೆ ತುಲನಾತ್ಮಕವಾಗಿ ಬರೆದು ಇಂದಿನ ವಿಶ್ವವಿದ್ಯಾಲಯಗಳು ವಿನಾಶದ ಹಾದಿಯನ್ನು ಹಿಡಿದಿರುವುದನ್ನು ಬಹಳ ನೋವಿನಿಂದ ಲೇಖನ ಮುಗಿಸಿದ್ದಾರೆ. ಮತ್ತು ಅವು ಯಾಕೆ ಮಹತ್ವ ಕಳೆದುಕೊಂಡಿವೆ ಎಂಬುದನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಇಂಥ ಉತ್ತಮ ಲೇಖನ ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

— ತಿಮ್ಮಯ್ಯ ಪೂರ್ಲೆ
ಶಹಾಪುರ, ಗುಲಬರ್ಗಾ ಜಿಲ್ಲೆ

ಮಾನ್ಯರೆ,

ನೀವು ಶಿವಪ್ರಕಾಶರ ಬಗ್ಗೆ ಬರೆದ 'ಕನಸಿಗೊಂದು ಕಣ್ಣು' ಆತ್ಮೀಯವಾಗಿತ್ತು. ಅದು ನಮ್ಮೆಲ್ಲರನ್ನು ಕುರಿತು ಬರೆದಂತಿದೆ. ಆದರೆ ಚರ್ಚೆಯಾಗುವ ಮೊದಲೇ ಕಳೆದ ಸಂಚಿಕೆಯಲ್ಲಿ ಇದಕ್ಕೆ ಸಂಬಂಧಿಸಿದಂತೆ ಪತ್ರಗಳನ್ನು ಇನ್ನು ಪ್ರಕಟಿಸುವುದಿಲ್ಲ ಎಂದಿದ್ದೀರಿ. ಹಾಗೆ ಚರ್ಚೆಯ ಬಾಗಿಲನ್ನು ಯಾಕೆ ಮುಚ್ಚುತ್ತೀರಿ ?

— ರಾಮಕೃಷ್ಣ ನಾಯಕ್, ಬೆಳಗಾವಿ

ಸೂಚನೆ: ಶಿವಪ್ರಕಾಶ್‌ರವರನ್ನು ಕುರಿತು ಬರೆಯುವಾಗ ಚಂದ್ರಶೇಖರ ಕಂಬಾರರ ದೂರವಾಣಿ ಮಾತಿನಿಂದ 'ಉತ್ಸವದಲ್ಲಿ ಭಾಗವಹಿಸಿದ್ದಕ್ಕೆ ಕ್ಷಮಾಪಣೆ ಕೇಳಿದರು' ಎಂದು ಬರೆದಿದೆ. ಅದು 'ಭಾಗವಹಿಸಿದ್ದಕ್ಕೆ ವಿಷಾದಿಸುತ್ತೇನೆ' ಎಂದಾಗಬೇಕಿತ್ತು.

ಜಿ. ಕೆ. ಗೋವಿಂದರಾವ್ ಅವರು 'ಶೂದ್ರನಿಗೊಂದು ಪತ್ರ' ಬರೆದಿದ್ದಾರೆ. ಅದನ್ನು ಪ್ರಕಟಿಸಬೇಕೆಂದಿದ್ದೆ. ಆದರೆ ನನಗೆ ಕಳಿಸುವ ಮೊದಲೇ ನೂರಾರು ಪ್ರತಿಗಳನ್ನು ಜೆರಾಕ್ಸ್ ಮಾಡಿಸಿ ಹಂಚಿದ್ದಾರೆ. ಶೂದ್ರ ಪ್ರಕಟಿಸುವುದಿಲ್ಲವೆಂಬ ಗುಮಾನಿ ಇರಬಹುದು. ಆದ್ದರಿಂದ ಪ್ರಕಟಿಸುವ ಅಗತ್ಯವಿಲ್ಲವೆಂದು ಬಿಟ್ಟಿದ್ದೇನೆ. — ಶೂದ್ರ

ಪ್ರಿಯ ಶ್ರೀನಿವಾಸ,

ದಿನಾಂಕ 20-9-1991ರಂದು ರಶಿಯಾದಲ್ಲಾಗಿರುವ ಬದಲಾವಣೆಗಳ ಬಗ್ಗೆ ದೂರದರ್ಶನದಲ್ಲಿ ಮಾತನಾಡುತ್ತ ಬಂದಗದ್ದೆ ರಮೇಶ ಅವರು ಎಲ್ಲಿಯುವರೆಗೆ ಬಡತನ ವಿರುತ್ತದೆಯೋ ಅಲ್ಲಿಯುವರೆಗೆ ಸಮಾಜವಾದ ಇರುತ್ತದೆ ಎಂದು ಹೇಳಿದರು. ಹಾಗೆಂದರೆ ಬಡತನ ತೊಲಗುವುದೇ ಸಮಾಜವಾದ ಎಂದೂ, ಬಡತನ ಹಾಗೂ ಸಮಾಜವಾದ ಗಳೆರಡೂ ಜೊತೆಗೆ ಇರಲಾರವು ಎಂಬ ಅರ್ಥ ಬರುತ್ತದೆ. ಜೊತೆಗೆ ಸಮಾಜವಾದ ಹಾಗೂ ಸಮೃದ್ಧಿಗಳು ಸಮಾನಾರ್ಥಕ ಪರಿಕಲ್ಪನೆಗಳು ಎಂಬ ಅರ್ಥವೂ ಬರುತ್ತದೆ.

ಬಡತನ ಎರಡು ಥರದ್ದಿರಬಹುದು. ಒಂದು ಅನಿವಾರ್ಯವಾದ ಬಡತನ. ಉದಾಹರಣೆಗೆ ಪ್ರಕೃತಿ ಮಾನವನ ಸಮೃದ್ಧ ಬದುಕಿಗೆ ಸಾಕಷ್ಟು ಸಾಧನಗಳನ್ನು ಒದಗಿ ಸದೇ ಇರಬಹುದು. ಎರಡನೆಯದು, ಬಡತನ ಬಯಸಿ ಪಡೆದ ಸ್ಥಿತಿಯೂ ಆಗಿರ ಬಹುದು. ಉದಾಹರಣೆಗೆ ಗಾಂಧಿ ಮುಂತಾದವರು ಹೇಳುವಂತಹ ಅಪರಿಗ್ರಹ ಅಥವಾ ಕ್ರೈಸ್ತ ಮತದ ಎಸ್ಸೀನರು ಬದುಕುತ್ತಿದ್ದಂತಹ ಬಡತನದ ಜೀವನ. ಹಾಗಾದರೆ ಇಂತಹ ಪರಿಸ್ಥಿತಿಗಳಲ್ಲಿ ಸಮಾಜವಾದಕ್ಕೆ ಅರ್ಥವಿಲ್ಲವೇ ?

ಹಾಗೆಯೇ ಸಮೃದ್ಧಿ ಕೂಡ. ಬರಿ ಶ್ರೀಮಂತರು, ಅರೆ ಶ್ರೀಮಂತರು ಹಾಗೂ ಅತ್ಯಂತ ಶ್ರೀಮಂತರು ಇರುವ ಸಮಾಜ ಸಮೃದ್ಧ ಸಮಾಜವೇ. ಏಕೆಂದರೆ ಅಲ್ಲಿ ಎಲ್ಲರೂ ಶ್ರೀಮಂತರೇ, ಸಮೃದ್ಧರೇ, ಯಾರೂ ಬಡವರಲ್ಲ. ಹಾಗಾದರೆ ಇಂತಹ ಸಮಾಜವನ್ನು ಸಮಾಜವಾದೀ ಸಮಾಜ ಎನ್ನಬಹುದೇ ?

ಸಮಾಜವಾದ ಎಂದರೆ ಸಮಾನತೆ. ಬಡತನವನ್ನೇ ಆಗಲಿ, ಸಮೃದ್ಧಿಯನ್ನೇ ಆಗಲಿ ಸಮನಾಗಿ ಹಂಚಿಕೊಳ್ಳುವ ಸಮಾಜವೇ ಸಮಾಜವಾದ. ಆದುದರಿಂದ ಬಡತನ ತೊಲಗಿದ ಮಾತ್ರಕ್ಕೆ, ಸಮೃದ್ಧಿ ಇದ್ದ ಮಾತ್ರಕ್ಕೆ ಸಮಾಜವನ್ನು ಸಮಾಜವಾದಿ ಸಮಾಜ ಎನ್ನಲಾಗದು. ಸಮಾನತೆ ಇರುವ ಸಮಾಜ ಮಾತ್ರ ಸಮಾಜವಾದಿ ಸಮಾಜವಾಗ ಬಲ್ಲದು.

— ಬಾಪು ಹೆದ್ದೂರಶೆಟ್ಟಿ

ಈಗ ಕಂಡ ಪುಸ್ತಕಗಳು

ಆಸಕ್ತಿ (ಲೇಖನಗಳು) : ಕೆ. ಸತ್ಯನಾರಾಯಣ, ಹಂಸಧ್ವನಿ ಪ್ರಕಾಶನ, 599, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560 010, ಬೆಲೆ: 30 ರೂ.

ಕೆ. ಸತ್ಯನಾರಾಯಣ ಅವರು 'ಸಾಹಿತ್ಯ ಮತ್ತು ಸಂಸ್ಕೃತಿ'ಗೆ ಸಂಬಂಧಿಸಿದ ಕೆಲವು ಉತ್ತಮ ಲೇಖನಗಳಿಗೆ ಪುಸ್ತಕದ ಆಕಾರ ಕೊಟ್ಟಿದ್ದಾರೆ. ಈಗಾಗಲೇ ಓದಿದ ಲೇಖನಗಳಾದರೂ ಪುಸ್ತಕರೂಪದಲ್ಲಿ ಮತ್ತೊಮ್ಮೆ ಗಂಭೀರವಾಗಿ ಓದಿ ಚರ್ಚಿಸಬೇಕಾದಂಥದ್ದು.

ಅಕ್ಕಳಿಗೊಂದು ಪ್ರಶ್ನೆ ಮತ್ತು ಇತರ ಕವನಗಳು : ಸಂ. : ಸಿದ್ಧರಾಮ ಹೊನಕಲ್ಲ ಮತ್ತು ತಿಮ್ಮಯ್ಯ ಪೂರ್ಲೆ, 'ಜಾಗೃತ' ಪ್ರಕಾಶನ, ಸಗರನಾಡು ಶಹಾಪುರ, ಕಲಬುರ್ಗಿ ಜಿಲ್ಲೆ, ಬೆಲೆ: 14 ರೂ. ಗಂಭೀರವಾದ ಕಾವ್ಯ ಮತ್ತು ಹೋರಾಟದ ಬಗ್ಗೆ ನಂಬಿಕೆಯುಳ್ಳ ಈ ಸಂಪಾದಕರು ತಮ್ಮ ಕಡೆ ಹೊಸದಾಗಿ ಬರೆಯುತ್ತಿರುವ ಕವಿಗಳ ಒಂದಷ್ಟು ಓದಬಹುದಾದ ಕವನಗಳನ್ನು ಒಂದೆಡೆ ಸೇರಿಸಿದ್ದಾರೆ. ಇವರು ಪುಸ್ತಕಕ್ಕೆ ಪರಿವಿಡಿ ಮುಖ್ಯ ಎಂಬುದನ್ನು ತಿಳಿಯಬೇಕಾಗಿತ್ತು. ಪುಸ್ತಕ ಚೆನ್ನಾಗಿ ಪ್ರಿಂಟಾಗಿದ್ದರೂ ಕವನಗಳ ಶೀರ್ಷಿಕೆಗಳ ಅಕ್ಷರಗಳು ದಪ್ಪವಾಗಿರುವುದರಿಂದ ನೋಡಲು ಚೆನ್ನಾಗಿ ಕಾಣುತ್ತಿಲ್ಲ.

ಆಧುನಿಕ ಕಲೆ : ಪಾಲ್ ಕ್ಲೀ (ಹರ್ಬರ್ಟ್ ರೀಡ್ ಅವರ ಮುನ್ನುಡಿಯೊಂದಿಗೆ) ಅನು : ಕೆ.ಎಸ್. ಶ್ರೀನಿವಾಸಮೂರ್ತಿ, ಕರ್ನಾಟಕ ಲಲಿತಕಲಾ ಅಕಾಡಮಿ, ಬೆಂಗಳೂರು, ಬೆಲೆ: 20 ರೂ. ಆರ್.ಎಂ. ಹಡಪದ್ ಅವರು ಲಲಿತಕಲಾ ಅಕಾಡಮಿ ಅಧ್ಯಕ್ಷರಾಗಿದ್ದಾಗ ಒಂದಷ್ಟು ಉತ್ತಮ ಕೆಲಸ ಮಾಡಿದರು. ಅದರಲ್ಲಿ ಪುಸ್ತಕ ಪ್ರಕಟಣೆ ಒಂದು. ಅವರ ಕಾಲದಲ್ಲಿ ಕೈಗೆ ತೆಗೆದುಕೊಂಡ ಕೃತಿ ಇದು. ಈಗ ಹೊರಗೆ ಬಂದಿದೆ. ಶ್ರೀನಿವಾಸಮೂರ್ತಿಯವರು ಈಗಾಗಲೇ ಶೂದ್ರದ ಓದುಗರಿಗೆ ಪರಿಚಯವಾಗಿದ್ದಾರೆ. ಕಲೆಯ ಬಗ್ಗೆ ತೀವ್ರವಾದ ಅಧ್ಯಯನವನ್ನು ನಡೆಸುತ್ತಿರುವವರು. ಪ್ರಸ್ತುತ ಕೃತಿ ಅರ್ಥಪೂರ್ಣವಾದದ್ದು.

ಪದಕೋಶ (ಮಹಾಕವಿ ಹರಿಹರನ ಕೃತಿಗಳ) : ಡಾ॥ ಬಸವರಾಜ ಮಲಶೆಟ್ಟಿ, ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಮಠ, ಹಂಪಿ, ಬೆಲೆ: 125 ರೂ. ಇದು ಬಸವರಾಜ ಮಲಶೆಟ್ಟರ ಅಧ್ಯಯನಶೀಲ ಕೃತಿ. ಚೆನ್ನಾಗಿ ತಂದಿದ್ದಾರೆ. ಕೇವಲ 285 ಪುಟ (ಕ್ಯಾಲಿಕೋ) ಗಳಿಗೆ 125 ರೂ. ಜಾಸ್ತಿಯಾಯಿತು. ಈ ಬೆಲೆಗೆ ಕೇವಲ ಮಠಗಳಲ್ಲಿ ಮಾತ್ರ ಉಳಿದುಬಿಡುತ್ತವೆ. ವೈಯುಕ್ತಿಕವಾಗಿ ಅಭಿರುಚಿಯುಳ್ಳವರು ತೆಗೆದುಕೊಳ್ಳಲು ಸಾಧ್ಯವಾಗದೇ ಹೋಗಬಹುದು.

ವಿವೇಚನೆ (ಲೇಖನಗಳು): ಎಮ್.ಎಚ್. ನಾಯ[illegible]ಗಿಬ್ಬಗೇಂಪು ಪ್ರಕಾಶನ, ಹೈಚರ್ಚ್ ರೋಡ್, ಕಾ[illegible]ವಾರ, ಬೆಲೆ: 20 ರೂ. ನಾಯ[illegible]ವರು ಸಮಕಾಲೀನ ಸಾಮಾಜಿಕ ಬದುಕಿಗೆ ಸಂಬಂಧಿಸಿದ ನಾನಾ ವಿಷಯಂಗಳನ್ನು [illegible] ಚರ್ಚಿಸಿದ್ದಾರೆ. ಒಟ್ಟು ಚರ್ಚೆ ಸರಳವಾಗಿರುವುದರಿಂದ ವಿದ್ಯಾರ್ಥಿಗಳಿಗೆ ತುಂಬ [illegible]ಪಯುಕ್ತವಾಗ ಬಹುದು.

ಸಮಾಧಿಯ ಮೇಲೆ (ಲೇಖನಗಳು) : ಶ್ರೀ ಪಂಡಿತಾರಾಧ್ಯ ಶಿ[illegible]ಚಾರ್ಯ ಸ್ವಾಮಿಗಳು, ತರಳಬಾಳು ಪ್ರಕಾಶನ, ಸಿರಿಗೆರೆ-577 541, ಬೆಲೆ: 20 ರೂ. [illegible]ಂಡಿತಾ ರಾಧ್ಯ ಶಿವಾಚಾರ್ಯ ಸ್ವಾಮಿಗಳು, ಸ್ವತಂತ್ರವಾಗಿ ಯೋಚಿಸುವ, ಅದರಂತೆ ಬ[illegible]ಕುವ ಸ್ವಾಮಿಗಳು. ಹಾಗೆಯೇ ಬದುಕಿನಂತೆ ಬರವಣಿಗೆಯನ್ನು ರೂಢಿಸಿಕೊಂಡವರು. ಈ ದೃಷ್ಟಿಯಿಂದ ಇದು ಗಂಭೀರವಾದ ಕೃತಿ.

ಅಜ್ಞಾತ ಮುಂಬಯಿ (ಪ್ರವಾಸ ಕಥನ): ರಾಘವೇಂದ್ರ ಪಾಟೀಲ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ, ಬೆಲೆ: 10 ರೂ. ಕಥೆಗಾರ ರಾಘ ವೇಂದ್ರ ಪಾಟೀಲ ಅವರು ಕಥೆಗಾರನ ಧ್ವನಿಯಿಂದಲೇ ಈ ಕೃತಿಯನ್ನು ರಚಿಸಿದ್ದಾರೆ. ಆದ್ದರಿಂದ ಎಷ್ಟೋ ವಿವರಗಳು ನಾಪತ್ತೆಯಾಗಿದ್ದರೂ ಓದಲು ಸಂತೋಷವಾಗುತ್ತದೆ. ಕನ್ನಡದಲ್ಲಿ ಮುಂಬಯಿ ಬಗ್ಗೆ ಮೊದಲನೆಯ ಕೃತಿ ಇರಬಹುದು.

ವಿಮರ್ಶೆಯ ಸವಾಲುಗಳು (ಲೇಖನಗಳು) : ಎಸ್. ಶಿವಾನಂದ್, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ಬೆಲೆ : 27 ರೂ. ಶಿವಾನಂದ ಅವರು ತಮ್ಮ ಬರ ವಣಿಗೆಯಿಂದ ಕಳೆದುಹೋಗಿದ್ದಾರೆ ಎಂದು ಯೋಚಿಸುತ್ತಿರುವಾಗಲೇ ಈ ಪುಸ್ತಕ ಬಂದಿದೆ. ಇವರು ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ವಸ್ತುಸ್ಥಿತಿಯನ್ನು ಆರೋಗ್ಯ ಪೂರ್ಣವಾಗಿ ನೋಡುವಂಥವರು. ಬಹಳ ಹಿಂದೆಯೇ ಬರಬೇಕಾಗಿದ್ದ ಈ ಕೃತಿ ತಡ ವಾಗಿ ಬಂದಿದೆ. ಓದಿ ಚರ್ಚಿಸಬಹುದಾದ ಕೃತಿ.

ಮೌನಸ್ಪಂದನ (ಕವನ ಸಂಕಲನ) : ಟಿ. ಎಂ. ಷಡಕ್ಷರಿ, ಚಿನ್ಮಯ ಪ್ರಕಾಶನ, ಬೆಳಗೆರೆ, ಚಳ್ಳಕೆರೆ (ತಾ), ಚಿತ್ರದುರ್ಗ ಜಿಲ್ಲೆ, ಬೆಲೆ : 15 ರೂ. ಷಡಕ್ಷರಿಯವರು ಹೊರಗಿನ ಬದುಕಿಗಾಗಿ ಪರಿತಪಿಸುತ್ತಿರುವವರು. ಹಾಸಿಗೆಯ ಮೇಲೆಯೇ ಓದುತ್ತ, ಬರೆಯುತ್ತ ಅಂತರಂಗದಲ್ಲಿ ಜೀವನವನ್ನು ಪರಿಭಾವಿಸುತ್ತ ಅದನ್ನು ಕಾವ್ಯವಾಗಿಸು ತ್ತಿರುವ ಯುವಕ. ಜಿ. ಎಸ್. ಶಿವರುದ್ರಪ್ಪನವರ ಮಾತಿನಲ್ಲಿ ಹೇಳಬೇಕೆಂದರೆ : "ಕಾಲಿಲ್ಲದ ಈ ಅನಾಥ ಹುಡುಗ. ನಡೆಸುತ್ತಾನೆ ಕವಿತೆಯ ಹಡಗ... ಮೌನಗೀತೆಯಲಿ ಮಿಡಿಯುವನೀತ ನೋವಿನ ತಂತಿಯ ಸ್ವರಸಂಗೀತ."

—ಸಿದ್ಧಾರ್ಥ

'ಶೂದ್ರ'ಕ್ಕೆ ಶುಭಾಶಯಗಳು

ಶುಭದಾ ಪ್ರಕಾಶನ

ಜರಗನಹಳ್ಳಿ, ಬೆಂಗಳೂರು-78

With Best Compliments From :

TRADE LINKS CORPORATION

S.J.P. Road, Bangalore

best compliments from :

RELIANCE HARDWARE MART

M. R. R. Lane, Bangalore

FNP/KRNU/72 No. M (2) PRB 211/73/74

SHOODRA Kannada Monthly

ನವೆಂಬರ್ 1991ರ ಸಂಚಿಕೆಯಲ್ಲಿ :

ಶೋಲೋಕೋವ್–ಡಾ॥ ಸಂಧ್ಯಾರೆಡ್ಡಿ–ಹೆಚ್. ಎಸ್. ಭೀಮನಗೌಡರ್–ಎಂ. ನಾಗಣ್ಣ ಚಿನುಆ ಅಚಿಬೆ – ಬಿದರಹಳ್ಳಿ ನರಸಿಂಹಮೂರ್ತಿ – ಮಾಧವ ಕುಲಕರ್ಣಿ–ಜಿ.ಬಿ. ನಾಗರಾಜು–ಸಿರೀಶ್ ಎಂ. ಎನ್. – ಬಿಳುಮನೆ ರಾಮದಾಸ್ – ಅಗ್ರಹಾರ ಕೃಷ್ಣಮೂರ್ತಿ ಕನಸಿಗೊಂದು ಕಣ್ಣು–ಸುದ್ದಿಯು ಗುದ್ದಾಟ ಇತ್ಯಾದಿ.

ನಮ್ಮ ಹಿರಿಯ ಲೇಖಕರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಶಂಭಾ ಜೋಶಿ ಅವರ ನಿಧನಕ್ಕೆ ಶೂದ್ರ ತನ್ನ ಸಂತಾಪ ಸೂಚಿಸುತ್ತದೆ.

M. Srinivas, Editor for Shoodra, Printed at :
Pallavi Printers, No. 1, 3rd Cross, Balaji Nagar,
Suddagunte Palya, D.R. College Post, Bangalore–29